ಶುಕ್ರವಾರ, ಜನವರಿ 7, 2022 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮುಂಜಾಗ್ರತೆ
ಕೋಲ್ಕತ್ತದ ಸಾಗರ್ ದ್ವೀಪದಲ್ಲಿ ನಡೆಯಲಿರುವ ಗಂಗಾಸಾಗರ್ ಮೇಳದಲ್ಲಿ ಪಾಲ್ಗೊಳ್ಳಲು ಗುರುವಾರ ಬಂದಿದ್ದ ಸಾಧುವಿಗೆ ಪೊಲೀಸರೊಬ್ಬರು ಮುಖಗವಸು ತೊಡಿಸಿದರು

ಸ್ವಾತಂತ್ರ್ಯದ ಅಮೃತ ಮಹೋತ್ಸವ

ಕರ್ನಾಟಕ ಸರ್ಕಾರ

ಶ್ರೀ ನರೇಂದ್ರ ಮೋದಿ
ಸನ್ಮಾನ್ಯ ಪ್ರಧಾನಮಂತ್ರಿಗಳು



ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

ನಗರಾಭಿವೃದ್ಧಿ ಯೋಜನೆಗಳಿಗೆ ಆದ್ಯತೆ

ಬೆಂಗಳೂರು ಹಾಗೂ ಸಣ್ಣ ಮತ್ತು ಮಧ್ಯಮ ಪಟ್ಟಣಗಳ ಸಮಗ್ರ ಅಭಿವೃದ್ಧಿಗೆ ವಿಶೇಷ ಒತ್ತು

ಸ್ಥಳೀಯ ಸಂಸ್ಥೆಗಳಿಗೆ ಅಮೃತ ನಗರೋತ್ಥಾನ ಯೋಜನೆಯಡಿ ಮೂರು ವರ್ಷಗಳಿಗೆ ಒಟ್ಟು ರೂ. 3,885 ಕೋಟಿ

ತೀವ್ರ ವೇಗದ ನಗರೀಕರಣವಿರುವ ಎಲ್ಲಾ ನಗರಗಳು ಹಾಗೂ ಪಟ್ಟಣಗಳಲ್ಲಿ ಮೂಲಭೂತ ಸೌಲಭ್ಯಗಳ ಕೊರತೆಯನ್ನು ನೀಗಿಸಲು ಮಧ್ಯಮ ಮತ್ತು ಸಣ್ಣ ಪಟ್ಟಣಗಳ ಸಮಗ್ರ ಅಭಿವೃದ್ಧಿ ಮೇಲೆ ಗಮನ ಕೇಂದ್ರೀಕರಿಸಲು ರಾಜ್ಯ ಸರ್ಕಾರವು ಈ ಪಟ್ಟಣಗಳಲ್ಲಿ ಪೌರಸೇವೆಗಳನ್ನು ಮೇಲ್ದರ್ಜೆಗೇರಿಸುವುದು ಮತ್ತು ವಿಸ್ತರಿಸುವುದು ಅಗತ್ಯ ಎಂದು ಪರಿಗಣಿಸಿದೆ.

ನಗರ ಸ್ಥಳೀಯ ಸಂಸ್ಥೆಗಳು, ಮೇಲ್ದರ್ಜೆಗೇರಿಸಿರುವ ನಗರ ಸ್ಥಳೀಯ ಸಂಸ್ಥೆಗಳು ಹಾಗೂ ಹೊಸದಾಗಿ ಸೃಜಿಸಲಾಗಿರುವ ಸ್ಥಳೀಯ ಸಂಸ್ಥೆಗಳಲ್ಲಿ ಮೂಲಭೂತ ಸೌಕರ್ಯ ಕಾಮಗಾರಿಗಳನ್ನು **ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ ಯೋಜನೆಯಡಿ** ಕೈಗೆತ್ತಿಕೊಳ್ಳಲು **ರೂ. 3,885 ಕೋಟಿ** ಮೊತ್ತದ ಅನುದಾನಕ್ಕೆ ಅನುಮೋದನೆ ನೀಡಲಾಗಿದೆ.

ಉದ್ದೇಶಿಸಲಾಗಿರುವ ಕ್ರಿಯಾಯೋಜನೆಯ ವಿವರ

ರೂ. ಕೋಟಿಗಳಲ್ಲಿ

ವರ್ಗ	ನಗರ ಸ್ಥಳೀಯ ಸಂಸ್ಥೆಗಳ ಸಂಖ್ಯೆ	ಅಮೃತ ನಗರೋತ್ಥಾನ (ಮುನ್ಸಿಪಾಲಿಟಿ ಯೋಜನೆಗೆ ಪ್ರಸ್ತಾಪಿಸಲಾಗಿರುವ ಮೊತ್ತ)
ಜಿಲ್ಲಾ ಕೇಂದ್ರದ ನಗರಸಭೆಗಳು ಮತ್ತು ಮೊದಲನೇ ದರ್ಜೆ ನಗರಸಭೆಗಳು	23	920
ಇತರೆ ಎಲ್ಲಾ ನಗರಸಭೆಗಳು	38	1,140
ಪುರಸಭೆಗಳು – ಹಾಲಿ ಇರುವ ಪುರಸಭೆಗಳು, ಹೊಸದಾಗಿ ಸೃಜಿಸಲಾದ ಪುರಸಭೆಗಳು ಹಾಗೂ ಪಟ್ಟಣ ಪಂಚಾಯಿತಿಯಿಂದ ಮೇಲ್ದರ್ಜೆಗೇರಿಸಿದ ಪುರಸಭೆಗಳು	124	1,240
ಪಟ್ಟಣ ಪಂಚಾಯತಿಗಳು – ಹಾಲಿ ಇರುವ ಪಟ್ಟಣ ಪಂಚಾಯಿತಿಗಳು ಹಾಗೂ ಹೊಸದಾಗಿ ಸೃಜಿಸಲಾದ ಪಟ್ಟಣ ಪಂಚಾಯಿತಿಗಳು	117	585
ಒಟ್ಟು	**302**	**3885**

ಬೆಂಗಳೂರಿನಲ್ಲಿ ಮೂಲಭೂತ ಸೌಕರ್ಯಕ್ಕೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ರೂ. 6,000 ಕೋಟಿ

75ನೇ ಸ್ವಾತಂತ್ರ್ಯೋತ್ಸವದ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಅಮೃತ ನಗರೋತ್ಥಾನ ಯೋಜನೆಯಡಿ ಬೆಂಗಳೂರಿನ ಮೂಲಸೌಕರ್ಯದ ಅಭಿವೃದ್ಧಿಗಾಗಿ ಬಿಬಿಎಂಪಿಗೆ ಒದಗಿಸುವುದಾಗಿ ಘೋಷಿಸಿದ್ದ ಆಶ್ವಾಸನೆಯಂತೆ ರೂ. 6,000 ಕೋಟಿ ಅನುದಾನಕ್ಕೆ ಸಚಿವ ಸಂಪುಟ ಸಭೆಯಲ್ಲಿ ಅನುಮೋದನೆ.

- ರಸ್ತೆಗಳು, ಕೆರೆಗಳು, ರಾಜ ಕಾಲುವೆಗಳು, ಉದ್ಯಾನವನಗಳು, ಘನತ್ಯಾಜ್ಯ ನಿರ್ವಹಣೆ, ಆಸ್ಪತ್ರೆಗಳು, ಶಾಲಾ ಕೊಠಡಿಗಳು, ಬೀದಿ ದೀಪ ಅಳವಡಿಕೆ ಮತ್ತು ಕೊಳೆಗೇರಿಗಳ ಅಭಿವೃದ್ಧಿ ಇತ್ಯಾದಿಗಳಿಗೆ ಈ ಅನುದಾನ ಬಳಕೆ.
- 5 ವರ್ಷಗಳ ಅವಧಿಯಲ್ಲಿ ಹಂತ ಹಂತವಾಗಿ ಈ ಯೋಜನೆಯ ಅನುಷ್ಠಾನ

ಎಲ್ಲ ವೈಯಕ್ತಿಕ ಮತ್ತು ಸಾಮೂಹಿಕ ಚಟುವಟಿಕೆಗಳಲ್ಲ ಉನ್ನತಿಯನ್ನು ಸಾಧಿಸಲು ನಿರಂತರ ಪ್ರಯತ್ನಿಸಿ ದೇಶದ ಪ್ರಗತಿಗಾಗಿ ಶ್ರಮಿಸುವುದು ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ.

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ವಾರ್ತೆ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ಸಂಕ್ಷಿಪ್ತ ಸುದ್ದಿ

ಸಾಹಿತ್ಯ ಪರೀಕ್ಷೆ ಮುಂದೂಡಿಕೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು 2021–22ನೇ ಸಾಲಿನ ಕನ್ನಡ ಪ್ರವೇಶ, ಕಾವ, ಜಾಣ ಮತ್ತು ರತ್ನ ಪರೀಕ್ಷೆಗಳನ್ನು ಮುಂದೂಡಿದೆ. ಇದೇ 21ರಿಂದ ಮೂರು ದಿನ ಪರೀಕ್ಷೆ ನಡೆಸಲು ತೀರ್ಮಾನಿಸಲಾಗಿತ್ತು.

ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವ ಕಾರಣ ಸರ್ಕಾರ ನಿರ್ಬಂಧ ವಿಧಿಸಿ, ವಾರಾಂತ್ಯ ಕರ್ಫ್ಯೂ ಜಾರಿ ಮಾಡಿದೆ. ಆದ್ದರಿಂದ ನಿಗದಿಯಂತೆ ಪರೀಕ್ಷೆಗಳನ್ನು ನಡೆಸಲು ಸಾಧ್ಯವಾಗುತ್ತಿಲ್ಲ. ಪರೀಕ್ಷಾ ದಿನಾಂಕವನ್ನು ಅನಿರ್ದಿಷ್ಟಾವಧಿಗೆ ಮುಂದೂಡಲಾಗಿದೆ ಎಂದು ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಿಜೆಪಿ ಚಿಂತನ ವರ್ಗ ಮುಂದೂಡಿಕೆ

ಬೆಂಗಳೂರು: ರಾಜ್ಯ ಬಿಜೆಪಿ ಇದೇ 7 ರಿಂದ 9ರವರೆಗೆ ಏರ್ಪಡಿಸಿದ್ದ 'ಚಿಂತನ ವರ್ಗ' ಕಾರ್ಯಕ್ರಮವನ್ನು ಕೋವಿಡ್ ಮೂರನೇ ಅಲೆ ತೀವ್ರಗೊಳ್ಳುತ್ತಿರುವ ಕಾರಣ ಮುಂದೂಡಲಾಗಿದೆ ಎಂದು ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ತಿಳಿಸಿದ್ದಾರೆ.

ಸರ್ಕಾರದ ಸುತ್ತೋಲೆ ಗೌರವಿಸುವುದು ಮತ್ತು ಪಾಲನೆ ಮಾಡುವುದು ಎಲ್ಲರ ಕರ್ತವ್ಯ. ಆದ್ದರಿಂದ ಚಿಂತನ ಸಭೆಯನ್ನು ಮುಂದೂಡಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಕೋಚಿಂಗ್ ಕೇಂದ್ರ ತಾತ್ಕಾಲಿಕ ಮುಚ್ಚಲು ಸೂಚನೆ

ಬೆಂಗಳೂರು: ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವುದರಿಂದ ಬೆಂಗಳೂರು ಉತ್ತರ ಮತ್ತು ದಕ್ಷಿಣ ಶೈಕ್ಷಣಿಕ ಜಿಲ್ಲೆಗಳ ವ್ಯಾಪ್ತಿಯಲ್ಲಿನ 10ನೇ ತರಗತಿಯವರೆಗಿನ ಎಲ್ಲ ಕೋಚಿಂಗ್ ಕೇಂದ್ರಗಳನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸುವಂತೆ ಸೂಚಿಸಲಾಗಿದೆ.

ಜ.6ರಿಂದ 19ರವರೆಗೆ ಅಥವಾ ಮುಂದಿನ ಆದೇಶದವರೆಗೆ ಈ ಸೂಚನೆ ನೀಡಲಾಗಿದೆ. ಈ ಬಗ್ಗೆ ಸೂಕ್ತ ಕ್ರಮಗಳನ್ನು ಕೈಗೊಳ್ಳುವಂತೆ ಡಿಡಿಪಿಐಗಳಿಗೆ ಶಿಕ್ಷಣ ಇಲಾಖೆ ಆಯುಕ್ತರು ಸೂಚಿಸಿದ್ದಾರೆ.

ರಾಜಕಾಲುವೆ ಅಭಿವೃದ್ಧಿ: ಆಡಳಿತ ಪಕ್ಷದ ಕ್ಷೇತ್ರಗಳಿಗೆ ₹1,100 ಕೋಟಿ

ಬಿಜೆಪಿ ಶಾಸಕರ ಕ್ಷೇತ್ರಗಳಿಗೆ ಸಿಂಹಪಾಲು

● ಮಂಜುನಾಥ ಹೆಬ್ಬಾರ್

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯ ರಾಜಕಾಲುವೆಗಳ ಅಭಿವೃದ್ಧಿ ಕಾಮಗಾರಿಗಳಿಗೆ ₹ 1,479.55 ಕೋಟಿ ಅನುದಾನ ಬಿಡುಗಡೆ ಮಾಡುವಂತೆ ಬಿಬಿಎಂಪಿಯು ನಗರಾಭಿವೃದ್ಧಿ ಇಲಾಖೆಗೆ ಪ್ರಸ್ತಾವ ಸಲ್ಲಿಸಿದೆ.

ಬಿಜೆಪಿಯ 15 ಶಾಸಕರು ಪ್ರತಿನಿಧಿಸುವ ಕ್ಷೇತ್ರಗಳಿಗೆ ಒಟ್ಟು₹1,100 ಕೋಟಿ, ಕಾಂಗ್ರೆಸ್ ಶಾಸಕರು ಪ್ರತಿನಿಧಿಸುವ 9 ಕ್ಷೇತ್ರಗಳಿಗೆ ಒಟ್ಟು ₹248 ಕೋಟಿ ಹಾಗೂ ಜೆಡಿಎಸ್ ಶಾಸಕ ಆರ್.ಮಂಜುನಾಥ್ ಪ್ರತಿನಿಧಿಸುವ ದಾಸರಹಳ್ಳಿ ಕ್ಷೇತ್ರಕ್ಕೆ ₹125 ಕೋಟಿ ಅನುದಾನ ಹಂಚಿಕೆಯ ಪ್ರಸ್ತಾವವಿದೆ. ಜಯನಗರ ಹಾಗೂ ಬಿಟಿಎಂ ಬಡಾವಣೆ ಕ್ಷೇತ್ರಗಳಿಗೆ ಯಾವುದೇ ಅನುದಾನದ ಉಲ್ಲೇಖವಿಲ್ಲ. 'ಈ ಸಲವೂ ಬಿಜೆಪಿ ಶಾಸಕರ ಕ್ಷೇತ್ರಗಳಿಗೆ ಶೇ 73ರಷ್ಟು ಅನುದಾನ ಹಂಚಿಕೆ ಮಾಡುವ ಮೂಲಕ ತಾರತಮ್ಯ ಎಸಗಲಾಗಿದೆ' ಎಂದು ಕಾಂಗ್ರೆಸ್‌ನ ಶಾಸಕರು ಆರೋಪಿಸಿದ್ದಾರೆ.

'ಬೊಮ್ಮನಹಳ್ಳಿ, ಬೆಂಗಳೂರು ದಕ್ಷಿಣ, ಯಶವಂತಪುರ, ಕೆ.ಆರ್.ಪುರ, ಮಹದೇವಪುರದಂತಹ ಹೊರವಲಯದ ಕ್ಷೇತ್ರಗಳಲ್ಲಿ ಸಮಸ್ಯೆ ಹೆಚ್ಚು ಇದೆ. ಹೀಗಾಗಿ, ಅಲ್ಲಿಗೆ ಹೆಚ್ಚಿನ ಅನುದಾನ ಹಂಚಿಕೆ ಆಗಿದೆ. ನಗರದ ಹೃದಯ ಭಾಗದ ಕ್ಷೇತ್ರಗಳಿಗೆ ಸಹಜವಾಗಿ ಕಡಿಮೆ ಅನುದಾನ ನೀಡಲಾಗಿದೆ. ಇದರಲ್ಲಿ ತಾರತಮ್ಯ ಆಗಿಲ್ಲ' ಎಂದು ಬಿಜೆಪಿಯ ಶಾಸಕರು ಸಮರ್ಥಿಸಿಕೊಂಡಿದ್ದಾರೆ.

2021ರ ಅಕ್ಟೋಬರ್ ಮತ್ತು ನವೆಂಬರ್ ತಿಂಗಳಿನಲ್ಲಿ ನಿರಂತರವಾಗಿ ಸುರಿದ ಮಳೆಯಿಂದಾಗಿ ಪಾಲಿಕೆ ವ್ಯಾಪ್ತಿಯಲ್ಲಿ ಹಲವು ತಗ್ಗು ಪ್ರದೇಶಗಳು ಜಲಾವೃತಗೊಂಡು ಪ್ರವಾಹ ಉಂಟಾಗಿದೆ. ಅಧಿಕ ಮಳೆಯಿಂದಾಗಿ ರಾಜಕಾಲುವೆಗಳ ತಡೆಗೋಡೆಗಳು ಶಿಥಿಲಗೊಂಡು ಹಾನಿಯಾಗಿದೆ.

ನಗರದಲ್ಲಿ 842 ಕಿ.ಮೀ. ಉದ್ದದ ನಾಲ್ಕು ಪ್ರಮುಖ ರಾಜಕಾಲುವೆಗಳು ಮತ್ತು ದ್ವಿತೀಯ ಹಂತದ 97 ಕಿ.ಮೀ ರಾಜಕಾಲುವೆಗಳು ಇದ್ದು, 2018–19, 2019–20, 2020–21ರಲ್ಲಿ ಮುಖ್ಯಮಂತ್ರಿಗಳ ನವ ನಗರೋತ್ಥಾನ ಯೋಜನೆಯಡಿಯಲ್ಲಿ 112 ಕಿ.ಮೀ. ಉದ್ದದ ಪ್ರಥಮ ಮತ್ತು ದ್ವಿತೀಯ ಹಂತದ ರಾಜಕಾಲುವೆಗಳನ್ನು ಅಭಿವೃದ್ಧಿಪಡಿಸುವ ಕಾಮಗಾರಿಗಳು ಅನುಮೋದನೆಗೊಂಡಿದ್ದವು. ಈ ಕಾಮಗಾರಿಗಳು ಪೂರ್ಣಗೊಳ್ಳುವ ಹಂತದಲ್ಲಿವೆ.

2021ರ ಅಕ್ಟೋಬರ್ ಹಾಗೂ ನವೆಂಬರ್‌ನಲ್ಲಿ ಸುರಿದ ಮಳೆಯಿಂದಾಗಿ ಯಲಹಂಕ ವಲಯದ ಕೇಂದ್ರೀಯ ವಿಹಾರ, ಟಾಟಾ ನಗರ ಮತ್ತು ಜೆ.ಎನ್.ಆರ್.ಸಿ ಆವರಣ, ಮಹದೇವಪುರ ವಲಯದ ಕಸವನಹಳ್ಳಿ, ಗೆದ್ದಲಹಳ್ಳಿ, ಆರ್.ಆರ್. ನಗರ ವಲಯದ ಪ್ರಮೋದ್ ಬಡಾವಣೆ, ದೊಡ್ಡಬಿದಿರಕಲ್ಲು, ಬೊಮ್ಮನಹಳ್ಳಿ ವಲಯದ ಎಚ್.ಎಸ್.ಆರ್ ಬಡಾವಣೆ, ದಾಸರಹಳ್ಳಿ ವಲಯ ಗುಂಡಪ್ಪ ಬಡಾವಣೆ, ದಕ್ಷಿಣ ವಲಯದ ಕೆ.ಪಿ.ಅಗ್ರಹಾರ, ಮನುವನ, ಪಶ್ಚಿಮ ವಲಯದ ಸಣ್ಣಕ್ಕಿ ಬಯಲು, ಪೂರ್ವ ವಲಯದ ಟೆಲಿಕಾಂ ಬಡಾವಣೆ, ನಾಗವಾರಪಾಳ್ಯ ಹಾಗೂ ಇತರೆ ಸ್ಥಳಗಳು ಜಲಾವೃತಗೊಂಡಿದ್ದವು. ಪ್ರವಾಹದಿಂದ ಹಾನಿ ಉಂಟಾಗುವುದನ್ನು ತಪ್ಪಿಸಲು ತುರ್ತಾಗಿ ಪಾಲಿಕೆ ವ್ಯಾಪ್ತಿಯ ವಿವಿಧ ಪ್ರದೇಶಗಳಲ್ಲಿ ಪ್ರಥಮ ಹಂತದ ರಾಜಕಾಲುವೆಗಳು (60.82 ಕಿ.ಮೀ) ಹಾಗೂ ದ್ವಿತೀಯ ಹಂತದ ರಾಜಕಾಲುವೆಗಳು (97.10 ಕಿ.ಮೀ) ಅಭಿವೃದ್ಧಿಪಡಿಸಲು ಒಟ್ಟು 292 ಕಾಮಗಾರಿಗಳನ್ನು ಕೈಗೊಳ್ಳಬೇಕಾಗಿದ್ದು, ಇದಕ್ಕೆ ₹1,479 ಕೋಟಿ ಅನುದಾನದ ಅಗತ್ಯ ಇದೆ. ಇದಕ್ಕಾಗಿ ಕ್ರಿಯಾ ಯೋಜನೆ ಸಿದ್ದಪಡಿಸಲಾಗಿದೆ ಎಂದು ಬಿಬಿಎಂಪಿಯು ಪ್ರಸ್ತಾವದಲ್ಲಿ ತಿಳಿಸಿದೆ.

2021ರ ನವೆಂಬರ್ 22ರಂದು ಸುರಿದ ಭಾರಿ ಮಳೆಯಿಂದ ರಾಜಕಾಲುವೆ ಉಕ್ಕಿಹರಿದು ಪ್ರವಾಹ ಉಂಟಾಗಿದ್ದರಿಂದ ಯಲಹಂಕದ ಕೇಂದ್ರೀಯ ವಿಹಾರ್ ಅಪಾರ್ಟ್‌ಮೆಂಟ್ ಸಮುಚ್ಚಯದ ಪ್ರಾಂಗಣ ಜಲಾವೃತವಾಗಿತ್ತು– ಪ್ರಜಾವಾಣಿ ಚಿತ್ರ

'ಹೊರ ವಲಯದ ಕ್ಷೇತ್ರಗಳಿಗೆ ಆದ್ಯತೆ'

'ಮಳೆಯಿಂದಾಗಿ ಕ್ಷೇತ್ರದ ಹಲವು ಕಡೆ ರಾಜಕಾಲುವೆ ಉಕ್ಕಿ ಹರಿದು ಸಮಸ್ಯೆ ಉಂಟಾಗಿತ್ತು. ಮುಖ್ಯಮಂತ್ರಿಯವರು ಸ್ಥಳ ಪರಿಶೀಲನೆ ನಡೆಸಿ ಅನುದಾನ ಬಿಡುಗಡೆಗೆ ಒಪ್ಪಿಗೆ ಸೂಚಿಸಿದ್ದಾರೆ. ನಗರದ 320 ಕಿ.ಮೀ. ಉದ್ದದ ರಾಜಕಾಲುವೆಗಳ ಅಭಿವೃದ್ಧಿಯಾಗಬೇಕಿದ್ದು, ಸದ್ಯ ತುರ್ತು ಕಾಮಗಾರಿ ಅಗತ್ಯ ಇರುವ 150 ಕಿ.ಮೀ. ರಾಜಕಾಲುವೆಗೆ ಅನುದಾನ ನೀಡಲಾಗುತ್ತಿದೆ. ಮುಂದಿನ ಹಂತದಲ್ಲಿ ಉಳಿದ ರಾಜಕಾಲುವೆಗಳ ಅಭಿವೃದ್ಧಿಗೆ ಅನುದಾನ ಬಿಡುಗಡೆಯಾಗಲಿದೆ. ಹೊರವಲಯದ ಕ್ಷೇತ್ರಗಳಲ್ಲಿ ಹೆಚ್ಚು ಸಮಸ್ಯೆಗಳಿದ್ದು, ಅವುಗಳನ್ನು ಬಗೆಹರಿಸಲು ಆದ್ಯತೆ ನೀಡಲಾಗಿದೆ'

ಎಂ. ಸತೀಶ್ ರೆಡ್ಡಿ, ಬಿಜೆಪಿ ಶಾಸಕ

'ರಸ್ತೆಗಳ ಅಭಿವೃದ್ಧಿಗೆ ಅನುದಾನ ನೀಡಲಿ'

'ದಾಸರಹಳ್ಳಿ ಕ್ಷೇತ್ರದ 11 ಕಿ.ಮೀ. ರಾಜಕಾಲುವೆಗಳ ಅಭಿವೃದ್ಧಿಗೆ ₹130 ಕೋಟಿ ಅನುದಾನ ಬೇಕೆಂದು ಮುಖ್ಯಮಂತ್ರಿ ಸಚಿವಾಲಯಕ್ಕೆ ಪ್ರಸ್ತಾವ ಸಲ್ಲಿಸಿದ್ದೆ. ಅಗತ್ಯ ಅನುದಾನ ಬಿಡುಗಡೆ ಮಾಡುವಂತೆ ಮುಖ್ಯಮಂತ್ರಿಯವರು ಬಿಬಿಎಂಪಿಗೆ ಸೂಚಿಸಿದ್ದರು. ₹125 ಕೋಟಿ ಅನುದಾನ ಸಿಕ್ಕಿದರೆ ರಾಜಕಾಲುವೆಗಳ ಸಮಸ್ಯೆ ಸದ್ಯ ಬಗೆಹರಿಯಲಿದೆ. 110 ಹಳ್ಳಿಗಳು, ವಾರ್ಡ್‌ಗಳ ಹಾಗೂ ಪ್ರಮುಖ ರಸ್ತೆಗಳ ಅಭಿವೃದ್ಧಿಗೆ ಕನಿಷ್ಠ ₹400 ಕೋಟಿಯಾದರೂ ಬೇಕು. ಅದಕ್ಕೂ ಅನುದಾನ ನೀಡುವ ವಿಶ್ವಾಸ ಇದೆ'.

ಆರ್.ಮಂಜುನಾಥ್, ಜೆಡಿಎಸ್ ಶಾಸಕ

'ಒಂದು ರೂಪಾಯಿ ಅನುದಾನವೂ ಇಲ್ಲ'

'ಬಿಟಿಎಂ ಬಡಾವಣೆ ಹಾಗೂ ಜಯನಗರ ಕ್ಷೇತ್ರಗಳ ರಾಜಕಾಲುವೆ ಸಮಸ್ಯೆ ಬಗೆಹರಿಸುವಂತೆ ಮನವಿ ಸಲ್ಲಿಸಲಾಗಿತ್ತು. ಆದರೂ, ಎರಡೂ ಕ್ಷೇತ್ರಗಳಿಗೆ ನಯಾಪೈಸೆ ಅನುದಾನ ನೀಡದೆ ತಾರತಮ್ಯ ಮಾಡಲಾಗಿದೆ. ಈ ಬಗ್ಗೆ ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್ ಹಾಗೂ ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಜತೆ ಮಾತನಾಡಿದ್ದು, ಲೋಪ ಸರಿಪಡಿಸುವುದಾಗಿ ಭರವಸೆ ನೀಡಿದ್ದಾರೆ. ಒಂದೆರಡು ದಿನಗಳಲ್ಲಿ ತಾರತಮ್ಯ ಸರಿ ಮಾಡದಿದ್ದರೆ ಬಿಬಿಎಂಪಿ ಕಚೇರಿ ಎದುರು ಧರಣಿ ನಡೆಸುತ್ತೇವೆ'.

ರಾಮಲಿಂಗಾ ರೆಡ್ಡಿ, ಕಾಂಗ್ರೆಸ್ ಶಾಸಕ

ಕಾಂಗ್ರೆಸ್ ಶಾಸಕರು	ಅನುದಾನ (₹ಕೋಟಿಗಳಲ್ಲಿ)
ಸರ್ವಜ್ಞನಗರ	63.02
ಶಾಂತಿನಗರ	3
ಶಿವಾಜಿನಗರ	7.02
ಹೆಬ್ಬಾಳ	21.34
ಪುಲಕೇಶಿನಗರ	5.20
ಗಾಂಧಿನಗರ	2.10
ಚಾಮರಾಜಪೇಟೆ	9.80
ವಿಜಯನಗರ	77.71
ಬ್ಯಾಟರಾಯನಪುರ	59.10
ಒಟ್ಟು	248.29
ಬಿಜೆಪಿ ಶಾಸಕರು	
ಯಲಹಂಕ	105
ಕೆ.ಆರ್.ಪುರ	94.70
ಮಹದೇವಪುರ	95
ಬೊಮ್ಮನಹಳ್ಳಿ	200
ಬೆಂಗಳೂರು ದಕ್ಷಿಣ	151.30
ಯಶವಂತಪುರ	82.87
ರಾಜರಾಜೇಶ್ವರಿನಗರ	171.34
ಸಿ.ವಿ.ರಾಮನ್ ನಗರ	88.43
ಮಹಾಲಕ್ಷ್ಮಿ ಬಡಾವಣೆ	2.75
ಮಲ್ಲೇಶ್ವರ	2.90
ರಾಜಾಜಿನಗರ	5.10
ಗೋವಿಂದರಾಜನಗರ	50
ಬಸವನಗುಡಿ	22.50
ಪದ್ಮನಾಭನಗರ	22.50
ಚಿಕ್ಕಪೇಟೆ	11
ಒಟ್ಟು	1,100.34
ಜೆಡಿಎಸ್ ಶಾಸಕರು	
ದಾಸರಹಳ್ಳಿ	125.85

ಸುದ್ದಿ 2 ನಿಮಿಷ

'ಶಾಲೆಯಿಂದ ಹೊರಗಿರುವ ಮಕ್ಕಳಿಗೂ ಲಸಿಕೆ ನೀಡಿ'

ಬೆಂಗಳೂರು: ಶಾಲೆಯಿಂದ ಹೊರಗಿರುವ ಮತ್ತು ಶಿಕ್ಷಣವನ್ನು ಅನೇಕ ಕಾರಣಗಳಿಂದ ಸ್ಥಗಿತಗೊಳಿಸಿರುವ ಸಾವಿರಾರು ಮಕ್ಕಳಿಗೂ ಕೋವಿಡ್ ವಿರುದ್ಧ ಲಸಿಕೆ ನೀಡಲು ಕ್ರಮ ಕೈಗೊಳ್ಳಬೇಕು ಎಂದು ಚೈಲ್ಡ್ ರೈಟ್ಸ್ ಟ್ರಸ್ಟ್ ನಿರ್ದೇಶಕ ನಾಗಸಿಂಹ ಜಿ ರಾವ್ ಒತ್ತಾಯಿಸಿದ್ದಾರೆ.

ಕೋವಿಡ್ ಕಾರಣಕ್ಕೆ ಕಳೆದ ಎರಡು ವರ್ಷಗಳಲ್ಲಿ ಶಿಕ್ಷಣ ಕ್ಷೇತ್ರ ಹಲವು ಸಮಸ್ಯೆಗಳನ್ನು ಎದುರಿಸಿದೆ. ವಲಸೆ, ನಿರುದ್ಯೋಗ, ಪೋಷಕರ ಬಡತನದಿಂದ ಸಾವಿರಾರು ಮಕ್ಕಳು ಶಾಲೆ ತೊರೆದು ಬಾಲಕಾರ್ಮಿಕರಾಗಿದ್ದಾರೆ. ಸಾವಿರಾರು ಮಕ್ಕಳು ಹೊಲಗದ್ದೆಗಳಲ್ಲಿ ದುಡಿಯುತ್ತಿದ್ದಾರೆ. ಶಾಲೆಯಿಂದ ಹೊರಗಿರುವ ಈ ಮಕ್ಕಳು ಅನೇಕ ರೀತಿಯ ಶೋಷಣೆಗಳಿಗೆ ಮತ್ತು ರೋಗರುಜಿನಗಳಿಗೆ ಬಲಿಯಾಗುವ ಸಾಧ್ಯತೆಗಳು ಹೆಚ್ಚಾಗಿರುತ್ತದೆ. ಹೀಗಾಗಿ, ಈ ಮಕ್ಕಳ ಆರೋಗ್ಯದ ರಕ್ಷಣೆಗೆ ಸರ್ಕಾರ ಕ್ರಮ ಕೈಗೊಳ್ಳಬೇಕಾದ ಅಗತ್ಯವಿದೆ ಎಂದು ಹೇಳಿದ್ದಾರೆ.

ಕೆಲವು ಶಾಲೆಗಳಲ್ಲಿ ಮಕ್ಕಳ ಪೋಷಕರಿಗೆ ದೂರವಾಣಿ ಕರೆ ಮಾಡಿ ಲಸಿಕೆ ಹಾಕಿಸಿಕೊಳ್ಳಲು ಮಕ್ಕಳನ್ನು ಕರೆತರುವಂತೆ ತಿಳಿಸುತ್ತಿದ್ದಾರೆ. ಆದರೆ, ಬಹುತೇಕ ಮಕ್ಕಳು ಶಾಲೆಗೆ ಮತ್ತೆ ಬರಲು ಹಿಂಜರಿಯುತ್ತಿದ್ದಾರೆ. ಹೀಗಾಗಿ, ಗ್ರಾಮೀಣ ಪ್ರದೇಶಗಳಲ್ಲಿ ಶಾಲೆಯಿಂದ ಹೊರಗಿರುವ ಮಕ್ಕಳಿಗೆ ಲಸಿಕೆ ನೀಡುವ ಕೆಲಸವನ್ನು ಶಿಕ್ಷಣ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗಳು ಮತ್ತು ಆರೋಗ್ಯ ಇಲಾಖೆ ಒಟ್ಟಾಗಿ ಮಾಡಬೇಕು ಎಂದು ಸಲಹೆ ನೀಡಿದ್ದಾರೆ.

ಸಿಟಿ ಮಾರುಕಟ್ಟೆ ಠಾಣೆಯ 14 ಸಿಬ್ಬಂದಿಗೆ ಕೋವಿಡ್

ಬೆಂಗಳೂರು: 'ಸಿಟಿ ಮಾರುಕಟ್ಟೆ ಪೊಲೀಸ್ ಠಾಣೆಯ 14 ಸಿಬ್ಬಂದಿಗೆ ಕೋವಿಡ್ ದೃಢಪಟ್ಟಿದೆ. ಹೀಗಾಗಿ ಇಡೀ ಠಾಣೆಗೆ ಸೋಂಕು ನಿವಾರಕ ದ್ರಾವಣ ಸಿಂಪಡಿಸಲಾಗಿದೆ. ಸೋಂಕಿತರೆಲ್ಲಾ ಪ್ರತ್ಯೇಕ ವಾಸದಲ್ಲಿದ್ದಾರೆ' ಎಂದು ಪಶ್ಚಿಮ ವಿಭಾಗದ ಡಿಸಿಪಿ ಸಂಜೀವ್ ಪಾಟೀಲ ತಿಳಿಸಿದ್ದಾರೆ.

'ಸಿಟಿ ಮಾರುಕಟ್ಟೆ ಠಾಣೆಯಲ್ಲಿ ಒಟ್ಟು 89 ಮಂದಿ ಕಾರ್ಯನಿರ್ವಹಿಸುತ್ತಿದ್ದಾರೆ. ಈ ಪೈಕಿ 43 ಸಿಬ್ಬಂದಿ ಕೋವಿಡ್ ಪರೀಕ್ಷೆ ಮಾಡಿಸಿಕೊಂಡಿದ್ದರು. ಒಬ್ಬರು ಪೊಲೀಸ್ ಸಬ್ ಇನ್‌ಸ್ಪೆಕ್ಟರ್, ಮೂವರು ಎಎಸ್‌ಐ ಹಾಗೂ 10 ಮಂದಿ ಸಿಬ್ಬಂದಿಗೆ ಸೋಂಕು ತಗುಲಿರುವುದು ಖಾತರಿಯಾಗಿದೆ. ಉಳಿದವರನ್ನೂ ಪರೀಕ್ಷೆಗೆ ಒಳಪಡಿಸಲಾಗುತ್ತದೆ' ಎಂದಿದ್ದಾರೆ.

'ಬ್ಯಾಟರಾಯನಪುರ, ಕಾಟನ್‌ಪೇಟೆ ಹಾಗೂ ಉಪ್ಪಾರಪೇಟೆ ಪೊಲೀಸ್ ಠಾಣೆಗಳ ತಲಾ ಒಬ್ಬರಿಗೆ ಕೋವಿಡ್ ತಗುಲಿರುವುದು ಬುಧವಾರ ದೃಢಪಟ್ಟಿದೆ. ಹೀಗಾಗಿ ಠಾಣೆಗಳ ಎಲ್ಲ ಸಿಬ್ಬಂದಿಯನ್ನೂ ಆರ್‌ಟಿ–ಪಿಸಿಆರ್ ಪರೀಕ್ಷೆಗೆ ಒಳಪಡಿಸಲಾಗಿದೆ' ಎಂದು ಹೇಳಿದ್ದಾರೆ.

'ಬುಲ್ಲಿ ಬಾಯಿ': ಮುಖ್ಯ ಸಂಚುಕೋರ ಸೆರೆ

ಪ್ರಜಾವಾಣಿ ವಾರ್ತೆ

ನವದೆಹಲಿ: ದೇಶದ ಗಮನ ಸೆಳೆದಿರುವ 'ಬುಲ್ಲಿ ಬಾಯಿ' ಆ್ಯಪ್ ಪ್ರಕರಣಕ್ಕೆ ಸಂಬಂಧಿಸಿ ದೆಹಲಿ ಪೊಲೀಸರು ಅಸ್ಸಾಂನ ಜೋರ್ಹಾಟ್‌ನಲ್ಲಿ ನೀರಜ್ ಬಿಷ್ಣೋಯಿ ಎಂಬ ಎಂಜಿನಿಯರಿಂಗ್ ವಿದ್ಯಾರ್ಥಿಯನ್ನು ಗುರುವಾರ ಬಂಧಿಸಿದ್ದಾರೆ.

'ನೀರಜ್ ಈ ಪ್ರಕರಣದ ಮುಖ್ಯ ಸಂಚುಕೋರ ಹಾಗೂ ಆ್ಯಪ್‌ಅನ್ನು ಸೃಷ್ಟಿಸಿದಾತ' ಎಂದು ದೆಹಲಿ ಪೊಲೀಸರು ಹೇಳಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿ ಈವರಗೆ ನಾಲ್ವರನ್ನು ಬಂಧಿಸಿದಂತಾಗಿದೆ.

ದೆಹಲಿ ಪೊಲೀಸ್ ವಿಶೇಷ ಘಟಕದ ಅಂಗಸಂಸ್ಥೆಯಾದ 'ಇಂಟೆಲಿಜೆನ್ಸ್ ಫ್ಯೂಜನ್ ಆ್ಯಂಡ್ ಸ್ಟ್ರ್ಯಾಟಜಿಕ್ ಆಪರೇಷನ್ಸ್‌ನ (ಐಎಫ್‌ಎಸ್‌ಒ) ಅಧಿಕಾರಿಗಳು ಅಸ್ಸಾಂನ ಜೋರ್ಹಾಟ್ ನಿವಾಸಿ ನೀರಜ್‌ರನ್ನು ಬಂಧಿಸಿದ್ದಾರೆ. ಈತ ಭೋಪಾಲ್‌ನಲ್ಲಿರುವ ವೆಲ್ಲೂರ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಎರಡನೇ ವರ್ಷದ ಬಿ.ಟೆಕ್ ವಿದ್ಯಾರ್ಥಿ.

ಪ್ರಕರಣಕ್ಕೆ ಸಂಬಂಧಿಸಿ ದೆಹಲಿ ಪೊಲೀಸರು ಬಂಧಿಸಿರುವ ಮೊದಲ ಆರೋಪಿ ಈತ. ಪ್ರಕರಣ ಕುರಿತು ಮುಂಬೈ ಸೈಬರ್ ಕ್ರೈಂ ಪೊಲೀಸರು ಸಹ ತನಿಖೆ ನಡೆಸುತ್ತಿದ್ದು, ಈವರೆಗೆ ಮೂವರನ್ನು ಬಂಧಿಸಿದ್ದಾರೆ.

ಶ್ವೇತಾ ಸಿಂಗ್ (18) ಹಾಗೂ ದೆಹಲಿ ವಿ.ವಿಯಲ್ಲಿ ಬಿಎಸ್‌ಸಿ ಅಧ್ಯಯನ ಮಾಡುತ್ತಿರುವ ಮಯಂಕ್ ರಾವಲ್ (20) ಎಂಬ ವಿದ್ಯಾರ್ಥಿಯನ್ನು ಮುಂಬೈ ಪೊಲೀಸರು ಉತ್ತರಾಖಂಡದಲ್ಲಿ ಬಂಧಿಸಿದ್ದಾರೆ. ವಿಶಾಲಕುಮಾರ್ ಝಾ (21) ಎಂಬ ಎಂಜಿನಿಯರಿಂಗ್ ವಿದ್ಯಾರ್ಥಿಯನ್ನು ಬೆಂಗಳೂರಿನಲ್ಲಿ ಬಂಧಿಸಿದ್ದಾರೆ.

'ಗಿಟ್‌ಹಬ್ ವೇದಿಕೆಯಲ್ಲಿ ಬುಲ್ಲಿ ಬಾಯಿ ಆ್ಯಪ್‌ಅನ್ನು ತಾನೇ ಅಭಿವೃದ್ಧಿಪಡಿಸಿದ್ದಾಗಿ ನೀರಜ್ ಬಿಷ್ಣೋಯಿ ತಪ್ಪೊಪ್ಪಿಕೊಂಡಿದ್ದಾನೆ' ಎಂದು ಐಎಫ್‌ಎಸ್‌ಒ ಡಿಸಿಪಿ ಕೆ.ಪಿ.ಎಸ್.ಮಲ್ಹೋತ್ರಾ ಹೇಳಿದ್ದಾರೆ.

'ಈ ಕುರಿತ ತಾಂತ್ರಿಕ ಕುರುಹುಗಳನ್ನು ಆತನ ಲ್ಯಾಪ್‌ಟಾಪ್‌ನಲ್ಲಿ ಪತ್ತೆಮಾಡಲಾಗಿದೆ. ಇಂಟರ್‌ನೆಟ್ ಪ್ರೊಟೊಕಾಲ್ ಡಿಟೇಲ್ ರೆಕಾರ್ಡ್ಸ್ (ಐಪಿಡಿಆರ್) ಹಾಗೂ ಇತರ ಗೇಟ್‌ವೇ ಬಳಸಿ ಪ್ರಕರಣದ ತಾಂತ್ರಿಕ ವಿಶ್ಲೇಷಣೆಯನ್ನೂ ಮಾಡಲಾಗಿದೆ' ಎಂದು ಹೇಳಿದ್ದಾರೆ.

100ಕ್ಕೂ ಹೆಚ್ಚು ಪ್ರಭಾವಿ ಮುಸ್ಲಿಂ ಮಹಿಳೆಯರ ಭಾವಚಿತ್ರಗಳನ್ನು 'ಬುಲ್ಲಿ ಬಾಯಿ' ಹೆಸರಿನ ಆ್ಯಪ್‌ಗೆ ಅಪ್‌ಲೋಡ್ ಮಾಡಿ ಇವರನ್ನು ಹರಾಜಿಗಿಡಲಾಗಿದೆ ಎಂಬ ಒಕ್ಕಣೆಯೊಂದಿಗೆ ಅವಹೇಳನ ಮಾಡಿರುವ ಪ್ರಕರಣ ಇದಾಗಿದೆ.

ಸುದ್ದಿಪೋರ್ಟಲ್ 'ದಿ ವೈರ್'ನ ಪತ್ರಕರ್ತೆ ಇಸ್ಮತ್ ಆರಾ ಎಂಬುವವರು ನೀಡಿದ ದೂರಿನ ಅನ್ವಯ ದೆಹಲಿ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ತನಿಖೆ ಆರಂಭಿಸಿದ್ದಾರೆ. ಇನ್ನೊಂದೆಡೆ, ಮುಂಬೈ ಪೊಲೀಸರು ಸಹ ತನಿಖೆ ನಡೆಸುತ್ತಿದ್ದಾರೆ.

ಈ ಆ್ಯಪ್ ವಿರುದ್ಧ ಆಕ್ರೋಶ ಹೆಚ್ಚುತ್ತಿದ್ದಂತೆಯೇ ಮಧ್ಯಪ್ರವೇಶಿಸಿದ ಕೇಂದ್ರ ಐಟಿ ಸಚಿವ ಅಶ್ವಿನಿ ವೈಷ್ಣವ್ ಅವರು ಕಠಿಣ ಕ್ರಮದ ಭರವಸೆ ನೀಡಿದರು. ನಂತರ ಆ್ಯಪ್‌ಅನ್ನು ನಿರ್ಬಂಧಿಸಲಾಯಿತು.

'ಬುಲ್ಲಿ ಬಾಯಿ' ಕೂಡ 'ಸುಲ್ಲಿ ಡೀಲ್ಸ್' ನಂತೆ ಗಿಟ್‌ಹಬ್ ವೇದಿಕೆಯ ಆ್ಯಪ್ ಆಗಿದ್ದು, ಇವುಗಳಲ್ಲಿ ಸಾಮ್ಯತೆ ಇದೆ ಎಂದು ದೆಹಲಿ ಪೊಲೀಸರು ಹೇಳಿದ್ದಾರೆ. ದೆಹಲಿ ಪೊಲೀಸ್‌ನ ಸೈಬರ್ ಕ್ರೈಂ ವಿಭಾಗವು ಟ್ವಿಟರ್ ಸಂಸ್ಥೆಯನ್ನು ಸಂಪರ್ಕಿಸಿ, ಈ ಆ್ಯಪ್ ಬಗ್ಗೆ ಮೊದಲು ಪೋಸ್ಟ್ ಮಾಡಿದ ವ್ಯಕ್ತಿಯ ಟ್ವಿಟರ್ ಖಾತೆಯನ್ನು ನಿರ್ಬಂಧಿಸಿತ್ತು.

'ಬುಲ್ಲಿ ಬಾಯಿ' ಆ್ಯಪ್ ಪ್ರಕರಣಕ್ಕೆ ಸಂಬಂಧಿಸಿ ದೆಹಲಿ ಪೊಲೀಸರು ಬಂಧಿಸಿರುವ ನೀರಜ್ ಬಿಷ್ಣೋಯಿ (ಎಡಬದಿ) –ಪಿಟಿಐ ಚಿತ್ರ

ಹಸಿರು ಇಂಧನ ಕಾರಿಡಾರ್: ₹12,000 ಕೋಟಿ ವೆಚ್ಚಕ್ಕೆ ಕೇಂದ್ರ ಸಂಪುಟ ಅಸ್ತು

ನವದೆಹಲಿ: ಹಸಿರು ಇಂಧನ ಕಾರಿಡಾರ್‌ನಡಿ ₹12,000 ಕೋಟಿ ವೆಚ್ಚದ ಎರಡನೇ ಹಂತದ ಯೋಜನೆಗೆ ಕೇಂದ್ರ ಸಚಿವ ಸಂಪುಟ ಗುರುವಾರ ಅನುಮೋದನೆ ನೀಡಿದೆ.

ಈ ಯೋಜನೆಯು ವಿದ್ಯುತ್ ಗ್ರಿಡ್‌ಗಳ ಏಕೀಕರಣ ಹಾಗೂ 20 ಗಿಗಾವಾಟ್ ವಿದ್ಯುತ್ ಉತ್ಪಾದನೆ ಮಾಡುವ ಪ್ರಾಜೆಕ್ಟ್‌ಗಳ ಸ್ಥಳಾಂತರ ಒಳಗೊಂಡಿದೆ.

ಅಲ್ಲದೇ, ಈ ಯೋಜನೆಯಡಿ 10,750 ಕಿ.ಮೀ. ವಿದ್ಯುತ್ ಪ್ರಸರಣ ಮಾರ್ಗವನ್ನು ಸೇರಿಸುವ ಹಾಗೂ 27,500 ಮೆಗಾವಾಟ್ ವಿದ್ಯುತ್ ಪರಿವರ್ತನೆ ಸಾಮರ್ಥ್ಯದ ಸಬ್‌ಸ್ಟೇಷನ್‌ಗಳನ್ನು ಸ್ಥಾಪಿಸುವ ಗುರಿ ಹೊಂದಲಾಗಿದೆ.

ಎರಡನೇ ಹಂತದ ಯೋಜನೆಯನ್ನು 2021–22 ರಿಂದ 2025–26ನೇ ಹಣಕಾಸು ವರ್ಷಗಳ ಅವಧಿಯಲ್ಲಿ ಅನುಷ್ಠಾನಗೊಳಿಸಲಾಗುತ್ತದೆ. ಒಟ್ಟು ಯೋಜನಾ ವೆಚ್ಚದಲ್ಲಿ ಕೇಂದ್ರದ ಪಾಲು ಶೇ 33ರಷ್ಟು ಇರಲಿದೆ.

ಕರ್ನಾಟಕ, ಗುಜರಾತ್, ಹಿಮಾಚಲಪ್ರದೇಶ, ಕೇರಳ, ರಾಜಸ್ಥಾನ, ತಮಿಳುನಾಡು ಹಾಗೂ ಉತ್ತರಪ್ರದೇಶ ರಾಜ್ಯಗಳಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ ಎಂದು ಕೇಂದ್ರ ಇಂಧನ ಸಚಿವಾಲಯದ ಪ್ರಕಟಣೆ ತಿಳಿಸಿದೆ.

ಯೋಜನೆಯ ಮೊದಲ ಹಂತವನ್ನು ₹ 10,142 ಕೋಟಿ ವೆಚ್ಚದಲ್ಲಿ ಅನುಷ್ಠಾನಗೊಳಿಸಲಾಗುತ್ತಿದ್ದು, ಶೇ 80ರಷ್ಟು ಕಾಮಗಾರಿ ಪೂರ್ಣಗೊಂಡಿದೆ ಎಂದೂ ಸಚಿವಾಲಯ ತಿಳಿಸಿದೆ.

ರಾಜ್ಯದಾದ್ಯಂತ ರಾತ್ರಿ ಕರ್ಫ್ಯೂ, ವಾರಾಂತ್ಯದ ಕರ್ಫ್ಯೂಗೆ ಸಚಿವರ ವಿರೋಧ

ಕೋವಿಡ್ ಮಾರ್ಗಸೂಚಿ ಪರಿಷ್ಕಾರ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ನಿಯಂತ್ರಣಕ್ಕಾಗಿ ರಾಜ್ಯದಾದ್ಯಂತ ರಾತ್ರಿ ಕರ್ಫ್ಯೂ ಮತ್ತು ವಾರಾಂತ್ಯದ ಕರ್ಫ್ಯೂ ಜಾರಿಗೊಳಿಸಿರುವ ನಿರ್ಧಾರಕ್ಕೆ ಹಲವು ಸಚಿವರು ಸಂಪುಟ ಸಭೆಯಲ್ಲೇ ತೀವ್ರ ವಿರೋಧ ವ್ಯಕ್ತಪಡಿಸಿದ್ದಾರೆ. ಈ ಕಾರಣದಿಂದ ಮುಂದಿನ ವಾರವೇ ಮಾರ್ಗಸೂಚಿ ನಿಯಮಗಳನ್ನು ಪರಿಷ್ಕರಿಸಲು ತೀರ್ಮಾನಿಸಲಾಗಿದೆ.

ಜನವರಿ 4ರಂದು ಹೊರಡಿಸಿರುವ ಮಾರ್ಗಸೂಚಿ ಪ್ರಕಾರ, ಜ.19 ರವರೆಗೂ ರಾಜ್ಯದಲ್ಲಿ ರಾತ್ರಿ ಕರ್ಫ್ಯೂ ಮತ್ತು ವಾರಾಂತ್ಯದ ಕರ್ಫ್ಯೂ ಜಾರಿಯಲ್ಲಿರಲಿದೆ. ಆದರೆ, ಸಚಿವರ ತೀವ್ರ ವಿರೋಧದ ಕಾರಣದಿಂದ ನಿರ್ಬಂಧಗಳ ಸಡಿಲಿಕೆ ಕುರಿತು ಜ.14 ಅಥವಾ 15ರಂದೇ ಸಭೆಯನ್ನು ನಡೆಸಲು ನಿರ್ಧರಿಸಲಾಗಿದೆ.

ಕೋವಿಡ್ ನಿಯಂತ್ರಣ ಸಂಬಂಧ ಕೆಲವು ಸಚಿವರು ಮತ್ತು ಹಿರಿಯ ಅಧಿಕಾರಿಗಳ ಜತೆ ಮಂಗಳವಾರ ಸಭೆ ನಡೆಸಿದ್ದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ರಾತ್ರಿ ಕರ್ಫ್ಯೂ ಮುಂದುವರಿಕೆ ಹಾಗೂ ವಾರಾಂತ್ಯದ ಕರ್ಫ್ಯೂ ಜಾರಿಗೊಳಿಸುವ ನಿರ್ಧಾರ ಕೈಗೊಂಡಿದ್ದರು. ಕೆ.ಎಸ್.ಈಶ್ವರಪ್ಪ ಸೇರಿದಂತೆ ಕೆಲವು ಸಚಿವರು ಆರಂಭದಲ್ಲೇ ಇದನ್ನು ವಿರೋಧಿಸಿದ್ದರು.

ಗುರುವಾರ ಸಂಪುಟ ಸಭೆಗೂ ಮುನ್ನ ಸುದ್ದಿಗಾರರ ಜತೆ ಮಾತನಾಡಿದ್ದ ಈಶ್ವರಪ್ಪ, 'ಬೆಂಗಳೂರಿನಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಜಾಸ್ತಿ ಇದೆ. ರಾಜ್ಯದ ಎಲ್ಲ ಕಡೆಯೂ ಈ ಪರಿಸ್ಥಿತಿ ಇಲ್ಲ. ರಾಜ್ಯದಾದ್ಯಂತ ರಾತ್ರಿ ಕರ್ಫ್ಯೂ, ವಾರಾಂತ್ಯದ ಕರ್ಫ್ಯೂ ಅಗತ್ಯವಿಲ್ಲ' ಎಂದು ಪ್ರತಿಪಾದಿಸಿದ್ದರು.

'ರಾತ್ರಿ ಕರ್ಫ್ಯೂ ಆದೇಶ ಶಿವಮೊಗ್ಗ ಜಿಲ್ಲೆಯನ್ನು ಇನ್ನೂ ತಲುಪಿಲ್ಲ. ನಮ್ಮ ಜಿಲ್ಲೆಯಲ್ಲಿ ರಾತ್ರಿ ಕರ್ಫ್ಯೂ ಇಲ್ಲ, ಸುಡುಗಾಡೂ ಇಲ್ಲ. ಕೋವಿಡ್ ಇರುವುದು ನಿಜ. ಹಾಗೆಂದು ಎಲ್ಲ ಕಡೆಯಲ್ಲೂ ಕರ್ಫ್ಯೂ ಜಾರಿಗೊಳಿಸಲು ಸಾಧ್ಯವಿಲ್ಲ. ನಿರ್ಧಾರ ಮರು ಪರಿಶೀಲನೆಗೆ ಸಂಪುಟ ಸಭೆಯಲ್ಲೇ ಚರ್ಚಿಸುತ್ತೇನೆ' ಎಂದು ಅಸಮಾಧಾನ ಹೊರಹಾಕಿದ್ದರು.

ಹಲವು ಸಚಿವರ ಸಹಮತ: ಸಂಪುಟ ಸಭೆಯಲ್ಲಿ ಕಾರ್ಯಸೂಚಿ ಮೇಲಿನ ಚರ್ಚೆ ಮುಗಿದ ಬಳಿಕ ವಿಷಯ ಪ್ರಸ್ತಾಪಿಸಿದ ಈಶ್ವರಪ್ಪ, ಜ.4 ರ ಆದೇಶಕ್ಕೆ ಆಕ್ಷೇಪ ವ್ಯಕ್ತಪಡಿಸಿದರು. ಹಲವು ಸಚಿವರು ಅವರ ಮಾತಿಗೆ ದನಿಗೂಡಿಸಿದರು.

'ಕೋವಿಡ್ ಪ್ರಕರಣಗಳು ಹೆಚ್ಚಿನ ಸಂಖ್ಯೆಯಲ್ಲಿ ಇಲ್ಲದ ಜಿಲ್ಲೆಗಳಲ್ಲೂ ಈ ರೀತಿಯ ಬಿಗಿ ಕ್ರಮಗಳನ್ನು ಜಾರಿಗೊಳಿಸಿರುವುದು ಸರಿಯಲ್ಲ. ತಕ್ಷಣವೇ ಮರುಪರಿಶೀಲನೆ ನಡೆಸಿ, ನಿರ್ಬಂಧಗಳನ್ನು ಸಡಿಲಿಸಬೇಕು ಎಂಬುದಾಗಿ ಹಲವು ಸಚಿವರು ಆಗ್ರಹಪಡಿಸಿದರು' ಎಂದು ಮೂಲಗಳು ತಿಳಿಸಿವೆ.

ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಪ್ರತಿಕ್ರಿಯಿಸಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ. ಮಾಧುಸ್ವಾಮಿ, 'ರಾಜ್ಯದಾದ್ಯಂತ ಬಿಗಿ ಕ್ರಮಗಳ ಜಾರಿಗೆ ಹಲವು ಸಚಿವರು ಆಕ್ಷೇಪಿಸಿದರು. ಸೋಂಕಿನ ಪ್ರಮಾಣಜಾಸ್ತಿ ಇರುವೆಡೆ ಇಂತಹ ಕ್ರಮಗಳು ಇರಲಿ, ಸೋಂಕು ಇಲ್ಲದ ಕಡೆ ಬಿಗಿ ಕ್ರಮ ಬೇಡ ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು' ಎಂದರು.

ಸಚಿವರ ಅಭಿಪ್ರಾಯದಂತೆ ಜ.14 ಅಥವಾ 15ರಂದು ಉನ್ನತಮಟ್ಟದ ಸಭೆ ನಡೆಸಿ, ತಾಂತ್ರಿಕ ಸಲಹಾ ಸಮಿತಿಯ ತಜ್ಞರ ಜತೆ ಚರ್ಚಿಸಿ ಮಾರ್ಗಸೂಚಿ ಸಡಿಲಿಕೆ ಕುರಿತು ತೀರ್ಮಾನ ಕೈಗೊಳ್ಳಲು ಸಂಪುಟ ಸಭೆಯಲ್ಲಿ ನಿರ್ಧರಿಸಲಾಗಿದೆ ಎಂದು ಅವರು ತಿಳಿಸಿದರು.

'ಕಾಂಗ್ರೆಸ್ ಪಾದಯಾತ್ರೆಗೆ ಸಂಬಂಧವಿಲ್ಲ'

'ಮೇಕೆದಾಟು ಯೋಜನೆಗೆ ಆಗ್ರಹಿಸಿ ಕಾಂಗ್ರೆಸ್ ನಡೆಸಲಿರುವ ಪಾದಯಾತ್ರೆಗೂ ಕೋವಿಡ್ ನಿಯಂತ್ರಣ ಮಾರ್ಗಸೂಚಿಗೂ ಸಂಬಂಧವಿಲ್ಲ. ಈಗ ಮೇಕೆದಾಟು ಸಂಪರ್ಕಿಸುವ ರಸ್ತೆಗೆ ಸೀಮಿತವಾಗಿ ನಿರ್ಬಂಧ ಜಾರಿಗೊಳಿಸಲಾಗಿದೆಯೇ' ಎಂದು ಸಚಿವ ಜೆ.ಸಿ. ಮಾಧುಸ್ವಾಮಿ ಪ್ರಶ್ನಿಸಿದರು. 'ಕೋವಿಡ್ ಪ್ರಕರಣಗಳು ಹೆಚ್ಚಾಗುತ್ತಿವೆ. ಆರಂಭದಲ್ಲೇ ನಿಯಂತ್ರಿಸಬೇಕು ಎಂಬುದು ಸರ್ಕಾರದ ಆಶಯ. ಕಾಂಗ್ರೆಸ್‌ನವರು ಪಾದಯಾತ್ರೆ ಮಾಡುವುದಾದರೆ ಮಾಡಲಿ' ಎಂದು ಹೇಳಿದರು.

90 ಸಾವಿರ ದಾಟಿದ ಕೋವಿಡ್ ಪ್ರಕರಣ

ನವದೆಹಲಿ: ದೇಶದಲ್ಲಿ ಗುರುವಾರ ಬೆಳಿಗ್ಗೆ 8 ಗಂಟೆಯ ಹಿಂದಿನ 24 ತಾಸುಗಳಲ್ಲಿ 90,928 ಕೋವಿಡ್ ಪ್ರಕರಣಗಳು ದೃಢಪಟ್ಟಿವೆ. ಒಡಿಶಾದಲ್ಲಿ ಓಮೈಕ್ರಾನ್ ಸೋಂಕಿತ 45 ವರ್ಷದ ಮಹಿಳೆ ಮೃತಪಟ್ಟಿದ್ದು, ಸಾವಿಗೆ ಈ ತಳಿ ಸೋಂಕು ಕಾರಣ ಎಂಬುದು ದೃಢಪಟ್ಟಿಲ್ಲ. 6

ಹೋಟೆಲ್ ಪ್ರತ್ಯೇಕ ವಾಸಕ್ಕೆ ಅವಕಾಶ

ಬೆಂಗಳೂರು: ವಿಮಾನ ನಿಲ್ದಾಣದಲ್ಲಿ ನಡೆಸುವ ಕೋವಿಡ್ ಆರ್‌ಟಿ–ಪಿಸಿಆರ್ ಪರೀಕ್ಷೆಯಲ್ಲಿ ಸೋಂಕಿತರಾಗುವ ವಿದೇಶಿ ಪ್ರಯಾಣಿಕರು ಲಕ್ಷಣ ರಹಿತರಾಗಿದ್ದರೆ ಹಣ ಪಾವತಿಯ ಆಧಾರದಲ್ಲಿ ಅವರನ್ನು ಹೋಟೆಲ್ ಪ್ರತ್ಯೇಕವಾಸಕ್ಕೂ ಒಳಪಡಿಸಬಹುದು ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ಈ ಬಗ್ಗೆ ಇಲಾಖೆಯ ಆಯುಕ್ತ ಡಿ. ರಂದೀಪ್ ಸುತ್ತೋಲೆ ಹೊರಡಿಸಿದ್ದಾರೆ. 'ಕೋವಿಡ್ ಸೋಂಕು ಹೆಚ್ಚು ಇರುವ ದೇಶಗಳಿಂದ ಬರುತ್ತಿರುವವರು ಹಾಗೂ ಆಯ್ದ ವಿದೇಶಿ ಪ್ರಯಾಣಿಕರಿಗೆ ವಿಮಾನ ನಿಲ್ದಾಣದಲ್ಲಿ ಆರ್‌ಟಿ–ಪಿಸಿಆರ್ ಪರೀಕ್ಷೆಗಳನ್ನು ನಡೆಸಲಾಗುತ್ತಿದೆ. ಸೋಂಕಿತರಲ್ಲಿ ಶೇ 90ಕ್ಕೂ ಅಧಿಕ ಮಂದಿಗೆ ಲಕ್ಷಣಗಳು ಬಹಿರಂಗವಾಗಿ ಗೋಚರಿಸುತ್ತಿಲ್ಲ. ಸೌಮ್ಯ ಲಕ್ಷಣಗಳು ಕಾಣಿಸಿಕೊಂಡವರು ಮೂರು ದಿನಗಳಲ್ಲಿ ಚೇತರಿಸಿಕೊಳ್ಳುತ್ತಿದ್ದಾರೆ' ಎಂದು ಡಿ. ರಂದೀಪ್ ತಿಳಿಸಿದ್ದಾರೆ.

'ರಾಜ್ಯದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಏರಿಕೆಯಾಗುತ್ತಿದ್ದು, ತೀವ್ರ ಹಾಗೂ ಗಂಭೀರವಾಗಿ ಅಸ್ವಸ್ಥಗೊಂಡವರಿಗೆ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಅಗತ್ಯವಿರುತ್ತದೆ. ಹೀಗಾಗಿ, ವಿದೇಶದಿಂದ ಬಂದು ಸೋಂಕಿತರಾದ ಲಕ್ಷಣ ರಹಿತರು ಹಾಗೂ ಸೌಮ್ಯ ಲಕ್ಷಣ ಹೊಂದಿರುವವರಿಗೆ ಸರ್ಕಾರಿ ಕೋವಿಡ್ ಆರೈಕೆ ಕೇಂದ್ರಗಳಲ್ಲಿ ಪ್ರತ್ಯೇಕ ವಾಸಕ್ಕೆ ಒಳಪಡಿಸಬೇಕು. ಈ ಕೇಂದ್ರಗಳಲ್ಲಿ ಆರೈಕೆಗೆ ಒಳಗಾದವರು ಹಣ ಪಾವತಿಸಬೇಕಾಗಿಲ್ಲ' ಎಂದು ಸೂಚಿಸಿದ್ದಾರೆ.

12 ಸಾವಿರ ಹಾಸಿಗೆ ಸಜ್ಜುಗೊಳಿಸಲು ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಗರದಲ್ಲಿ ಕೋವಿಡ್ ಸೋಂಕಿತರು ಹಾಸಿಗೆಗಾಗಿ ಆಸ್ಪತ್ರೆಯಿಂದ ಆಸ್ಪತ್ರೆಗೆ ಅಲೆದಾಡುವ ಪರಿಸ್ಥಿತಿ ಎದುರಾಗಬಾರದು. ಆಸ್ಪತ್ರೆಯಲ್ಲಿ ಆಮ್ಲಜನಕ ಕೊರತೆ ಆಗಬಾರದು. ತೀವ್ರ ನಿಗಾ ಘಟಕದ (ಐಸಿಯು) ಕೊರತೆಯೂ ಇರಬಾರದು. ಹಾಸಿಗೆ ಹಂಚಿಕೆ ವ್ಯವಸ್ಥೆ ಪಾರದರ್ಶಕವಾಗಿರಬೇಕು' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಬಿಬಿಎಂಪಿ ವ್ಯಾಪ್ತಿಯಲ್ಲಿ ಕೋವಿಡ್ ಸೋಂಕು ಪ್ರಕರಣಗಳು ತ್ವರಿತಗತಿಯಲ್ಲಿ ಏರಿಕೆಯಾಗುತ್ತಿವೆ. ಇದನ್ನು ಸಮರ್ಥವಾಗಿ ನಿಭಾಯಿಸಲು ಇದೇ 16ರ ವೇಳೆಗೆ ನಗರದಲ್ಲಿ ಕೋವಿಡ್ ಸೋಂಕಿತರ ಚಿಕಿತ್ಸೆಗೆ 12 ಸಾವಿರದಷ್ಟು ಹಾಸಿಗೆಗಳು ಲಭ್ಯವಿರಬೇಕು ಎಂದು ತಾಕೀತು ಮಾಡಿದರು.

ಬಿಬಿಎಂಪಿ ವ್ಯಾಪ್ತಿಯಲ್ಲಿ ಕೋವಿಡ್ ಆಸ್ಪತ್ರೆ ಹಾಸಿಗೆ ನಿರ್ವಹಣಾ ವ್ಯವಸ್ಥೆ (ಸಿಎಚ್‌ಬಿಎಂಎಸ್) ಕುರಿತು ವರ್ಚುವಲ್‌ರೂಪದಲ್ಲಿಗುರುವಾರಏರ್ಪಡಿಸಿದ್ದ ಸಭೆಯಲ್ಲಿ ಅವರು ಮಾತನಾಡಿದರು.

'ನೋಡಲ್ ಅಧಿಕಾರಿಗಳು ತಮ್ಮ ವ್ಯಾಪ್ತಿಯ ಆಸ್ಪತ್ರೆಗೆ ಭೇಟಿ ನೀಡಿ ಪರಿಶೀಲನೆ ನಡೆಸಬೇಕು. ಖಾಸಗಿ ಆಸ್ಪತ್ರೆಗಳಲ್ಲೂ ಕೋವಿಡ್ ಸೋಂಕಿತರ ಚಿಕಿತ್ಸೆಗಾಗಿ ಹಾಸಿಗೆಗಳನ್ನು ಮೀಸಲಿಡಲು ಕಟ್ಟುನಿಟ್ಟಿನ ಸೂಚನೆ ನೀಡಬೇಕು. ಕೋವಿಡ್ ಸೋಂಕಿತರ ಚಿಕಿತ್ಸೆಗಾಗಿ ಖಾಸಗಿ ಆಸ್ಪತ್ರೆಗಳಲ್ಲಿ ಎಷ್ಟು ಹಾಸಿಗೆಗಳು ಲಭ್ಯ ಇವೆ, ಎಷ್ಟು ಭರ್ತಿಯಾಗಿವೆ, ಎಷ್ಟು ಖಾಲಿ ಇವೆ ಎಂಬುದರ ನಿಖರ ಮಾಹಿತಿ ಸಂಗ್ರಹಿಸಬೇಕು' ಎಂದರು.

'ನಗರದಲ್ಲಿ ಪ್ರತಿನಿತ್ಯ 60 ಸಾವಿರದಷ್ಟು ಕೋವಿಡ್ ಪರೀಕ್ಷೆಗಳನ್ನು ನಡೆಸಲಾಗುತ್ತಿದೆ. ಆಸ್ಪತ್ರೆಗಳಿಗೆ ದಾಖಲಾಗುವವರ ಪ್ರಮಾಣ ನಿತ್ಯ ಸರಾಸರಿ 20 ರಿಂದ 60ಕ್ಕೆ ಏರಿಕೆಯಾಗಿದೆ. ಕೋವಿಡ್ ಚಿಕಿತ್ಸೆಗಾಗಿ ಸಿ.ವಿ. ರಾಮನ್ ನಗರದ ಜನರಲ್ ಆಸ್ಪತ್ರೆ, ಕೆ.ಸಿ.ಜನರಲ್ ಆಸ್ಪತ್ರೆ, ಜಯನಗರ ಆಸ್ಪತ್ರೆ ಹಾಗೂ ಬೌರಿಂಗ್ ಆಸ್ಪತ್ರೆಗಳನ್ನು ಮೀಸಲಿಡಲಾಗಿದೆ. ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿ ಹಾಸಿಗೆಗಳ ಲಭ್ಯತೆ ಸಾಕಷ್ಟಿದೆ. ನಗರದಲ್ಲಿ ಕೊರೊನಾ ಪ್ರಕರಣಗಳ ಹೆಚ್ಚಳವಾದರೂ ಗಾಬರಿ ಪಡುವ ಅಗತ್ಯವಿಲ್ಲ. ಖಾಸಗಿ ಆಸ್ಪತ್ರೆಗಳಲ್ಲಿ ಹಾಸಿಗೆ ವ್ಯವಸ್ಥೆ ಮಾಡಿಕೊಳ್ಳುವ ಮೂಲಕ ಪರಿಸ್ಥಿತಿಯನ್ನು ನಿಭಾಯಿಸಬಹುದು' ಎಂದು ವಿಶ್ವಾಸ ವ್ಯಕ್ತಪಡಿಸಿದರು.

'ಸೋಂಕಿತರಿಗೆ ಯಾವ ತರಹದ ಚಿಕಿತ್ಸೆಯ ಅವಶ್ಯಕತೆ ಇದೆ ಎಂದು ನಿರ್ಧರಿಸುವ ಸಲುವಾಗಿ ಪಾಲಿಕೆಯ ಟೆಲಿ ಟ್ರಯಾಜಿಂಗ್ ತಂಡ ಹಾಗೂ ಆಯಾ ವಾರ್ಡ್ ವ್ಯಾಪ್ತಿಯ ಸಂಚಾರ ಟ್ರಯಾಜಿಂಗ್ ತಂಡಗಳು ಅವರ ಆರೋಗ್ಯ ಪರಿಸ್ಥಿತಿ ಅವಲೋಕಿಸಲಿವೆ. ಅವಶ್ಯಕತೆ ಇರುವ ಸೋಕಿತರನ್ನು ಮಾತ್ರ ಚಿಕಿತ್ಸೆಗೆ ಆಸ್ಪತ್ರೆಗೆ ದಾಖಲಿಸಲು ಕ್ರಮ ಕೈಗೊಳ್ಳಬೇಕು. ಕೆಲವು ಸೋಂಕಿತರಲ್ಲಿ ರೋಗ ಲಕ್ಷಣ ಇರುವುದಿಲ್ಲ. ಅಂತಹವರು ಮನೆಯಲ್ಲಿಯೇ ಚಿಕಿತ್ಸೆ ಪಡೆದು ಗುಣಮುಖರಾಗಬಹುದು. ಟ್ರಯಾಜಿಂಗ್ ಸರಿಯಾಗಿ ನಡೆದರೆ ಅರ್ಧ ಸಮಸ್ಯೆ ಬಗೆಹರಿದಂತೆ' ಎಂದರು.

'ಟ್ರಯಾಜಿಂಗ್ ನಡೆಸಲು ಹೆಚ್ಚುವರಿ ಸಿಬ್ಬಂದಿಯನ್ನು ವಲಯವಾರು ನಿಯೋಜನೆ ಮಾಡಿಕೊಳ್ಳಬೇಕು. ಜೊತೆಗೆ ವಲಯ ಸಂಯೋಜಕರು ಇದರ ಬಗ್ಗೆ ನಿಗಾ ಇಡಬೇಕು' ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸಿಎಚ್‌ಬಿಎಂಎಸ್ ತಂಡದ ನಾಯಕ ಕುಮಾರ್ ಪುಷ್ಕರ್, ಸದಸ್ಯರಾದ ಬಿಶ್ವಜಿತ್ ಮಿಶ್ರ, ವಿಶೇಷ ಆಯುಕ್ತ (ಆರೋಗ್ಯ) ಡಾ. ಕೆ.ವಿ.ತ್ರಿಲೋಕಚಂದ್ರ, ವಲಯ ಆಯುಕ್ತರು ಉಪಸ್ಥಿತರಿದ್ದರು.

'ಆಸ್ಪತ್ರೆಗಳಲ್ಲಿ ಸಹಾಯಕೇಂದ್ರ ಆರಂಭಿಸಿ'

'100ಕ್ಕೂ ಹೆಚ್ಚು ಹಾಸಿಗೆಗಳಿರುವ ಆಸ್ಪತ್ರೆಗಳಲ್ಲಿ ಕೂಡಲೇ ಸಹಾಯಕೇಂದ್ರ ಪ್ರಾರಂಭಿಸಬೇಕು. ನಾಗರಿಕರು ಹಾಗೂ ಸೋಂಕಿತರ ಕಡೆಯವರು ಆಸ್ಪತ್ರೆಗೆ ಬಂದಾಗ ಅವರಿಗೆ ಅಗತ್ಯ ಮಾಹಿತಿಯನ್ನು ಒದಗಿಸುವ ವ್ಯವಸ್ಥೆ ಇಲ್ಲಿರಬೇಕು. ಅದಕ್ಕಾಗಿ ಅಗತ್ಯ ಸಿಬ್ಬಂದಿಯನ್ನು ಹಾಗೂ ಸ್ವಯಂಸೇವಕರನ್ನು ನಿಯೋಜನೆ ಮಾಡಬೇಕು' ಎಂದು ಗೌರವ್ ಗುಪ್ತ ತಿಳಿಸಿದರು.

'ಎಲ್ಲ ಆಸ್ಪತ್ರೆಗಳಲ್ಲಿ ಆರೋಗ್ಯ ಮಿತ್ರ ಸಿಬ್ಬಂದಿ ಇದ್ದಾರೆಯೇ ಎಂಬುದನ್ನು ಪರಿಶೀಲಿಸಬೇಕು' ಎಂದು ಸೂಚಿಸಿದರು.

ಅಮೃತ ನಗರೋತ್ಥಾನ ಯೋಜನೆಗೆ ಸಂಪುಟ ಸಭೆಯ ಅನುಮೋದನೆ

ನಗರ ಸ್ಥಳೀಯ ಸಂಸ್ಥೆಗಳಿಗೆ ₹ 3,885 ಕೋಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ವಾತಂತ್ರ್ಯದ ಅಮೃತ ಮಹೋತ್ಸವದ ಪ್ರಯುಕ್ತ ಘೋಷಿಸಿರುವ 'ಮುಖ್ಯಮಂತ್ರಿಯವರ ಅಮೃತ ನಗರೋತ್ಥಾನ' ಯೋಜನೆಯಡಿ ರಾಜ್ಯದ 302 ನಗರ ಸ್ಥಳೀಯ ಸಂಸ್ಥೆಗಳಿಗೆ ಐದು ವರ್ಷಗಳ ಅವಧಿಗೆ ₹3,885 ಕೋಟಿ ಅನುದಾನ ಒದಗಿಸುವ ಪ್ರಸ್ತಾವಕ್ಕೆ ಸಂಪುಟ ಸಭೆ ಅನುಮೋದನೆ ನೀಡಿದೆ.

ಬಿಬಿಎಂಪಿಗೆ ಇದೇ ಯೋಜನೆಯಡಿ ₹6,000 ಕೋಟಿ ಒದಗಿಸಲೂ ಗುರುವಾರ ನಡೆದ ರಾಜ್ಯ ಸಂಪುಟ ಸಭೆಯು ತೀರ್ಮಾನಿಸಿದೆ.

2021ರ ಆಗಸ್ಟ್ 15ರಂದು ಸ್ವಾತಂತ್ರ್ಯ ದಿನಾಚರಣೆ ಸಮಾರಂಭದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಈ ಯೋಜನೆಯನ್ನು ಪ್ರಕಟಿಸಿದ್ದರು. ಐದು ವರ್ಷಗಳಲ್ಲಿ ಯೋಜನೆ ಜಾರಿಗೆ ತೀರ್ಮಾನಿಸಿದ್ದು, ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳಲ್ಲಿ ಕ್ರಿಯಾಯೋಜನೆ ರೂಪಿಸುವುದಕ್ಕೆ ತಾತ್ವಿಕ ಅನುಮೋದನೆ ನೀಡಲಾಗಿದೆ.

ಸಂಪುಟ ಸಭೆಯ ಬಳಿಕ ಪತ್ರಿಕಾ ಗೋಷ್ಠಿಯಲ್ಲಿ ಮಾಹಿತಿ ನೀಡಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ.ಮಾಧುಸ್ವಾಮಿ, 'ಅಮೃತ ನಗರೋತ್ಥಾನ ಯೋಜನೆಯಡಿ ಒಂದನೇ ದರ್ಜೆಯ ನಗರಸಭೆಗಳಿಗೆ ತಲಾ ₹ 40 ಕೋಟಿ, ಇತರ ನಗರಸಭೆಗಳಿಗೆ ತಲಾ ₹ 30 ಕೋಟಿ, ಪುರಸಭೆಗಳಿಗೆ ತಲಾ ₹ 10 ಕೋಟಿ ಮತ್ತು ಪಟ್ಟಣ ಪಂಚಾಯಿತಿಗಳಿಗೆ ತಲಾ ₹ 5 ಕೋಟಿ ಅನುದಾನ ಒದಗಿಸಲಾಗುವುದು' ಎಂದರು.

23 ಜಿಲ್ಲಾ ಕೇಂದ್ರಗಳಲ್ಲಿರುವ ಹಾಗೂ ಒಂದನೇ ದರ್ಜೆಯ ನಗರಸಭೆಗಳಿಗೆ ₹ 920 ಕೋಟಿ ಮತ್ತು ಇತರ 38 ನಗರಸಭೆಗಳಿಗೆ ₹ 1,140 ಕೋಟಿ ಅನುದಾನ ದೊರಕಲಿದೆ. 124 ಪುರಸಭೆಗಳಿಗೆ ಒಟ್ಟು ₹ 1,240 ಕೋಟಿ ಹಾಗೂ 117 ಪಟ್ಟಣ ಪಂಚಾಯಿತಿಗಳಿಗೆ ಒಟ್ಟು ₹ 585 ಕೋಟಿ ಅನುದಾನ ಒದಗಿಸಲಾಗುತ್ತದೆ.

ಈ ಅನುದಾನದಲ್ಲಿ ಶೇಕಡ 24.10 ರಷ್ಟು ಮೊತ್ತವನ್ನು ಪರಿಶಿಷ್ಟ ಜಾತಿ, ಪಂಗಡಗಳ ಜನರು ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುವ ಪ್ರದೇಶಗಳ ಅಭಿವೃದ್ಧಿಗೆ ಮೀಸಲಿಡಬೇಕು. ಶೇ 5ರಷ್ಟು ಮೊತ್ತವನ್ನು ಅಂಗವಿಕಲರ ಅಭಿವೃದ್ಧಿ ಶೇ 7.25 ರಷ್ಟು ಅನುದಾನವನ್ನು ಇತರ ಬಡ ಜನರ ಅಭಿವೃದ್ಧಿಗೆ ಕಾಯ್ದಿರಿಸಬೇಕು ಎಂದು ಷರತ್ತು ವಿಧಿಸಲಾಗಿದೆ.

ವಿಶ್ವ ಬ್ಯಾಂಕ್ ಸಾಲ: ಜಲ ಜೀವನ್ ಮಿಷನ್ ಯೋಜನೆಯಡಿ ರಾಜ್ಯದ ಗ್ರಾಮೀಣ ಪ್ರದೇಶದ ಎಲ್ಲ ಮನೆಗಳಿಗೂ ನಲ್ಲಿ ಮೂಲಕ ಕುಡಿಯುವ ನೀರು ಪೂರೈಸುವ ಯೋಜನೆಗೆ ರಾಜ್ಯ ಸರ್ಕಾರದ ಪಾಲನ್ನು ಭರಿಸಲು ವಿಶ್ವ ಬ್ಯಾಂಕ್‌ನಿಂದ ₹ 1,167 ಕೋಟಿ ಸಾಲ ಪಡೆಯುವ ಪ್ರಸ್ತಾವಕ್ಕೂ ಸಂಪುಟ ಅನುಮೋದನೆ ನೀಡಿದೆ.

ಜಲ ಜೀವನ್ ಮಿಷನ್ ಯೋಜನೆಯಡಿ ₹ 9,152 ಕೋಟಿ ವೆಚ್ಚ ಮಾಡಲಾಗುತ್ತಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತಲಾ ಶೇಕಡ 45ರಷ್ಟು ಭರಿಸುತ್ತಿವೆ. ಶೇ 10ರಷ್ಟನ್ನು ಸ್ಥಳೀಯ ಫಲಾನುಭವಿಗಳ ವಂತಿಗೆಯಿಂದ ಭರಿಸಲಾಗುವುದು. ರಾಜ್ಯದ ಪಾಲಿನ ಮೊತ್ತದಲ್ಲಿ ₹ 2,700 ಕೋಟಿಯನ್ನು ನಬಾರ್ಡ್ ನೆರವು ಮತ್ತು ₹ 1,167 ಕೋಟಿಯನ್ನು ವಿಶ್ವ ಬ್ಯಾಂಕ್ ಸಾಲದ ಮೂಲಕ ಭರಿಸಲು ನಿರ್ಧರಿಸಲಾಗಿದೆ. ₹ 1,372 ಕೋಟಿಯನ್ನು 15ನೇ ಹಣಕಾಸು ಆಯೋಗದ ಅನುದಾನದಲ್ಲಿ ಹೊಂದಾಣಿಕೆ ಮಾಡಲಾಗುವುದು ಎಂದು ಸಚಿವರು ತಿಳಿಸಿದರು.

ಶುಶ್ರೂಷಕರ ನೇಮಕ

ಆಯುಷ್ ಇಲಾಖೆಯಲ್ಲಿ ಖಾಲಿ ಇರುವ 177 ಶುಶ್ರೂಷಕರ ಹುದ್ದೆಗಳ ಪೈಕಿ 80 ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಸಂಪುಟ ಒಪ್ಪಿಗೆ ನೀಡಿದೆ. ಉಳಿದ ಹುದ್ದೆಗಳನ್ನು ಕೆಪಿಎಸ್‌ಸಿ ಮೂಲಕ ಭರ್ತಿ ಮಾಡುವ ಪ್ರಕ್ರಿಯೆ ಮುಂದುವರಿಯಲಿದೆ ಎಂದು ಸಚಿವ ಜೆ.ಸಿ.ಮಾಧುಸ್ವಾಮಿ ಹೇಳಿದರು.

'ಗುತ್ತಿಗೆ ಆಧಾರದಲ್ಲಿ ಈಗಾಗಲೇ ಸೇವೆ ಸಲ್ಲಿಸುತ್ತಿರುವ ಶುಶ್ರೂಷಕರಿಗೆ ಪ್ರತಿ ವರ್ಷದ ಸೇವೆಗೆ 2ರಂತೆ ಗರಿಷ್ಠ 20 ಅಂಕಗಳನ್ನು ನೀಡಲಾಗುವುದು. ಒಂದು ವರ್ಷ ಗುತ್ತಿಗೆ ಆಧಾರದಲ್ಲಿ ಸೇವೆ ಸಲ್ಲಿಸಿದ್ದರೂ, ಹತ್ತು ವರ್ಷಗಳ ವಯೋಮಿತಿ ಸಡಿಲಿಕೆ ನೀಡಲು ತೀರ್ಮಾನಿಸಲಾಗಿದೆ' ಎಂದು ತಿಳಿಸಿದರು.

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
ಜನರ ಮುಖದಲ್ಲಿ ಮುಗುಳ್ನಗು ಕಂಡು ಕೃತಜ್ಞರಾದ ರಮೇಶ್ ಭಟ್ ಅವರ ವಿನೀತ ಭಾವ

ಎಸ್ಸೆಸ್ಸೆಲ್ಸಿ: ತಾತ್ಕಾಲಿಕ ವೇಳಾಪಟ್ಟಿ ಪ್ರಕಟ 4

ಪ್ರಾಣ ಹೋದರೂ ನಡಿಗೆ ನಿಲ್ಲಲ್ಲ: ಡಿಕೆಶಿ 6

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
59,602	17,746	₹49,300 (ಬೆಂಗಳೂರು)	₹62,200 (ಬೆಂಗಳೂರು)	74.42

ಕೋವಿಡ್: 5 ಸಾವಿರ ದಾಟಿದ ಪ್ರಕರಣ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಹೊಸ ಪ್ರಕರಣಗಳ ಸಂಖ್ಯೆ ಮತ್ತಷ್ಟು ಹೆಚ್ಚಳವಾಗಿದೆ. ಗುರುವಾರ 5 ಸಾವಿರ ಗಡಿ (5,031) ದಾಟಿದೆ. ಕೊರೊನಾ ಸೋಂಕಿತರಲ್ಲಿ ಒಬ್ಬರು ಮೃತಪಟ್ಟಿರುವುದು ದೃಢಪಟ್ಟಿದೆ.

6

ಆಳ–ಅಗಲ
ಪ್ರಧಾನಿ ರಕ್ಷಣೆ ಎಸ್‌ಪಿಜಿ ಹೊಣೆ

ಚಿನಕುರಳಿ
ಪ್ರಕಾಶ್ ಶೆಟ್ಟಿ

ಅಮೃತ ನಗರೋತ್ಥಾನ: ಹೆಬ್ಬಾಳ ಜಂಕ್ಷನ್ ಸುಧಾರಣೆಗೆ ವಿಶೇಷ ಯೋಜನೆ

ಬಿಬಿಎಂಪಿಗೆ ₹6,000 ಕೋಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಖ್ಯಮಂತ್ರಿಯವರ ಅಮೃತ ನಗರೋತ್ಥಾನ ಯೋಜನೆ' ಅಡಿಯಲ್ಲಿ ಮುಂದಿನ ಮೂರು ವರ್ಷಗಳ ಅವಧಿಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ₹ 6,000 ಕೋಟಿ ವಿಶೇಷ ಅನುದಾನ ಒದಗಿಸುವ ಪ್ರಸ್ತಾವಕ್ಕೆ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

2021ರ ಆಗಸ್ಟ್ 15ರಂದು ನಡೆದ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ಈ ಯೋಜನೆ ಪ್ರಕಟಿಸಿದ್ದರು. ಯೋಜನೆಯ ಅವಧಿಯನ್ನು ಐದು ವರ್ಷಗಳ ಬದಲಿಗೆ ಮೂರು ವರ್ಷಗಳಿಗೆ ಸೀಮಿತಗೊಳಿಸಿ ಅನುಷ್ಠಾನಕ್ಕೆ ತರಲು ಗುರುವಾರ ನಡೆದ ಸಂಪುಟ ಸಭೆಯಲ್ಲಿ ತೀರ್ಮಾನಿಸಲಾಯಿತು. ಇದೇ ವೇಳೆ ನಗರ ಸ್ಥಳೀಯ ಸಂಸ್ಥೆಗಳನ್ನು ಅಭಿವೃದ್ಧಿಪಡಿಸಲು ₹3,885 ಕೋಟಿ ಕ್ರಿಯಾ ಯೋಜನೆಗೂ ರಾಜ್ಯ ಸಚಿವ ಸಂಪುಟ ಒಪ್ಪಿಗೆ ನೀಡಿತು.

ಸಂಪುಟ ಸಭೆಯ ಬಳಿಕ ಪತ್ರಿಕಾಗೋಷ್ಠಿಯಲ್ಲಿ ವಿವರ ನೀಡಿದ ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ, '2022–23ರಿಂದ 2024–25 ರವರೆಗೆ ಈ ಯೋಜನೆ ಜಾರಿಗೆ ಬರಲಿದೆ. ಪ್ರತಿ ವರ್ಷ ಬಿಬಿಎಂಪಿಗೆ ತಲಾ ₹ 2,000 ಕೋಟಿ ವಿಶೇಷ ಅನುದಾನ ಒದಗಿಸಲಾಗುವುದು' ಎಂದರು.

ಹೆಬ್ಬಾಳ ಜಂಕ್ಷನ್ ಸುಧಾರಣೆ: ಅತಿಯಾದ ಸಂಚಾರ ದಟ್ಟಣೆ ಹೊಂದಿರುವ ಹೆಬ್ಬಾಳ ಜಂಕ್ಷನ್ ಸುಧಾರಣೆ ಮತ್ತು ರೈಲು ಮೂಲಸೌಕರ್ಯಗಳ ಅಭಿವೃದ್ಧಿಗೆ ವಿಶೇಷ ಯೋಜನೆಯೊಂದನ್ನು ಜಾರಿಗೊಳಿಸುವ ಪ್ರಸ್ತಾವಕ್ಕೆ ಸಂಪುಟ ಒಪ್ಪಿಗೆ ನೀಡಿದೆ. ಯೋಜನೆಯ ಪ್ರಾಥಮಿಕ ವಿನ್ಯಾಸವನ್ನು ಸಂಪುಟ ಸಭೆಯಲ್ಲಿ ಅನುಮೋದಿಸಿದ್ದು, ವಿಸ್ತೃತ ಯೋಜನಾ ವರದಿ ಸಿದ್ಧಪಡಿಸಲು ಹಸಿರು ನಿಶಾನೆ ದೊರಕಿದೆ.

'ಹೆಬ್ಬಾಳ ಜಂಕ್ಷನ್‌ನಲ್ಲಿ ಸಂಚಾರ ದಟ್ಟಣೆ ತಗ್ಗಿಸುವುದು, ಅಲ್ಲಿಂದ ಕೆ.ಆರ್. ಪುರ ಮತ್ತು ತುಮಕೂರು ರಸ್ತೆಗಳ ಕಡೆಗೂ ಸುಲಭವಾಗಿ ಸಂಚರಿಸಲು ಅವಕಾಶ ಮಾಡಿಕೊಡುವಂತೆ ಮೂಲಸೌಕರ್ಯ ಅಭಿವೃದ್ಧಿಪಡಿಸುವ ದೂರದೃಷ್ಟಿಯ ಯೋಜನೆಯೊಂದನ್ನು ರೂಪಿಸಲಾಗುವುದು. ಇದಕ್ಕಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬಿಬಿಎಂಪಿ, ಬಿಎಂಟಿಸಿ, ಬೆಸ್ಕಾಂ, ಬೆಂಗಳೂರು ಜಲ ಮಂಡಳಿ ಮತ್ತು ಕರ್ನಾಟಕ ರೈಲು ಮೂಲಸೌಕರ್ಯ ಅಭಿವೃದ್ಧಿ ಕಂಪನಿಗಳು ಸುದೀರ್ಘ ಸಮಾಲೋಚನೆ ನಡೆಸಿ, ಯೋಜನೆ ರೂಪಿಸಿವೆ' ಎಂದು ಮಾಧುಸ್ವಾಮಿ ತಿಳಿಸಿದರು.

3A ಪುಟ ನೋಡಿ

ಆಸ್ತಿ ತೆರಿಗೆ: ದಂಡ ಕಡಿತಕ್ಕೆ ನಿರ್ಣಯ

ಸ್ವಯಂಘೋಷಿತ ಆಸ್ತಿ ತೆರಿಗೆ ಪಾವತಿ ವೇಳೆ ತಪ್ಪು ಮಾಹಿತಿ ನೀಡಿ, ಕಡಿಮೆ ತೆರಿಗೆ ಪಾವತಿಸಿದ್ದ 78,254 ಆಸ್ತಿ ಮಾಲೀಕರಿಗೆ ವ್ಯತ್ಯಾಸದ ಮೊತ್ತಕ್ಕೆ ದುಪ್ಪಟ್ಟು ದಂಡ ವಿಧಿಸುವ ಬದಲಿಗೆ, ಸರಳ ಬಡ್ಡಿ ವಸೂಲಿಗೆ ಸಂಪುಟ ಸಭೆ ನಿರ್ಣಯಿಸಿದೆ.

ಈ ಆಸ್ತಿಗಳ ಮಾಲೀಕರು ವ್ಯತ್ಯಾಸದ ಮೊತ್ತದ ಜತೆಗೆ ಬ್ಯಾಂಕ್ ಬಡ್ಡಿಯ ದರದಷ್ಟು ದಂಡ ಪಾವತಿಸಿ, ಪ್ರಕರಣಗಳನ್ನು ಇತ್ಯರ್ಥಪಡಿಸಿಕೊಳ್ಳಲು ಅವಕಾಶ ನೀಡಲು ಸಂಪುಟ ಒಪ್ಪಿಗೆ ಸೂಚಿಸಿದೆ ಎಂದು ಮಾಧುಸ್ವಾಮಿ ತಿಳಿಸಿದರು.

ಬಿಬಿಎಂಪಿ ವ್ಯಾಪ್ತಿಯಲ್ಲಿ ವಸೂಲಾಗದೇ ಇರುವ ₹ 238 ಕೋಟಿಯಷ್ಟು ನಗರ ಭೂ ಸಾರಿಗೆ ಉಪಕರಣವನ್ನೂ ಮನ್ನಾ ಮಾಡಲು ನಿರ್ಧರಿಸಲಾಗಿದೆ.

ಎಲೆಕ್ಟ್ರಿಕ್ ಬಸ್ ಖರೀದಿಗೆ ₹ 100 ಕೋಟಿ

ಎಲೆಕ್ಟ್ರಿಕ್ ಬಸ್‌ಗಳ ಖರೀದಿಗಾಗಿ ಬಿಎಂಟಿಸಿಗೆ ₹ 100 ಕೋಟಿ ಅನುದಾನ ಒದಗಿಸುವ ಪ್ರಸ್ತಾವಕ್ಕೆ ಸಂಪುಟ ಒಪ್ಪಿಗೆ ಸೂಚಿಸಿದೆ. 300 ಎಲೆಕ್ಟ್ರಿಕ್ ಬಸ್ ಖರೀದಿಸಲು ನಿರ್ಧರಿಸಲಾಗಿದೆ.

ಬೆಂಗಳೂರು ಜಲಮಂಡಳಿಯ ತೊರೆಕಾಡನಹಳ್ಳಿ, ಹಾರೋಹಳ್ಳಿ ಮತ್ತು ತಾತಗುಣಿಯ ಪಂಪ್‌ಹೌಸ್‌ಗಳಲ್ಲಿ ವಿದ್ಯುತ್ ಉಪಕರಣಗಳ ಬದಲಾವಣೆಗೆ ₹ 44.50 ಕೋಟಿ ವೆಚ್ಚ ಮಾಡುವ ಪ್ರಸ್ತಾವಕ್ಕೂ ಒಪ್ಪಿಗೆ ನೀಡಲಾಗಿದೆ.

ಭದ್ರತಾ ಲೋಪ: ಕೇಂದ್ರ, ರಾಜ್ಯದಿಂದ ತನಿಖೆ

ಚಂಡೀಗಡ/ ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಫಿರೋಜ್‌ಪುರಕ್ಕೆ ಬುಧವಾರ ಭೇಟಿ ನೀಡಿದ್ದ ವೇಳೆ ಉಂಟಾಗಿದ್ದ ಭದ್ರತಾ ಲೋಪದ ಬಗ್ಗೆ ಸಮಗ್ರ ತನಿಖೆ ನಡೆಸಲು ಇಬ್ಬರು ಸದಸ್ಯರ ಉನ್ನತ ಮಟ್ಟದ ಸಮಿತಿಯನ್ನು ಪಂಜಾಬ್ ಸರ್ಕಾರ ರಚಿಸಿದೆ.

ಕೇಂದ್ರ ಗೃಹ ಸಚಿವಾಲಯವು ಮೂವರು ಸದಸ್ಯರ ಸಮಿತಿಯನ್ನು ರಚಿಸಿದೆ. ಕೇಂದ್ರ ಸಂಪುಟ ಕಾರ್ಯಾಲಯದ ಕಾರ್ಯದರ್ಶಿ (ಭದ್ರತೆ) ಸುಧೀರ್ ಕುಮಾರ್ ಸಕ್ಸೇನಾ, ಗುಪ್ತಚರ ಬ್ಯೂರೊದ ಜಂಟಿ ನಿರ್ದೇಶಕ ಬಲಬೀರ್ ಸಿಂಗ್ ಮತ್ತು ಎಸ್‌ಪಿಜಿಯ ಮಹಾ ನಿರೀಕ್ಷಕ ಎಸ್. ಸುರೇಶ್ ಸಮಿತಿಯಲ್ಲಿ ಇದ್ದಾರೆ. ಸಾಧ್ಯವಾದಷ್ಟು ಬೇಗ ವರದಿ ನೀಡಲು ಸಮಿತಿಗೆ ಸೂಚಿಸಲಾಗಿದೆ.

ರಾಜ್ಯದ ಸಮಿತಿಯಲ್ಲಿ ನ್ಯಾಯಮೂರ್ತಿ (ನಿವೃತ್ತ) ಮೆಹತಾಬ್ ಸಿಂಗ್ ಗಿಲ್ ಮತ್ತು ಗೃಹ ವ್ಯವಹಾರಗಳು ಮತ್ತು ಕಾನೂನು ಇಲಾಖೆಯ ಪ್ರಧಾನ ಕಾರ್ಯದರ್ಶಿ ಅನುರಾಗ್ ವರ್ಮಾ ಅವರು ಸದಸ್ಯರಾಗಿದ್ದಾರೆ. ಸಮಿತಿಯು ಮೂರು ದಿನಗಳಲ್ಲಿ ವರದಿ ನೀಡಲಿದೆ.

ಪ್ರಧಾನಿಯ ಭದ್ರತೆಗಾಗಿ ರಾಜ್ಯ ಸರ್ಕಾರವು ಅಗತ್ಯ ಸಂಖ್ಯೆಯಲ್ಲಿ ಸಿಬ್ಬಂದಿಯನ್ನು ನಿಯೋಜಿಸಿರಲಿಲ್ಲ ಎಂದು ಕೇಂದ್ರ ಗೃಹ ಸಚಿವಾಲಯವು ಆರೋಪಿಸಿದೆ. ಲೋಪಕ್ಕೆ ಕಾರಣವೇನು ಎಂಬ ವರದಿಯನ್ನು ತಕ್ಷಣವೇ ಸಲ್ಲಿಸುವಂತೆ ಸೂಚಿಸಿದೆ. ಪ್ರಧಾನಿಯ ಭದ್ರತೆಯಲ್ಲಿ ಆಗಿರುವ ಲೋಪವನ್ನು ಒಪ್ಪಿಕೊಳ್ಳಲು ಸಾಧ್ಯವೇ ಇಲ್ಲ. ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ.

ಪ್ರಧಾನಿಯ ಭೇಟಿ ಸಂದರ್ಭದಲ್ಲಿ ಭದ್ರತೆಯಲ್ಲಿ ಲೋಪ ಉಂಟಾಗಿಲ್ಲ. ಇದರ ಹಿಂದೆ ರಾಜಕೀಯ ಉದ್ದೇಶ ಇದ್ದಂತೆ ಕಾಣಿಸುತ್ತಿದೆ ಎಂದು ಪಂಜಾಬ್ ಮುಖ್ಯಮಂತ್ರಿ ಚರಣ್‌ಜಿತ್ ಸಿಂಗ್ ಚನ್ನಿ ಹೇಳಿದ್ದಾರೆ.

ಪ್ರಧಾನಿ ಮೋದಿ ಅವರು ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರನ್ನು ಗುರುವಾರ ಭೇಟಿಯಾಗಿ ತಮ್ಮ ಭದ್ರತೆಯಲ್ಲಿ ಆಗಿರುವ ಲೋಪದ ಬಗ್ಗೆ ಮಾಹಿತಿ ನೀಡಿದರು. ಪ್ರಧಾನಿಯ ಭದ್ರತೆಯಲ್ಲಿ ಆಗಿರುವ ಲೋಪಕ್ಕೆ ಕೋವಿಂದ್ ಅವರು ಕಳವಳ ವ್ಯಕ್ತಪಡಿಸಿದ್ದಾರೆ.

ಇನ್ನಷ್ಟು ಸುದ್ದಿಗಳು 6

Order online at: Freshtohome.com | 90 Minute Delivery

*T&C Apply. All prices are inclusive of taxes. Offers valid only for today and till stocks last. Images used are for representative purposes only and may differ from the actual products. FreshToHome is only a brand name or trade mark and does not represent its true nature.

*UPI ಸಂದಾಯಗಳ ಮೇಲೆ ಆಕರ್ಷಕವಾದ ಉಡುಗೊರೆಗಳನ್ನು ಪಡೆಯಿರಿ.

KARNATAKA | TAMIL NADU | PUDUCHERRY | ANDHRA PRADESH | TELANGANA || SINGAPORE

Shop online at: www.oriana.com | mail@grtjewels.com | GRT LIVE VIDEO SHOPPING Shop from the comfort of your home

www.licindia.in

LIC ಪಾಲಿಸಿದಾರರ ಅವಗಾಹನೆಗೆ :

ಸದಾ ಸಿದ್ಧರಾಗಿರುವುದು ಜೀವನದ ಅತ್ಯುತ್ತಮ ಕೆಲಸ.

ಭಾರತ ಸರಕಾರವು ಲೈಫ್ ಇನ್ಶುರನ್ಸ್ ಕಾರ್ಪೊರೇಶನ್ ಆ್ಯಕ್ಟ್, 1956ನ್ನು ಪರಿಷ್ಕರಿಸಿ ಕಾರ್ಪೊರೇಶನ್‌ಗೆ ತನ್ನ ಪ್ರಸ್ತಾವಿತ ಪಬ್ಲಿಕ್ ಇಶ್ಯೂದಲ್ಲಿ ಪಾಲಿಸಿದಾರರಿಗೆ ಪೈಪೋಟಿಯ ಆಧಾರದಲ್ಲಿ ಶೇರ್‌ಗಳನ್ನು ರಿಜರ್ವ್ ಮಾಡಿರಿಸಲು ಅನುಮತಿ ನೀಡಿದೆ.*
ಈ ಪ್ರಕ್ರಿಯೆಯಲ್ಲಿ ಭಾಗವಹಿಸಲು, ಪಾಲಿಸಿದಾರರು ಕೆಳಗಿನ ಎರಡು ಹೆಜ್ಜೆಗಳನ್ನು ಕೈಗೊಳ್ಳಬೇಕಾಗುತ್ತದೆ.

1 LICಯಲ್ಲಿ ನಿಮ್ಮ ವೈಯಕ್ತಿಕ ದಾಖಲೆಗಳನ್ನು ನವೀಕರಿಸಬೇಕು



- www.licindia.inನಲ್ಲಿ ಸಂದರ್ಶಿಸಿರಿ ಮತ್ತು ಆನ್‌ಲೈನ್‌ನಲ್ಲಿ ನಿಮ್ಮ ಪರಮನೆಂಟ್ ಅಕೌಂಟ್ ನಂಬರ್ (PAN) ನೋಂದಾಯಿಸಲು ಐಕಾನ್‌ನ ಮೇಲೆ ಕ್ಲಿಕ್ ಮಾಡಿರಿ.
- ನಿಮ್ಮ ಜನನ ತಾರೀಖು, ಲಿಂಗ, ಈಮೇಲ್ ಐಡಿ, PAN, ಪೂರ್ತಿ ಹೆಸರು, ಮೊಬೈಲ್ ನಂಬರ್ ಮತ್ತು LIC ಪಾಲಿಸಿ ನಂಬರ್ ದಾಖಲು ಮಾಡಿರಿ.
- ನಿಮ್ಮ ಎಲ್ಲಾ LIC ಪಾಲಿಸಿಗಳಿಗಾಗಿ PAN ನವೀಕರಣಕ್ಕಾಗಿ ನಿರ್ದೇಶನಗಳನ್ನು ಪಾಲಿಸಿರಿ.

ಏನಾದರೂ ಸಹಾಯ ಬೇಕಾದಲ್ಲಿ ನಿಮ್ಮ LIC ಏಜೆಂಟರನ್ನು ಸಂಪರ್ಕಿಸಿರಿ.

2 ಒಂದು DEMAT ಅಕೌಂಟ್ ತೆರೆಯಿರಿ (ಈಗಾಗಲೇ ನಿಮ್ಮಲ್ಲಿ ಇಲ್ಲದಿದ್ದರೆ)

- DEMAT ಅಕೌಂಟ್ ತೆರೆಯಲು ರಿಜಿಸ್ಟರ್ಡ್ ಡಿಪಾಜಿಟರಿ ಪಾರ್ಟಿಸಿಪೆಂಟ್‌ಗಳಿಗಾಗಿ (DP) ಈ ಕೆಳಗಿನ ಯಾವುದಾದರೂ ವೆಬ್‌ಸೈಟನ್ನು ಸಂದರ್ಶಿಸಿರಿ :
  NSDL:
  https://sebi.gov.in/sebiweb/other/OtherAction.do?doRecognisedFpi=yes&intmId=19
  CDSL:
  https://sebi.gov.in/sebiweb/other/OtherAction.do?doRecognisedFpi=yes&intmId=18
- DEMAT ಅಕೌಂಟ್ ತೆರೆಯಲು DPಗೆ ನೀವು ಈ ಕೆಳಗಿನವುಗಳನ್ನು ಒದಗಿಸಬೇಕಾಗುತ್ತದೆ :
  - ಇತ್ತೀಚಿನ ಫೋಟೊಗ್ರಾಫ್
  - PAN ಕಾರ್ಡ್
  - ವಿಳಾಸದ ಪುರಾವೆ
  - ಕ್ಯಾನ್ಸಲ್ಡ್ ಚೆಕ್
- ಇನ್ನೂ ಹೆಚ್ಚಿನ ಮಾಹಿತಿಯನ್ನು DP ನೀಡ ಬೇಕಾಗಬಹುದು.

ಏನಾದರೂ ಸಹಾಯ ಬೇಕಾದಲ್ಲಿ ನಿಮ್ಮ ಬ್ಯಾಂಕರ್ ಅಥವಾ ಬ್ರೋಕರನ್ನು ಸಂಪರ್ಕಿಸಿರಿ.

ಈ ಕೆಳಗಿನವುಗಳನ್ನು ದಯವಿಟ್ಟು ಗಮನಿಸಿರಿ
ಈ ನೋಟೀಸು ಅಥವಾ ನಮ್ಮ ಶೇರ್‌ಹೋಲ್ಡರ್‌ಗಳೊಂದಿಗೆ ನಾವು ಹಂಚಿಕೊಂಡಿರುವ ಯಾವುದೇ ಮಾಹಿತಿಯು ಕಾರ್ಪೊರೇಶನ್‌ನ ಇಕ್ವಿಟಿ ಶೇರ್‌ಗಳ ಆಫರ್ ಎಂದು ತಿಳಿಯಬಾರದು. | ಡಿಪಾಜಿಟರಿ ಪಾರ್ಟಿಸಿಪೆಂಟರನ್ನು ಸ್ವತಃ ಪಾಲಿಸಿದಾರರೇ ಸಂಪರ್ಕಿಸಬೇಕು ಮತ್ತು DEMAT ಅಕೌಂಟ್ ಮತ್ತು ಅದರ ಕಾರ್ಯ ನಿರ್ವಹಣೆ ಅವರದ್ದೇ ಜವಾಬ್ದಾರಿಯಾಗಿರುತ್ತದೆ. ಸಂಬಂಧಪಟ್ಟ ಎಲ್ಲಾ ವೆಚ್ಚಗಳನ್ನು ಪಾಲಿಸಿದಾರರೇ ವಹಿಸಿಕೊಳ್ಳಬೇಕಾಗುತ್ತದೆ. | ಯಾವುದೇ ಪ್ರಸ್ತಾವಿತ ನೀಡಿಕೆಯಲ್ಲಿ ಶೇರ್‌ಗಳ ರಿಜರ್ವೇಶನ್ ಆಗಿದ್ದರೂ ಕೂಡ, ಅರ್ಜಿ ಮಾಡಿದ ಯಾವುದೇ ಅಥವಾ ಎಲ್ಲಾ ಇಕ್ವಿಟಿ ಶೇರ್‌ಗಳನ್ನು ಪಾಲಿಸಿದಾರರಿಗೆ ಅಲಾಟ್ ಮಾಡಲಾಗುವುದೆಂಬ ಯಾವುದೇ ಆಶ್ವಾಸನೆ ನೀಡಲಾಗುತ್ತಿಲ್ಲ. | ತಮ್ಮ ಇಕ್ವಿಟಿ ಶೇರ್‌ಗಳ ಕಾರ್ಯದಕ್ಷತೆಯ ಯಾವ ಗ್ಯಾರಂಟಿಯನ್ನೂ ಕಾರ್ಪೊರೇಶನ್ ನೀಡುತ್ತಿಲ್ಲ ಮತ್ತು ತಮ್ಮ ಇಕ್ವಿಟಿಗಳಲ್ಲಿ ಮಾಡಲಾಗುವ ಪಬ್ಲಿಕ್ ಆಫರಿಂಗ್‌ನಲ್ಲಿನ ವಿನಿಯೋಜನೆಗಳಿಗೆ ಸಂಬಂಧಿಸಿದ ಅಪಾಯ ಸಾಧ್ಯತೆಗಳ ಬಗ್ಗೆ ವಿನಿಯೋಜಕರು ಜಾಗೃತರಾಗಿರಬೇಕು. ಪಾಲಿಸಿದಾರರಿಗಾಗಿ ಶೇರ್‌ಗಳ ಪ್ರಸ್ತಾವಿತ ರಿಜರ್ವೇಶನ್ ಬಗ್ಗೆ ಅತಿ ಮುಖ್ಯ ಮಾಹಿತಿಗಾಗಿ ಸಂದರ್ಶಿಸಿರಿ https://licindia.in/ipo
*ಪ್ರಸ್ತಾವಿತ IPO ವಿವರಗಳನ್ನು ಅದು ಒಮ್ಮೆ ಅಂತಿಮ ರೂಪ ಪಡೆದಾಗ ತಿಳಿಸಲಾಗುತ್ತದೆ.

ಲೈಫ್ ಇನ್ಶೂರನ್ಸ್ ಕಾರ್ಪೊರೇಶನ್ ಆಫ್ ಇಂಡಿಯಾ
LIFE INSURANCE CORPORATION OF INDIA
ಪ್ರತಿ ಕ್ಷಣವೂ ನಿಮ್ಮೊಂದಿಗೆ

LIC/RKS/2021-22/39/KAN

ನಮ್ಮನ್ನು ಫಾಲೋ ಮಾಡಿರಿ : LIC India Forever | IRDAI Regn No.: 512

ಸಾರ್ವಜನಿಕ ಗ್ರಂಥಾಲಯ ಇಲಾಖೆ
ಉಪನಿರ್ದೇಶಕರ ಕಛೇರಿ, ನಗರ ಕೇಂದ್ರ ಗ್ರಂಥಾಲಯ, ಉತ್ತರ ವಲಯ, ಮಲ್ಲೇಶ್ವರಂ, ಬೆಂಗಳೂರು – 560003. ದೂರವಾಣಿ: 080–23567065
ಇ–ಮೇಲ್: dd_ccl_nz_bbl@yahoo.co.in / cclnzlibrary@gmail.com

ಸಂಖ್ಯೆ: ನ.ಕೇ.ಗ್ರಂ.ಉವ/ಲೆಪವಿ/ಪ್ರ.ತಾಂ.ಕೆ/27/2021–22 ದಿನಾಂಕ: 04–01–2022

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

2021–22ನೇ ಸಾಲಿಗೆ ನಗರ ಕೇಂದ್ರ ಗ್ರಂಥಾಲಯ, ಉತ್ತರ ವಲಯ, ಮಲ್ಲೇಶ್ವರಂ, ಬೆಂಗಳೂರು ಈ ಕಛೇರಿ ಹಾಗೂ ಇದರ ವ್ಯಾಪ್ತಿಯ ಪುಸ್ತಕ ಖರೀದಿ ವಿಭಾಗದಲ್ಲಿರುವ ಹೊಸ ಪುಸ್ತಕಗಳಿಗೆ ತಾಂತ್ರಿಕ ಕೆಲಸಗಳನ್ನು ನಿರ್ವಹಿಸಲು ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಟೆಂಡರ್‌ನ್ನು ಆಹ್ವಾನಿಸಲಾಗಿದೆ. ನೋಂದಾಯಿತ ಸಂಸ್ಥೆಯವರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಭಾಗವಹಿಸಬಹುದು. ಟೆಂಡರ್‌ಗಿಟ್ಟ ಅಂದಾಜು ಮೊತ್ತ **ರೂ. 24 ಲಕ್ಷ (ರೂಪಾಯಿ ಇಪ್ಪತ್ತ್ನಾಲ್ಕು ಲಕ್ಷ ಮಾತ್ರ)** ಟೆಂಡರಿನಲ್ಲಿ ಭಾಗವಹಿಸಲು ಇಚ್ಛಿಸುವವರು ಕರ್ನಾಟಕ ಸರ್ಕಾರದ ವೆಬ್‌ಸೈಟ್: **http://eproc.karnataka.gov.in** ನಲ್ಲಿ ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರ್‌ಗಳನ್ನು ಸ್ವೀಕರಿಸುವ ಅಂತಿಮ ದಿನಾಂಕ: **17–01–2022ರಂದು ಸಂಜೆ 4.00 ಗಂಟೆವರೆಗೆ.** ತಾಂತ್ರಿಕ ಬಿಡ್ಡುಗಳನ್ನು ದಿನಾಂಕ: **18–01–2022ರಂದು ಸಂಜೆ 5.00 ಗಂಟೆಗೆ ತೆರೆಯಲಾಗುವುದು** ಹಾಗೂ ತಾಂತ್ರಿಕ ಲಕೋಟೆಯಲ್ಲಿ ಯಶಸ್ವಿಯಾದವರ ಆರ್ಥಿಕ ಲಕೋಟೆಯನ್ನು ದಿನಾಂಕ: **19–01–2022 ರ ನಂತರ ತೆರೆಯಲಾಗುವುದು.** ಟೆಂಡರ್‌ದಾರರು ಹೆಚ್ಚಿನ ವಿವರಗಳನ್ನು ಈ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯುವುದು.

ಸಹಿ/– ಉಪ ನಿರ್ದೇಶಕರು
ನಗರ ಕೇಂದ್ರ ಗ್ರಂಥಾಲಯ, ಉತ್ತರ ವಲಯ,
ಮಲ್ಲೇಶ್ವರಂ, ಬೆಂಗಳೂರು.

ವಾಸಾಸಂಇ/ಬೆಂ.ನ/ಅಡ್ವರ್ಟೋ/2699/2021–22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಮೆಟ್ರೊ: ಎರಡು ಸುರಂಗ ಪೂರ್ಣ

ಪ್ರಜಾವಾಣಿ ವಾರ್ತೆ

ಎಂ.ಜಿ. ರಸ್ತೆ ಮೆಟ್ರೊ ನಿಲ್ದಾಣದಲ್ಲಿ ಗುರುವಾರ ಹೊರ ಬಂದ ಟಿಬಿಎಂ ಯಂತ್ರ

ಬೆಂಗಳೂರು: ರೀಚ್–6 ಮೆಟ್ರೊ ರೈಲು ಮಾರ್ಗದಲ್ಲಿ ಸುರಂಗ ಕೊರೆಯುವ ಎರಡು ಯಂತ್ರಗಳು (ಟಿಬಿಎಂ) ಜನವರಿ ಮೊದಲ ವಾರದಲ್ಲಿ ಪ್ರಗತಿ ಸಾಧಿಸಿವೆ.

2021ರ ಜೂನ್ 29ರಂದು ಸುರಂಗ ಕೊರೆಯಲು ಆರಂಭಿಸಿದ್ದ ‘ವಮಿಕ’ ಹೆಸರಿನ ಟಿಬಿಎಂ, ದಕ್ಷಿಣ ರ‍್ಯಾಂಪ್ (ಜಯನಗರ ಅಗ್ನಿಶಾಮಕ ಠಾಣೆ ಬಳಿ) ಮತ್ತು ಡೈರಿ ಸರ್ಕಲ್ ನಡುವಿನ 614 ಮೀಟರ್ ಸುರಂಗ ಕೊರೆಯುವುದನ್ನು ಪೂರ್ಣಗೊಳಿಸಿದೆ. ಲಕ್ಕಸಂದ್ರ ನಿಲ್ದಾಣದ ಕಡೆಗೆ ಸುರಂಗ ಮಾರ್ಗವನ್ನು ‘ವಮಿಕ’ ಮುಂದುವರಿಸಲಿದೆ.

2020ರ ಸೆ.5ರಂದು ಶಿವಾಜಿನಗರ ಮೆಟ್ರೊ ನಿಲ್ದಾಣದಿಂದ ಸುರಂಗ ಕೊರೆಯಲು ಆರಂಭಿಸಿದ ‘ಅವನಿ’ ಹೆಸರಿನ ಯಂತ್ರ, 1,086 ಮೀಟರ್ ಕಾಮಗಾರಿ ಪೂರ್ಣಗೊಳಿಸಿ ಎಂ.ಜಿ ರಸ್ತೆ ನಿಲ್ದಾಣವನ್ನು ಗುರುವಾರ ತಲುಪಿತು.

‘280 ಮೀಟರ್ ಉದ್ದದಲ್ಲಿ ಸಿಕ್ಕಿದ್ದ ಗಟ್ಟಿ ಬಂಡೆಗಳನ್ನು ಕೊರೆಯುವ ಸವಾಲಿನ ಕೆಲಸವನ್ನೂ ಇದು ಪೂರ್ಣಗೊಳಿಸಿದೆ. ಎಂ.ಜಿ. ರಸ್ತೆಯಿಂದ ರಾಷ್ಟ್ರೀಯ ಮಿಲಿಟರಿ ಶಾಲೆಯ ನಿಲ್ದಾಣದ ಕಡೆಗೆ ಕಾರ್ಯಾಚರಣೆ ಮುಂದುವರಿಸಲಿದೆ’ ಎಂದು ಬೆಂಗಳೂರು ಮೆಟ್ರೊ ರೈಲು ನಿಗಮ (ಬಿಎಂಆರ್‌ಸಿಎಲ್) ತಿಳಿಸಿದೆ.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

‘ಕೈಗಾರಿಕೆಗಳಲ್ಲಿ ಸುರಕ್ಷತೆ ಮತ್ತು ಆರೋಗ್ಯ ಕೈಪಿಡಿ’ಯನ್ನು ಕಾರ್ಮಿಕ ಸಚಿವ ಶಿವರಾಮ ಹೆಬ್ಬಾರ್ ಬಿಡುಗಡೆ ಮಾಡಿದರು. ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಡಾ. ಜಿ. ಕಲ್ಪನಾ ಇದ್ದರು

‘ಕೈಗಾರಿಕೆಗಳಲ್ಲಿ ಸುರಕ್ಷತೆ’ ಕೈಪಿಡಿ ಬಿಡುಗಡೆ

ಬೆಂಗಳೂರು: ಕಾರ್ಮಿಕರ ಸುರಕ್ಷತೆ ಮತ್ತು ಹಕ್ಕುಗಳ ಬಗ್ಗೆ ಅರಿವು ಮೂಡಿಸುವ ಉದ್ದೇಶದಿಂದ ರೂಪಿಸಲಾದ ಕೈಪಿಡಿಯನ್ನು ಕಾರ್ಮಿಕ ಸಚಿವ ಶಿವರಾಮ ಹೆಬ್ಬಾರ್ ಬಿಡುಗಡೆ ಮಾಡಿದ್ದಾರೆ.

ಅಪಘಾತರಹಿತವಾಗಿ ಕಾರ್ಮಿಕರು ಕಾರ್ಯನಿರ್ವಹಿಸಬೇಕು ಎನ್ನುವ ನಿಟ್ಟಿನಲ್ಲಿ ಸುರಕ್ಷತಾ ಕ್ರಮಗಳ ಬಗ್ಗೆ ಹೆಚ್ಚಿನ ಜ್ಞಾನ ನೀಡುವುದು ಈ ಕೈಪಿಡಿಯ ಆಶಯವಾಗಿದೆ.

ಜತೆಗೆ, ಕೆಲಸದ ಸಮಯದಲ್ಲಿ ಉಪಯೋಗಿಸಬೇಕಾದ ವೈಯಕ್ತಿಕ ಸುರಕ್ಷತಾ ಉಪಕರಣಗಳ ಬಗ್ಗೆ ಮಾಹಿತಿ ನೀಡಲಾಗಿದೆ. ಈ ಮೂಲಕ ಕೈಗಾರಿಕೆಗಳಲ್ಲಿ ಅಪಘಾತದ ಪ್ರಮಾಣವನ್ನು ಕಡಿಮೆಗೊಳಿಸುವ ಉದ್ದೇಶವಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಇಲಾಖೆಯು ಕೈಗಾರಿಕೆಗಳನ್ನು ಅಪಾಯಗಳಿಂದ ಮುಕ್ತಗೊಳಿಸುವ ನಿಟ್ಟಿನಲ್ಲಿ ಸುರಕ್ಷತಾ ಕ್ರಮಗಳ ಬಗ್ಗೆ ಮಾಹಿತಿ ನೀಡುತ್ತಿದೆ. ಜತೆಗೆ, ತಿಳಿವಳಿಕೆ ಮೂಡಿಸುವ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ತಿಳಿಸಿದ್ದಾರೆ.

ಕಾರ್ಮಿಕ ಕಾನೂನುಗಳ ಬಗ್ಗೆ ಅರಿವು ಮೂಡಿಸಿ ಅವರ ಹಕ್ಕನ್ನು ಪಡೆದುಕೊಳ್ಳುವ ಮಾರ್ಗಸೂಚಿಯಾಗಿ ಈ ಕೈಪಿಡಿ ಸಹಾಯಕವಾಗಲಿದೆ. ಕಾರ್ಖಾನೆಗಳಲ್ಲಿ ಅವರಿಗೆ ಒದಗಿಸಬೇಕಾದ ಕ್ಯಾಂಟೀನ್ ಸೇರಿದಂತೆ ಇತರ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡುವಲ್ಲಿ ಸಹಕಾರಿಯಾಗಲಿದೆ ಎಂದರು.

ಸಾರ್ವಜನಿಕ ಸೂಚನೆ

ನನ್ನ ಕಕ್ಷಿದಾರರಾದ ಶ್ರೀಮತಿ ಪಿ.ಅನುಸೂಯ ಕೋಂ ಪಿ.ಶಶಿಭೂಷಣ್, ಪ್ಲಾಟ್ ನಂ.19 & 20, ಹೆಗ್ಗನಹಳ್ಳಿ ಗ್ರಾಮ, ಕುಂದಾಣ ಹೋಬಳಿ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಇಲ್ಲಿ ವಾಸವಾಗಿದ್ದು, ಇವರು ದೇವನಹಳ್ಳಿಯ 2ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಓ.ಎಸ್.ನಂ.250/2013ರಲ್ಲಿ ಉಲ್ಲೇಖದ ಕೆಳಕಂಡ ಶೆಡ್ಯೂಲ್‌ನಲ್ಲಿ ಶ್ರೀ. ಶೇಖ್ ಮೌಲಾ ಅಲಿ, ಬಿನ್ ಶೇಖ್ ನಸಗೂರು ಷಾ ಇವರ ವಿರುದ್ಧ ಪ್ರಕರಣ ದಾಖಲಿಸಿರುತ್ತಾರೆ ಎಂದು ಈ ಮೂಲಕ ಅಧಿಸೂಚಿಸಲಾಗಿದೆ. ಸದರಿ ಪ್ರಕರಣದಲ್ಲಿ ಸಾಕ್ಷ್ಯಾಧಾರಗಳನ್ನು ದಾಖಲಿಸುವ ಪ್ರಕ್ರಿಯೆ ಪ್ರಗತಿಯಲ್ಲಿದೆ.

ಈಗ ಸದರಿ ಶ್ರೀ. ಶೇಖ್ ಮೌಲಾ ಅಲಿ ಅವರು ಮಾರಾಟ ಒಪ್ಪಂದವನ್ನು ಮರೆಮಾಚಿ ಶೆಡ್ಯೂಲ್ ಸ್ವತ್ತನ್ನು ಅನ್ಯ ವ್ಯಕ್ತಿಗಳಿಗೆ ಮಾರಾಟ ಮಾಡಲು ಪ್ರಯತ್ನಿಸುತ್ತಿದ್ದಾರೆಂದು ನಮ್ಮ ಕಕ್ಷಿದಾರರಿಗೆ ನಂಬಲರ್ಹ ಮೂಲಗಳಿಂದ ತಿಳಿದುಬಂದಿದ್ದು, ಅವರು ಶೆಡ್ಯೂಲ್ ಸ್ವತ್ತನ್ನು ನನ್ನ ಕಕ್ಷಿದಾರರಿಗೆ ಭೌತಿಕವಾಗಿ ಒಪ್ಪಿಸಿರುವರೆಂದು ತಿಳಿದುಕೊಂಡಿರುತ್ತಾರೆ. ನನ್ನ ಕಕ್ಷಿದಾರರು ಸ್ವತ್ತನ್ನು ಸ್ವಾಧೀನಪಡಿಸಿಕೊಂಡ ನಂತರ, ಒಪ್ಪಂದದ ಪ್ರಕಾರ ಈ ಆಸ್ತಿಯು ಶ್ರೀಮತಿ ಪಿ.ಅನುಸೂಯ ರವರಿಗೆ ಸೇರಿದ್ದು ಎಂದು ಬೋರ್ಡ್ ಅನ್ನು ಸಹ ಹಾಕಲಾಗಿದೆ. ಸದರಿ ಶೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾರೂ ಸಹ ಮೇಲ್ಕಂಡ ಶ್ರೀ. ಶೇಖ್ ಮೌಲಾ ಅಲಿ ಅವರೊಂದಿಗೆ ಯಾವುದೇ ವಹಿವಾಟು ನಡೆಸದಂತೆ ಸಾರ್ವಜನಿಕರಿಗೆ ಈ ಮೂಲಕ ಎಚ್ಚರಿಕೆ ನೀಡಲಾಗಿದೆ. ಈ ಸಾರ್ವಜನಿಕ ಸೂಚನೆಯ ಹೊರತಾಗಿಯೂ, ಯಾವುದೇ ವ್ಯಕ್ತಿ ಸದರಿ ಶ್ರೀ. ಶೇಖ್ ಮೌಲಾ ಅಲಿ ಅವರೊಂದಿಗೆ ಯಾವುದೇ ಒಪ್ಪಂದಕ್ಕೆ ಮುಂದಾದಲ್ಲಿ, ಇಂತಹ ಖರೀದಿಯು ಡಾಕ್ಟರೀನ್ ಆಫ್ ಲೀಸ್ ಪೆಂಡೆನ್ಸ್ ಪ್ರಕಾರ ಕಾನೂನುಬಾಹಿರವಾಗುವುದು ಹಾಗೂ ಅಂತಹ ಖರೀದಿದಾರರಿಗೆ ಶೆಡ್ಯೂಲ್ ಸ್ವತ್ತಿನ ಮೇಲೆ ಯಾವುದೇ ಹಕ್ಕು ಅಥವಾ ಅಧಿಕಾರ ಪ್ರಾಪ್ತವಾಗುವುದಿಲ್ಲ.

ಶೆಡ್ಯೂಲ್

ಬೆಂಗಳೂರು ಉತ್ತರ ತಾಲೂಕಿನ ಜಾಲ ಹೋಬಳಿ, ಕುದುರೆಗೆರೆ ಗ್ರಾಮದಲ್ಲಿ ಅಸ್ತಿತ್ವದಲ್ಲಿರುವ ಹಳೆಯ ಸ.ನಂ.50/ಪಿ–25 ಹೊಸ ಸ.ನಂ.167 ರ ಆಸ್ತಿಯ ಎಲ್ಲಾ ಚಕ್ಕುಬಂಧಿ **ಪೂರ್ವದಿಂದ:** ಧೋಬಿ ಮುನಿಯಪ್ಪ ಅವರ ಜಮೀನು; **ಪಶ್ಚಿಮದಿಂದ:** ಶ್ರೀಮತಿ. ವೆಂಕಟಮ್ಮನ ಜಮೀನು; **ಉತ್ತರ:** ಶ್ರೀ. ಕೃಷ್ಣಪ್ಪ ಮತ್ತು ನಾಲಯ್ಯನ ಜಮೀನುಗಳು; **ದಕ್ಷಿಣದಿಂದ:** ಪಂಚಾಯತ್ ರಸ್ತೆ

ಸಹಿ/– ಆರ್.ಮಾರೇಗೌಡ B.Sc., LL.B.,
RMG LAW CHAMBERS, #6, 2ನೇ ಮಹಡಿ, ಎಂ.ರಾಮಯ್ಯ ಮಾನ್ಶನ್, ಶಾಂತಿ ನಗರ (ದಕ್ಷಿಣ), ಎನ್.ಹೆಚ್. 207, ದೇವನಹಳ್ಳಿ – 562110 **ಮೊ: 98456 64747, 94804 50845**

ಗಣರಾಜ್ಯೋತ್ಸವ ಫಲಪುಷ್ಪ ಪ್ರದರ್ಶನ ರದ್ದು

ಬೆಂಗಳೂರು: ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವುದರಿಂದ ಈ ಬಾರಿಯ ಗಣರಾಜ್ಯೋತ್ಸವ ಫಲಪುಷ್ಪ ಪ್ರದರ್ಶನ ರದ್ದುಪಡಿಸಲಾಗಿದೆ.

ಎರಡನೇ ಅಲೆಯ ಬಳಿಕ ಕೋವಿಡ್ ಪ್ರಕರಣಗಳು ಕಡಿಮೆಯಾಗಿದ್ದರಿಂದ ಫಲಪುಷ್ಪ ಪ್ರದರ್ಶನ ಆಯೋಜಿಸಲು ತೋಟಗಾರಿಕೆ ಇಲಾಖೆ ಎಲ್ಲ ಸಿದ್ಧತೆಗಳನ್ನು ಮಾಡಿಕೊಂಡಿತ್ತು.

ಈ ಬಾರಿ ನಟರಾದ ರಾಜ್‌ಕುಮಾರ್ ಹಾಗೂ ಪುನೀತ್ ರಾಜ್‌ಕುಮಾರ್ ಗೌರವಾರ್ಥ ಫಲಪುಷ್ಪ ಪ್ರದರ್ಶನ ಆಯೋಜಿಸಲು ಉದ್ದೇಶಿಸಲಾಗಿತ್ತು. ಗಾಜಿನ ಮನೆಯಲ್ಲಿ ಇಬ್ಬರು ನಟರ ಹೂವಿನ ಪ್ರತಿಕೃತಿಗಳನ್ನು ನಿರ್ಮಿಸಿ, ಅವರಿಗೆ ಪುಷ್ಪನಮನ ಸಲ್ಲಿಸಲು ತಯಾರಿ ಮಾಡಿಕೊಳ್ಳಲಾಗಿತ್ತು.

ಆದರೆ, ಸೋಂಕು ಪ್ರಕರಣಗಳು ದಿಢೀರ್ ಏರಿಕೆಯಾಗಿದ್ದರಿಂದ ಮತ್ತು ಸರ್ಕಾರ ಹಲವು ನಿರ್ಬಂಧಗಳನ್ನು ವಿಧಿಸಿರುವುದರಿಂದ ತೋಟಗಾರಿಕೆ ಇಲಾಖೆ ಪ್ರದರ್ಶನವನ್ನು ರದ್ದುಪಡಿಸಿದೆ. ಕೋವಿಡ್ ಕಾರಣಕ್ಕೆ ಪ್ರದರ್ಶನವನ್ನು ರದ್ದುಪಡಿಸುತ್ತಿರುವುದು ಇದು ನಾಲ್ಕನೇ ಬಾರಿಯಾಗಿದೆ.

‘ಫಲಪುಷ್ಪ ಪ್ರದರ್ಶನಕ್ಕೆ ಲಕ್ಷಾಂತರ ಜನ ಭೇಟಿ ನೀಡುತ್ತಾರೆ. ಆದರೆ, ಸಾಂಕ್ರಾಮಿಕ ಕಾಯಿಲೆಯ ಕಾರಣಕ್ಕೆ ಈ ಬಾರಿಯೂ ಪ್ರದರ್ಶನವನ್ನು ರದ್ದುಪಡಿಸಲಾಗಿದೆ’ ಎಂದು ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ ಎಂ.ಜಗದೀಶ್ ತಿಳಿಸಿದ್ದಾರೆ.

’ಅತಿಥಿ ಉಪನ್ಯಾಸಕರಿಗೆ ಸೇವಾ ಭದ್ರತೆ ಒದಗಿಸಿ’

ಬೆಂಗಳೂರು: ‘ಅತಿಥಿ ಉಪನ್ಯಾಸಕರಿಗೆ ಸೇವಾ ಭದ್ರತೆ ಒದಗಿಸುವ ಪರಿಹಾರ ಮಾರ್ಗಗಳನ್ನು ಉನ್ನತ ಶಿಕ್ಷಣ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ನೇತೃತ್ವ ಸಮಿತಿ ಕಂಡುಕೊಳ್ಳಬೇಕು’ ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ಒತ್ತಾಯಿಸಿದ್ದಾರೆ.

ಈ ಬಗ್ಗೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಕುಮಾರ ನಾಯ್ಕ್ ಅವರಿಗೆ ಪತ್ರ ಬರೆದಿರುವ ಅವರು, ‘ಪ್ರತಿಭಟನಾ ನಿರತ ಅತಿಥಿ ಉಪನ್ಯಾಸಕರ ಅಧಿಕೃತ ಪದಾಧಿಕಾರಿಗಳ ಜತೆ ಸಮಾಲೋಚನೆ ನಡೆಸಿ ಪರಿಹಾರ ರೂಪಿಸಬೇಕು’ ಎಂದು ತಿಳಿಸಿದ್ದಾರೆ. ‘ಕಾಯಂ ಹುದ್ದೆಗಳ ಸೃಷ್ಟಿ ಮತ್ತು ನೇಮಕಾತಿಯ ಅತಿ ವಿಳಂಬದಿಂದಾಗಿ ಅತಿಥಿ ಉಪನ್ಯಾಸಕರ ಸೇವೆ ಅನಿವಾರ್ಯವಾಗಿದೆ’ ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ನಗರದಲ್ಲಿ ಇಂದು

ಶರಣ ಸಂಗಮ: ವಿಷಯ: ದೈನಂದಿನ ಜೀವನದಲ್ಲಿ ತತ್ವಾಚರಣೆ ಆಗುವುದೇ?, ಅಧ್ಯಕ್ಷತೆ: ಶಿವಮೂರ್ತಿ ಮುರುಘಾ ಶರಣರು, ಮುಖ್ಯ ಅತಿಥಿಗಳು: ಅಪ್ಪಗೆರೆ ತಿಮ್ಮರಾಜು, ಅರುಣ್ ಸೋಮಣ್ಣ, ಆಯೋಜನೆ: ಬಸವಕೇಂದ್ರ, ಸ್ಥಳ: ಗೋವಿಂದರಾಜನಗರ ವಾರ್ಡ್ ಕಚೇರಿ, 4ನೇ ಮಹಡಿ, ವಿಜಯನಗರ, ಬೆಳಿಗ್ಗೆ 11

ಯುವ ಬರಹಗಾರರ ಚೊಚ್ಚಲ ಕೃತಿಗಳ ಲೋಕಾರ್ಪಣೆ: ಉದ್ಘಾಟನೆ: ಹಂ.ಪ. ನಾಗರಾಜಯ್ಯ, ಮುಖ್ಯ ಅತಿಥಿ: ಜಯಂತ ಕಾಯ್ಕಿಣಿ, ಆಯೋಜನೆ: ಕನ್ನಡ ಪುಸ್ತಕ ಪ್ರಾಧಿಕಾರ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 11

ಅಭಿನಂದನಾ ಸಮಾರಂಭ: ಉದ್ಘಾಟನೆ: ಕೆ.ಎಸ್. ಈಶ್ವರಪ್ಪ, ಮುಖ್ಯ ಅತಿಥಿಗಳು: ಎಂ.ಟಿ.ಬಿ. ನಾಗರಾಜ್, ಬಿ.ಎ. ಬಸವರಾಜು, ಎಚ್. ವಿಶ್ವನಾಥ್, ಬಂಡೆಪ್ಪ ಕಾಶೆಂಪೂರ್, ಆರ್. ಶಂಕರ್, ಎಚ್.ಎಂ. ರೇವಣ್ಣ, ಅಧ್ಯಕ್ಷತೆ: ಟಿ.ವಿ. ಬಳಗಾವಿ, ಆಯೋಜನೆ: ಕನಕಶ್ರೀ ಚಾರಿಟಬಲ್ ಟ್ರಸ್ಟ್, ಸ್ಥಳ: ಒಡೆಯರ್ ಸಭಾಂಗಣ, ಸೆಂಚುರಿ ಕ್ಲಬ್, ಕಬ್ಬನ್ ಉದ್ಯಾನ, ಕೆ.ಆರ್. ವೃತ್ತ, ಮಧ್ಯಾಹ್ನ 12.30

ಇಂಚರ ನಿರಂತರ ಸಂಗೀತೋತ್ಸವ: ‘ಇಂಚರ ಪ್ರಶಸ್ತಿ’ ಪುರಸ್ಕೃತರು: ಉಪಾಸನ ಮೋಹನ್, ಆಯೋಜನೆ: ಇಂಚರ ಸುಗಮ ಸಂಗೀತ ಸಂಸ್ಥೆ, ಸ್ಥಳ: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 4.15

ಸುಚಿತ್ರ ಸಿನಿ ಅಕಾಡೆಮಿಗೆ ಚಾಲನೆ: ನಾಗಾಭರಣ, ಉಪಸ್ಥಿತಿ: ಎಂ.ಕೆ. ಶ್ರೀಧರ್, ಎನ್.ಆರ್. ಮೋಹನ್, ನರಹರಿ ರಾಯರು, ಪಿ. ಶೇಷಾದ್ರಿ, ಪ್ರಕಾಶ್ ಬೆಳವಾಡಿ, ಕೃಷ್ಣನ್ ರಂಗರಾಜು, ಆಯೋಜನೆ: ಸುಚಿತ್ರ ಸಿನಿ ಅಕಾಡೆಮಿ, ಸ್ಥಳ: ಸುಚಿತ್ರ, ಬಿ.ವಿ. ಕಾರಂತ ರಸ್ತೆ, ಬನಶಂಕರಿ 2ನೇ ಹಂತ, ಸಂಜೆ 4.30

‘ಮಹಾಕಾವ್ಯಯಾನ’ ಚಿತ್ರಕಲಾ ಪ್ರದರ್ಶನ: ಚಂದ್ರನಾಥ್ ಆಚಾರ್ಯ ಅವರು ರಚಿಸಿದ ಕಲಾಕೃತಿಗಳ ಪ್ರದರ್ಶನ, ಮುಖ್ಯ ಅತಿಥಿಗಳು: ಚಿರಂಜೀವಿ ಸಿಂಗ್, ಎಸ್.ಜಿ. ವಾಸುದೇವ್, ಎ.ಆರ್. ಮಿತ್ರಾ, ಡಾ.ಆರ್. ಗಣೇಶ್, ಆಯೋಜನೆ ಹಾಗೂ ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಸಂಜೆ 4.30

21ನೇ ಹಾಸ್ಯಮೇಳ: ಉದ್ಘಾಟನೆ: ಎಸ್. ಷಡಕ್ಷರಿ, ಪತ್ತಿ ಶ್ರೀಧರ್, ಹಾಸ್ಯಾಭಿನಂದನೆ: ಗಂಗಾವತಿ ಪ್ರಾಣೇಶ್, ಹಾಸ್ಯ ಮಾತುಗಾರರು: ಎಂ.ಎಸ್. ನರಸಿಂಹಮೂರ್ತಿ, ವೈ.ವಿ. ಗುಂಡೂರಾವ್, ಡುಂಡಿರಾಜ್, ಮಿಮಿಕ್ರಿ ಗೋಪಿ, ಎನ್. ರಾಮನಾಥ್, ಅಚ್ಯುತರಾವ್ ಪದಕಿ, ಎಚ್.ವಿ. ನಟರಾಜ್, ಆಯೋಜನೆ: ಅಂತರಂಗ, ಸ್ಥಳ: ಗಾಯನ ಸಮಾಜ, ಕೆ.ಆರ್. ರಸ್ತೆ, ಸಂಜೆ 5

ಹೊಂಗಸಂದ್ರದ ಶಾಲಾ ಮಕ್ಕಳಿಗೆ ಹಮ್ಮಿಕೊಂಡಿದ್ದ ಕೋವಿಡ್ ಲಸಿಕಾ ಅಭಿಯಾನಕ್ಕೆ ಶಾಸಕ ಎಂ. ಸತೀಶ್ ರೆಡ್ಡಿ ಚಾಲನೆ ನೀಡಿದರು. ಮುಖಂಡರಾದ ರಾಮಚಂದ್ರ, ಮುರಳಿ, ಹೊಂಗಸಂದ್ರ ವಾರ್ಡ್‌ನ ಬಿಜೆಪಿ ಘಟಕದ ಅಧ್ಯಕ್ಷ ಬಾಬು ರೆಡ್ಡಿ ಇದ್ದರು

ಮಣಿಪುರ ಹತ್ಯೆ ಪ್ರಕರಣ: ಸುಳಿವು ನೀಡಿದರೆ ಬಹುಮಾನ

ಗುವಾಹಟಿ: ಅಸ್ಸಾಂ ರೈಫಲ್ಸ್‌ನ ಕರ್ನಲ್ ಸೇರಿ ಎಂಟು ಜನರ ಹತ್ಯೆ ಕೃತ್ಯದಲ್ಲಿ ಭಾಗಿಯಾಗಿದ್ದ ಪೀಪಲ್ಸ್ ಲಿಬರೇಷನ್ ಆರ್ಮಿ (ಪಿಎಲ್‌ಎ), ಮಣಿಪುರ್ ನಾಗಾ ಪೀಪಲ್ಸ್ ಫ್ರಂಟ್‌ನ (ಎಂಎನ್‌ಪಿಎಫ್) 10 ಸದಸ್ಯರ ಸುಳಿವು ನೀಡಿದವರಿಗೆ ಎನ್‌ಐಎ ನಗದು ಬಹುಮಾನ ಘೋಷಿಸಿದೆ.

ನವೆಂಬರ್‌ನಲ್ಲಿ ಮಣಿಪುರದ ಚುರ್ಚಂದ್‌ಪುರ್‌ನಲ್ಲಿ ಕೃತ್ಯ ನಡೆದಿತ್ತು.

ಮನೆ ಬಾಗಿಲಿಗೆ ಪಹಣಿ, ಆದಾಯ ಪ್ರಮಾಣಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಅಂದಾಜು 62.85 ಲಕ್ಷ ರೈತರ ಪಹಣಿ, ಅಟ್ಲಾಸ್ (ಹಿಸ್ಸಾ ಸ್ಕೆಚ್), ಆದಾಯ ಮತ್ತು ಜಾತಿ ಪ್ರಮಾಣಪತ್ರವನ್ನು ಅವರವರ ಮನೆ ಬಾಗಿಲಿಗೆ ಉಚಿತವಾಗಿ ತಲುಪಿಸುವ 'ಕಂದಾಯ ದಾಖಲೆ ಮನೆ ಬಾಗಿಲಿಗೆ ಯೋಜನೆ'ಗೆ ಇದೇ 26ರಂದು ಸರ್ಕಾರ ಚಾಲನೆ ನೀಡಲಿದೆ.

ಈ ಯೋಜನೆಗೆ ರಾಜ್ಯಮಟ್ಟದಲ್ಲಿ ಗಣರಾಜ್ಯೋತ್ಸವ ದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಚಾಲನೆ ನೀಡಲಿದ್ದು, ಜಿಲ್ಲಾಮಟ್ಟದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು, ತಾಲ್ಲೂಕುಮಟ್ಟದಲ್ಲಿ ಸ್ಥಳೀಯ ಶಾಸಕರು ಚಾಲನೆ ನೀಡಲಿದ್ದಾರೆ.

ಅಂದಾಜು ರೈತ ಕುಟುಂಬಗಳು	ಪ್ರಮಾಣ ಪತ್ರಗಳು
ರೈತರ ಸಂಖ್ಯೆ	62,85,819
ಪಹಣಿಗಳ ಸಂಖ್ಯೆ	1,74,71,807
ಜಾತಿ ಪ್ರಮಾಣಪತ್ರಗಳು	4,93,30,889
ಆದಾಯ ಪ್ರಮಾಣಪತ್ರಗಳು	2,76,56,058

ಈ ಸಂಬಂಧ ಸುತ್ತೋಲೆ ಹೊರಡಿಸಿರುವ ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ತುಷಾರ್ ಗಿರಿನಾಥ್, 'ಇ-ಆಡಳಿತ ಇಲಾಖೆಯಿಂದ ಪಹಣಿ, ಜಾತಿ ಮತ್ತು ಆದಾಯ ಪ್ರಮಾಣಪತ್ರವನ್ನು ಕುಟುಂಬವಾರು ಪಡೆದು ಮತ್ತು ಮೋಜಣಿ ತಂತ್ರಾಂಶದಿಂದ ಸರ್ವೆ ನಕ್ಷೆ ಮುದ್ರಿಸಿ, ಆ ದಾಖಲೆಗಳನ್ನು ಪ್ಲಾಸ್ಟಿಕ್ ಲಕೋಟೆಯಲ್ಲಿರಿಸಿ ಪ್ರತಿ ರೈತ ಕುಟುಂಬದ ಮನೆಗೆ ತಲುಪಿಸಲು ಉದ್ದೇಶಿಸಲಾಗಿದೆ' ಎಂದು ತಿಳಿಸಿದ್ದಾರೆ.

'ಕಂದಾಯ ಇಲಾಖೆಯ ಭೂಮಿ ಉಸ್ತುವಾರಿ ಕೋಶವು ಪಹಣಿ ಮತ್ತು ಸರ್ವೆ ನಕ್ಷೆಯನ್ನು ಹಾಗೂ ಅಟಲ್ ಜೀ ಜನಸ್ನೇಹಿ ನಿರ್ದೇಶನಾಲಯವು ಜಾತಿ ಮತ್ತು ಆದಾಯ ಪ್ರಮಾಣಪತ್ರಗಳನ್ನು ಕುಟುಂಬವಾರು ಮುದ್ರಿಸಲು ಅನು-ಕೂಲವಾಗುವಂತೆ ಪಿಡಿಎಫ್ ನಮೂನೆಯಲ್ಲಿ ಸಿದ್ಧಪಡಿಸಿಕೊಳ್ಳಬೇಕು. ಈ ಪಿಡಿಎಫ್ ದಾಖಲೆಯನ್ನು ಜಿಲ್ಲೆಯಲ್ಲಿ ಮುದ್ರಿಸಲು ಅನುಕೂಲ ಆಗುವಂತೆ ಆಯಾ ಜಿಲ್ಲಾಧಿಕಾರಿಗಳಿಗೆ ಜ.15ರ ಒಳಗೆ ಕಳುಹಿಸಬೇಕು' ಎಂದಿದ್ದಾರೆ.

ಜಿಲ್ಲಾಧಿಕಾರಿಗಳು ಪಿಡಿಎಫ್ ದಾಖಲೆಗಳನ್ನು ನಿಗದಿತ ಅವಧಿಯಲ್ಲಿ ಮುದ್ರಿಸಲು ಸಾಮರ್ಥ್ಯವಿರುವ ಮುದ್ರ-ಣಾಲಯವನ್ನು ಜಿಲ್ಲೆಯಲ್ಲಿ ಗುರುತಿಸಬೇಕು. ಮುದ್ರಣವಾದ ದಾಖಲೆಗಳನ್ನು ಇಡಲು ಅಗತ್ಯ ಸಂಖ್ಯೆಯ ಲಕೋಟೆಯನ್ನು ಭೂಮಾಪನ ಇಲಾಖೆಯ ಆಯುಕ್ತರು ಜಿಲ್ಲೆಗಳಿಗೆ ಒದಗಿಸಬೇಕು. ದಾಖಲೆಗಳನ್ನು ಪ್ಲಾಸ್ಟಿಕ್ ಲಕೋಟೆಯಲ್ಲಿ ಇರಿಸಿ ಕಂದಾಯ ಅಧಿಕಾರಿಗಳು ವಿಳಂಬ ಇಲ್ಲದಂತೆ 26 ರಂದೇ ರಾಜ್ಯದ ಎಲ್ಲ ರೈತರ ಮನೆ ಬಾಗಿಲಿಗೆ ತಲುಪಿಸಬೇಕು. ಯೋಜನೆಗೆ ಅಗತ್ಯವಿರುವ ಅನುದಾನವನ್ನು ಜಿಲ್ಲಾಧಿಕಾರಿಗಳಿಗೆ ನೀಡಲಾಗುತ್ತದೆ.

ಕೆರೆ ತುಂಬಿಸಲು ₹ 93.50 ಕೋಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆ.ಆರ್.ಪುರ ಪ್ರದೇಶದಲ್ಲಿ ಲಭ್ಯವಾಗುವ ತ್ಯಾಜ್ಯ ನೀರನ್ನು ಬಳಸಿಕೊಂಡು ಕೆ.ಆರ್.ಪುರ ತಾಲ್ಲೂಕಿನ 22 ಕೆರೆಗಳು ಮತ್ತು ಹೊಸಕೋಟೆ ತಾಲ್ಲೂಕಿನ ದೊಡ್ಡ ಕೆರೆಯನ್ನು ಭರ್ತಿ ಮಾಡುವ ₹ 93.50 ಕೋಟಿ ವೆಚ್ಚದ ಯೋಜನೆಗೆ ಸಂಪುಟ ಸಭೆ ಗುರುವಾರ ಒಪ್ಪಿಗೆ ನೀಡಿದೆ.

'ಸಣ್ಣ ನೀರಾವರಿ ಇಲಾಖೆ ಮೂಲಕ ಈ ಯೋಜನೆ ಅನುಷ್ಠಾನಕ್ಕೆ ಬರಲಿದೆ. ತ್ಯಾಜ್ಯ ನೀರನ್ನು ಕೆರೆಗಳಿಗೆ ಹರಿಸಲು ವಿವಿಧ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು. ಕೆ.ಆರ್.ಪುರದಲ್ಲಿರುವ ತ್ಯಾಜ್ಯ ನೀರು ಸಂಸ್ಕರಣಾ ಘಟಕದಿಂದ ಏತ ನೀರಾವರಿ ಯೋಜನೆ ಮೂಲಕ ಕೆರೆಗಳಿಗೆ ನೀರು ಹರಿಸಲಾಗುವುದು' ಎಂದು ಸಣ್ಣ ನೀರಾವರಿ ಸಚಿವ ಜೆ.ಸಿ. ಮಾಧುಸ್ವಾಮಿ ತಿಳಿಸಿದರು.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ

ಬೆಂಗಳೂರು: ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿಯಲ್ಲಿ ಶೇ 90ಕ್ಕೂ ಹೆಚ್ಚು ಅಂಕ ಪಡೆದ ತಿಗಳ ಸಮುದಾಯದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ (ವಿದ್ಯಾರ್ಥಿ ವೇತನ) ನೀಡಲು ಕರ್ನಾಟಕ ತಿಗಳರ (ಅಗ್ನಿವಂಶ ಕ್ಷತ್ರಿಯ) ಸಾರ್ವಜನಿಕ ವಿದ್ಯಾಭಿವೃದ್ಧಿ ಸಂಘ ಅರ್ಜಿ ಆಹ್ವಾನಿಸಿದೆ.

ಆಸಕ್ತರು ಇತ್ತೀಚಿನ ಎರಡು ಭಾವಚಿತ್ರ ಒಳಗೊಂಡ ಸ್ವವಿವರ, ಅಂಕಪಟ್ಟಿಯ ನಕಲು ಪ್ರತಿ, ಜಾತಿ ಪ್ರಮಾಣ ಪತ್ರ ಅಥವಾ ಸಮುದಾಯದ ಮುಖಂಡರ ಸಹಿ ಇರುವ ಶಿಫಾರಸು ಪತ್ರ ಸಹಿತ ಅರ್ಜಿಯನ್ನು ರಾಜಾಜಿನಗರ 5ನೇ ಬ್ಲಾಕ್‌ನಲ್ಲಿರುವ ಸಂಘದ ಕಚೇರಿಗೆ ಸಲ್ಲಿಸಬೇಕು ಎಂದು ಸಂಘ ತಿಳಿಸಿದೆ.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ | ಪರಸ್ಪರ ಅಂತರ ಕಾಯ್ದುಕೊಳ್ಳಿ

ಗ್ರಾ.ಪಂ.ಗಳಲ್ಲಿ ₹ 4,229 ಕೋಟಿ ಬಿಲ್ ಬಾಕಿ
‘ವಿದ್ಯುತ್ ಬಿಲ್ ಶೀಘ್ರ ಪಾವತಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕುಡಿಯುವ ನೀರು ಸರಬರಾಜು ಮತ್ತು ಬೀದಿ ದೀಪಗಳಿಗೆ ಬಳಸಿರುವ ವಿದ್ಯುತ್ ಬಾಬ್ತು ಗ್ರಾಮ ಪಂಚಾಯಿತಿಗಳು ವಿದ್ಯುತ್ ಸರಬರಾಜು ಕಂಪನಿಗಳಿಗೆ (ಎಸ್ಕಾಂ) ಉಳಿಸಿಕೊಂಡಿರುವ ₹ 4,229 ಕೋಟಿ ಬಾಕಿಯನ್ನು ಪಾವತಿಸಲು ಶೀಘ್ರದಲ್ಲಿ ಕ್ರಮ ಕೈಗೊಳ್ಳಲಾಗುವುದು ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಕೆ.ಎಸ್. ಈಶ್ವರಪ್ಪ ತಿಳಿಸಿದರು.

ಗ್ರಾಮ ಪಂಚಾಯಿತಿಗಳಿಂದ ಎಸ್ಕಾಂಗಳಿಗೆ ನೇರ ವಿದ್ಯುತ್ ಬಿಲ್ ಪಾವತಿಗಾಗಿ ರೂಪಿಸಿರುವ ‘ಇ–ಬೆಳಕು’ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕಾಮಗಾರಿಗಳ ನಿರ್ವಹಣೆಯಲ್ಲಿ ಪಾರದರ್ಶಕತೆ ತರಲು ರೂಪಿಸಿರುವ ‘ಗಾಂಧಿ ಸಾಕ್ಷಿ ಕಾಯಕ 2.0’ ತಂತ್ರಾಂಶಗಳಿಗೆ ಗುರುವಾರ ಚಾಲನೆ ನೀಡಿದ ಬಳಿಕ ಅವರು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

2017ರಿಂದಲೂ ಗ್ರಾಮ ಪಂಚಾಯಿತಿಗಳಿಂದ ವಿದ್ಯುತ್ ಬಿಲ್ ಬಾಕಿ ಉಳಿದಿದೆ. ರಾಜ್ಯದ ವಿವಿಧ ಎಸ್ಕಾಂಗಳಿಗೆ ₹ 3,518.05 ಕೋಟಿ ವಿದ್ಯುತ್ ಬಿಲ್ ಮತ್ತು ₹ 711.55 ಕೋಟಿ ಬಡ್ಡಿ ಪಾವತಿಸಬೇಕಿದೆ. ಈ ವಿಷಯವನ್ನು ಆದಷ್ಟು ಬೇಗ ಇತ್ಯರ್ಥಪಡಿಸಲಾಗುವುದು. ಅಗತ್ಯ ಕಂಡುಬಂದರೆ ಮುಖ್ಯಮಂತ್ರಿ ಹಾಗೂ ಇಂಧನ ಸಚಿವರ ಜತೆಗೆ ಸಭೆ ನಡೆಸಿ ಒಂದು ಬಾರಿ ತೀರುವಳಿಗೆ ಸೂತ್ರ ರೂಪಿಸಲಾಗುವುದು ಎಂದರು.

ಭವಿಷ್ಯದಲ್ಲಿ ಈ ಸಮಸ್ಯೆ ಮರುಕಳಿಸದಂತೆ ತಡೆಯಲಾಗುವುದು. ಪ್ರತಿ ತಿಂಗಳು ಆಯಾ ಗ್ರಾಮ ಪಂಚಾಯಿತಿಗಳು ಬಳಕೆ ಮಾಡುವ ವಿದ್ಯುತ್‌ನ ಪ್ರಮಾಣಕ್ಕೆ ಅನುಗುಣವಾಗಿ ಪಂಚಾಯಿತಿಗಳ ‘ಎಸ್ಕ್ರೋ’ ಖಾತೆಯಿಂದ ಇ–ಬೆಳಕು ತಂತ್ರಾಂಶದ ಮೂಲಕ ಎಸ್ಕಾಂಗಳಿಗೆ ಪಾವತಿಯಾಗುತ್ತದೆ. ಇದರಿಂದಾಗಿ ವಿದ್ಯುತ್ ಬಿಲ್ ಮೊತ್ತ ಬಾಕಿ ಉಳಿಯುವ ಪ್ರಶ್ನೆ ಉದ್ಭವಿಸುವುದಿಲ್ಲ ಎಂದು ಹೇಳಿದರು.

ಬೆಸ್ಕಾಂ ವ್ಯಾಪ್ತಿಯ ಎಂಟು ಜಿಲ್ಲೆಗಳ 1,378 ಗ್ರಾಮ ಪಂಚಾಯಿತಿಗಳಲ್ಲಿ ತಕ್ಷಣದಿಂದಲೇ ಇ–ಬೆಳಕು ತಂತ್ರಾಂಶದ ಬಳಕೆ ಅನುಷ್ಠಾನಕ್ಕೆ ಬರಲಿದೆ. ಉಳಿದ ಗ್ರಾಮ ಪಂಚಾಯಿತಿಗಳಲ್ಲಿ ಎರಡು ತಿಂಗಳೊಳಗೆ ಇ–ಬೆಳಕು ತಂತ್ರಾಂಶ ಬಳಕೆಗೆ ಬರಲಿದೆ ಎಂದರು.

ಪಾರದರ್ಶಕತೆಗೆ ಒತ್ತು: ಈ ಹಿಂದೆ ಬಳಕೆಗೆ ತಂದಿದ್ದ ‘ಗಾಂಧಿ ಸಾಕ್ಷಿ ಕಾಯಕ’ ತಂತ್ರಾಂಶದಲ್ಲಿನ ಲೋಪಗಳನ್ನು ಸರಿಪಡಿಸಿ, ‘ಗಾಂಧಿ ಸಾಕ್ಷಿ ಕಾಯಕ–2.0’ ತಂತ್ರಾಂಶ ರೂಪಿಸಲಾಗಿದೆ. ಈ ತಂತ್ರಾಂಶವು ಇಲಾಖೆಯ ಕಾಮಗಾರಿಗಳ ನಿರ್ವಹಣೆಯಲ್ಲಿ ಸಂಪೂರ್ಣ ಪಾರದರ್ಶಕತೆ ತರಲಿದೆ ಎಂದು ಈಶ್ವರಪ್ಪ ತಿಳಿಸಿದರು.

ಎಲ್ಲ ಹಂತದ ಕಾಮಗಾರಿಗಳ ಸಮಗ್ರ ಮಾಹಿತಿಯನ್ನು ತಂತ್ರಾಂಶದಲ್ಲಿ ಅಳವಡಿಸಲಾಗುವುದು. ಇದರಿಂದ ಹಣದ ಸೋರಿಕೆ ತಡೆಯಲು ಸಾಧ್ಯವಾಗಲಿದೆ. ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ ಮತ್ತು ಪಂಚಾಯತ್ ರಾಜ್ ಎಂಜನಿಯರಿಂಗ್ ಇಲಾಖೆಗಳಲ್ಲಿ ತಕ್ಷಣದಿಂದಲೇ ಈ ತಂತ್ರಾಂಶದ ಬಳಕೆ ಆರಂಭವಾಗಲಿದೆ ಎಂದರು.

ಇಂಧನ ಸಚಿವ ವಿ. ಸುನಿಲ್ ಕುಮಾರ್, ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ಎಂ.ಪಿ. ರೇಣುಕಾಚಾರ್ಯ, ಇಂಧನ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಜಿ. ಕುಮಾರ್ ನಾಯ್ಕ್, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಆಯುಕ್ತೆ ಶಿಲ್ಪಾ ನಾಗ್ ಉಪಸ್ಥಿತರಿದ್ದರು.

‘ಇ–ಬೆಳಕು’ ಮತ್ತು ‘ಗಾಂಧಿ ಸಾಕ್ಷಿ ಕಾಯಕ–2.0’ ತಂತ್ರಾಂಶಗಳನ್ನು ಸಚಿವರಾದ ಕೆ.ಎಸ್. ಈಶ್ವರಪ್ಪ ಮತ್ತು ವಿ. ಸುನಿಲ್ ಕುಮಾರ್ ಗುರುವಾರ ಅನಾವರಣಗೊಳಿಸಿದರು. ಇಂಧನ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಜಿ. ಕುಮಾರ್ ನಾಯ್ಕ್, ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ಎಂ.ಪಿ. ರೇಣುಕಾಚಾರ್ಯ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಆಯುಕ್ತರಾದ ಶಿಲ್ಪಾ ನಾಗ್ ಇದ್ದರು – ಪ್ರಜಾವಾಣಿ ಚಿತ್ರ

‘ಭ್ರಷ್ಟಾಚಾರ ನಿಯಂತ್ರಿಸಿದ್ದೀರಾ?’

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಾವು ಸಚಿವರಾಗಿ ನಿರ್ವಹಣೆ ಮಾಡಿದ ಇಲಾಖೆಗಳಲ್ಲಿ ಭ್ರಷ್ಟಾಚಾರ ನಿಯಂತ್ರಿಸಲು ಕೈಗೊಂಡಿರುವ ಕ್ರಮಗಳೇನು ಎಂಬುದರ ಮಾಹಿತಿಯನ್ನು ಜಲ ಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಅವರು ಬಹಿರಂಗಪಡಿಸಲಿ ಎಂದು ಕರ್ನಾಟಕ ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಡಿ.ಕೆಂಪಣ್ಣ ಒತ್ತಾಯಿಸಿದ್ದಾರೆ.

ಡಿ.ಕೆಂಪಣ್ಣ

ಗುರುವಾರ ಪತ್ರಿಕಾ ಹೇಳಿಕೆ ನೀಡಿರುವ ಅವರು, ‘ಶೇಕಡ 40ರಷ್ಟು ಕಮಿಷನ್, ಶೇ 20ರಷ್ಟು ತೆರಿಗೆ ಪಾವತಿಸಿ, ಶೇ 40ರಷ್ಟು ಮೊತ್ತದಲ್ಲಿ ಕೆಲಸ ಮಾಡಿದ ಗುತ್ತಿಗೆದಾರರು ಯಾರು ಎಂದು ಸಚಿವರು ಪ್ರಶ್ನಿಸಿದ್ದಾರೆ. ಶೇ 40ರಷ್ಟು ಕಮಿಷನ್ ಪಡೆದು ಕೆಲಸ ಮಾಡಿಸಿಕೊಳ್ಳುತ್ತಿರುವವರು ಯಾರು ಎಂದು ಅವರು ಪ್ರಶ್ನಿಸಿದ್ದರೆ ಲೋಕಕ್ಕೆ ಉಪಯೋಗವಾಗುತ್ತಿತ್ತು’ ಎಂದಿದ್ದಾರೆ.

ಸಚಿವರು ತಮ್ಮ ಇಲಾಖೆಯಲ್ಲಿ ಭ್ರಷ್ಟಾಚಾರ ನಿಯಂತ್ರಣಕ್ಕೆ ಕ್ರಮ ಕೈಗೊಂಡಿದ್ದರೆ ತಿಳಿಸಲಿ. ತಮಿಳುನಾಡು ಮಾದರಿಯಲ್ಲಿ ಪ್ಯಾಕೇಜ್ ಟೆಂಡರ್ ರದ್ದುಪಡಿಸಿದ್ದರೆ ಹೇಳಲಿ. ಅವರಿಗೆ ಸಂಪೂರ್ಣ ಸಹಕಾರ ನೀಡಲು ಗುತ್ತಿಗೆದಾರರ ಸಂಘ ಸಿದ್ಧವಾಗಿದೆ ಎಂದು ತಿಳಿಸಿದ್ದಾರೆ.

‘ಭ್ರಷ್ಟಾಚಾರದ ವಿಷಯದಲ್ಲಿ ನಾವು ಈಗಿನ ಸರ್ಕಾರದ ವಿರುದ್ಧ ಮಾತ್ರ ಆರೋಪ ಮಾಡಿಲ್ಲ. ಹಿಂದೆಯೂ ಭ್ರಷ್ಟಾಚಾರ ಇತ್ತು. ಎಲ್ಲ ಪಕ್ಷಗಳ ಸರ್ಕಾರಗಳು ಇದ್ದಾಗಲೂ ಇತ್ತು. ಹಲವು ವರ್ಷಗಳಿಂದ ಪರಿಸ್ಥಿತಿ ಹದಗೆಡುತ್ತಾ ಬಂದಿದೆ. ಈ ಕುರಿತು ಪ್ರಧಾನಿಯವರಿಗೆ ದೂರು ನೀಡಿದ್ದೇವೆ. ಅವರನ್ನು ಖುದ್ದಾಗಿ ಭೇಟಿಮಾಡಿ ಅಹವಾಲು ಹೇಳಲು ಪ್ರಯತ್ನಿಸುತ್ತೇವೆ. ಬಿಜೆಪಿ ವರಿಷ್ಠರಿಗೂ ದೂರು ನೀಡುತ್ತೇವೆ’ ಎಂದು ಕೆಂಪಣ್ಣ ಹೇಳಿದ್ದಾರೆ.

- ಬಾಗಲಕೋಟೆ ತಾಲ್ಲೂಕಿನ ಶೀಗಿಕೇರಿ ಗ್ರಾಮದಲ್ಲಿ ಪರಿವರ್ತನ ಸಾಮಾಜಿಕ ಸೇವಾ ಸಂಘಕ್ಕೆ 5 ಎಕರೆ ಸರ್ಕಾರಿ ಗೋಮಾಳ ಜಮೀನು ಉಚಿತವಾಗಿ ಮಂಜೂರಾತಿಗೆ ಅನುಮೋದನೆ ನೀಡಲಾಗಿದೆ. ವಿಜಯಪುರ ಜಿಲ್ಲೆಯ ತಿಕೋಟಾ ತಾಲ್ಲೂಕಿನ ನವರಸಪೂರ ಗ್ರಾಮದಲ್ಲಿ ಸಿದ್ಧಲಿಂಗೇಶ್ವರ ವಿದ್ಯಾ ಅಭಿವೃದ್ಧಿ ಟ್ರಸ್ಟ್‌ಗೆ 5 ಎಕರೆ ಜಮೀನು ಮಂಜೂರು
- ದಕ್ಷಿಣ ಕನ್ನಡ ಜಿಲ್ಲೆಯ ಮೂಡುಬಿದಿರೆ ತಾಲ್ಲೂಕಿನ ಮಾರ್ಪಾಡಿ ಗ್ರಾಮದಲ್ಲಿ ಪ್ರೇರಣಾ ಸೇವಾ ಟ್ರಸ್ಟ್‌ಗೆ 25 ಸೆಂಟ್ಸ್ ಮತ್ತು ಉಡುಪಿ ಜಿಲ್ಲೆಯ ಕಾಪು ತಾಲ್ಲೂಕಿನ ಪಡುಗ್ರಾಮದಲ್ಲಿ ಕಾಪು ಬಂಟರ ಸಂಘಕ್ಕೆ 10 ಗುಂಟೆ ಜಮೀನು ಮಂಜೂರು ಮಾಡಲು ಒಪ್ಪಿಗೆ ದೊರಕಿದೆ.
- ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ತಾಲ್ಲೂಕಿನ ರಾಜಘಟ್ಟ ಗ್ರಾಮದಲ್ಲಿ ಮಾರುತಿ ಎಜುಕೇಷನ್ ಟ್ರಸ್ಟ್‌ಗೆ ಗುತ್ತಿಗೆಗೆ ನೀಡಿರುವ 2 ಎಕರೆ 8 ಗುಂಟೆ ಜಮೀನಿಗೆ ಬಾಡಿಗೆಯನ್ನು ಪರಿಷ್ಕರಿಸಿ, ಮಾರ್ಗಸೂಚಿ ದರದ ಶೇ 50ರ ಮೊತ್ತದಲ್ಲಿ ಶೇ 1ರಷ್ಟನ್ನು ವಿಧಿಸಲು ತೀರ್ಮಾನಿಸಲಾಗಿದೆ.

ಕೆಪಿಎಸ್‌ಸಿ: 362 ಅಭ್ಯರ್ಥಿಗಳ ರಕ್ಷಣೆಗೆ ನಿರ್ಧಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) 2011ನೇ ಸಾಲಿನಲ್ಲಿ ನಡೆಸಿದ್ದ ಗೆಜೆಟೆಡ್ ಪ್ರೊಬೇಷನರಿ ಅಧಿಕಾರಿಗಳ ನೇಮಕಾತಿ ಪರೀಕ್ಷೆಯಲ್ಲಿ ಆಯ್ಕೆಯಾಗಿದ್ದ 362 ಅಭ್ಯರ್ಥಿಗಳಿಗೆ ರಕ್ಷಣೆ ನೀಡಲು ಅಗತ್ಯ ಕ್ರಮವಹಿಸಲು ಗುರುವಾರ ನಡೆದ ಸಚಿವ ಸಂಪುಟ ಸಭೆ ನಿರ್ಧರಿಸಿದೆ.

ಈ ಮಾಹಿತಿ ನೀಡಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ. ಮಾಧುಸ್ವಾಮಿ, ‘ಅಭ್ಯರ್ಥಿಗಳಿಗೆ ನ್ಯಾಯ ಒದಗಿಸಲು ಸಂಪುಟ ತೀರ್ಮಾನಿಸಿದೆ. ಅದಕ್ಕೆ ಪೂರಕವಾಗಿ ಕಡತಗಳನ್ನು ಅಧ್ಯಯನ ಮಾಡಿ, ಪ್ರಸ್ತಾವ ಸಿದ್ಧಪಡಿಸುವಂತೆ ಮುಖ್ಯಮಂತ್ರಿಯವರು ನನಗೆ ಜವಾಬ್ದಾರಿ ನೀಡಿದ್ದಾರೆ’ ಎಂದು ಹೇಳಿದರು.

2011ರಲ್ಲಿ 362 ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ಭರ್ತಿಗೆ ಕೆಪಿಎಸ್‌ಸಿ ನಡೆಸಿದ ಪರೀಕ್ಷೆಯಲ್ಲಿ ಅಕ್ರಮ, ಭ್ರಷ್ಟಾಚಾರ ನಡೆದಿದೆ ಎಂಬ ಆರೋಪ ಕೇಳಿ ಬಂದಿತ್ತು. ಈ ಕುರಿತು ಸಿಐಡಿ ತನಿಖೆಯೂ ನಡೆದಿತ್ತು. 362 ಅಭ್ಯರ್ಥಿಗಳ ನೇಮಕಾತಿ ರದ್ದುಗೊಳಿಸಿ ಹೈಕೋರ್ಟ್ ಆದೇಶ ಹೊರಡಿಸಿತ್ತು. ಈ ಪ್ರಕರಣದಲ್ಲಿ ಕೆಪಿಎಸ್‌ಸಿಯ ಆಗಿನ ಅಧ್ಯಕ್ಷರು ಮತ್ತು ಸದಸ್ಯರ ವಿರುದ್ಧ ವಿಚಾರಣೆಗೆ ಅನುಮತಿ ನೀಡಲು ಸರ್ಕಾರ ನಿರಾಕರಿಸಿತ್ತು.

ಎಲ್ಲ 362 ಜನರಿಗೂ ಮರುನೇಮಕಾತಿ ಆದೇಶ ನೀಡಬೇಕೆಂಬ ಆಗ್ರಹ ಕೇಳಿಬಂದಿತ್ತು. ರಕ್ಷಣೆ ನೀಡುವುದಾಗಿ ಸರ್ಕಾರ ವಿಧಾನಮಂಡಲದಲ್ಲೇ ಭರವಸೆ ನೀಡಿತ್ತು. ತುಮಕೂರು ಸಿದ್ಧಗಂಗಾಮಠದ ಸಿದ್ಧಲಿಂಗ ಸ್ವಾಮೀಜಿ ಅವರೂ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಇತ್ತೀಚೆಗೆ ಪತ್ರ ಬರೆದು ಇದೇ ಬೇಡಿಕೆ ಮುಂದಿಟ್ಟಿದ್ದರು.

‘ಜಿಲ್ಲೆ ಹಾಳು ಮಾಡಿದ ಬಿಜೆಪಿ ಗೆಲ್ಲಲ್ಲ’

ಪ್ರಜಾವಾಣಿ ವಾರ್ತೆ

ಸಂಸದ ಬಸವರಾಜು ಅವರೊಬ್ಬರೇ ಪಕ್ಷದಲ್ಲಿ ಇರಲಿ. ನನ್ನನ್ನು ಬೇಕಾದರೆ ಪಕ್ಷದಿಂದ ಹೊರ ಹಾಕಲಿ. ಏನು ಬೇಕೋ ಆ ಕ್ರಮ ಕೈಗೊಳ್ಳಲಿ. ಅವರ ಮನಸ್ಸಿನಲ್ಲಿ ಇದ್ದದ್ದನ್ನು ಇಂದು ಹೊರ ಹಾಕಿದ್ದಾರೆ ಅಷ್ಟೇ.

ಜೆ.ಸಿ. ಮಾಧುಸ್ವಾಮಿ, ಕಾನೂನು ಮತ್ತು ಸಂಸದೀಯ ಸಚಿವ

ಈ ನನ್ಮಗ ನಮ್ಮ ಮಂತ್ರಿ ಹೆಂಗೆ ಗೊತ್ತಾ... ದಕ್ಷಿಣ ಕೊರಿಯಾದ ಕಿಂಗ್‌ಪಿನ್ ಇದ್ದಾನಲ್ಲ (ಉತ್ತರ ಕೊರಿಯಾದ ಸರ್ವಾಧಿಕಾರಿ ಕಿಮ್ ಜಾಂಗ್ ಉನ್) ಅವನಂತೆ. ನಮ್ಮ ಜಿಲ್ಲೆಯನ್ನು ಹಾಳು ಮಾಡಿದ್ದಾನೆ.

ಜಿ.ಎಸ್.ಬಸವರಾಜು

ಸಂಸದ

ತುಮಕೂರು: ಬಿಜೆಪಿ ಸಂಸದ ಜಿ.ಎಸ್.ಬಸವರಾಜು ಗುರುವಾರ ತಮ್ಮದೇ ಪಕ್ಷದ ನಾಯಕ ಹಾಗೂ ಕಾನೂನು ಮತ್ತು ಸಂಸದೀಯ ಸಚಿವ ಜೆ.ಸಿ.ಮಾಧುಸ್ವಾಮಿ ವಿರುದ್ಧ ಏಕ ವಚನದಲ್ಲೇ ಅಸಮಾಧಾನ ಹೊರ ಹಾಕಿದ್ದಾರೆ. ಇದರೊಂದಿಗೆ ಜಿಲ್ಲೆಯ ಬಿಜೆಪಿ ನಾಯಕರ ನಡುವಿನ ಭಿನ್ನಮತ ಸ್ಫೋಟಗೊಂಡಿದೆ.

ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜು ಸ್ಮಾರ್ಟ್ ಸಿಟಿ ಯೋಜನೆಯಲ್ಲಿ ವಿವಿಧ ಕಾಮಗಾರಿಗಳಿಗೆ ಚಾಲನೆ ನೀಡಲು ಗುರುವಾರ ನಗರಕ್ಕೆ ಬಂದಿದ್ದರು. ಕಾರ್ಯಕ್ರಮಕ್ಕೂ ಮುನ್ನ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು. ವೇದಿಕೆಯಲ್ಲಿ ಬೈರತಿ ಹಾಗೂ ಸಂಸದ ಬಸವರಾಜು ಅಕ್ಕಪಕ್ಕದಲ್ಲಿ ಕುಳಿತಿದ್ದರು. ಗೋಷ್ಠಿ ಆರಂಭಕ್ಕೂ ಮೊದಲು ಬೈರತಿ ಹಾಗೂ ಸಂಸದರ ನಡುವೆ ನಡೆದಿರುವ ಚುಟುಕು ಸಂಭಾಷಣೆ ಟಿ.ವಿ ಮಾಧ್ಯಮದವರ ಕ್ಯಾಮೆರಾದಲ್ಲಿ ಸೆರೆಯಾಗಿದೆ.

‘ಮಂತ್ರಿ ಮಾತೆತ್ತಿದರೆ ಹೊಡಿ, ಕಡಿ ಅಂತಾನೆ. ಎಂಜಿನಿಯರ್‌ಗೆ ಹೆಂಡತಿ ಸೀರೆ ಸೆಣೆಯಲು ಲಾಯಕ್ಕು ಎನ್ನುತ್ತಾನೆ. ಸಭೆಯಿಂದ ನಡಿ ಆಚೆ ಎನ್ನುತ್ತಾನೆ’ (ಹಿಂದಿನ ವರ್ಷ ಕೆಡಿಪಿ ಸಭೆಯಲ್ಲಿ ಕೆಲಸ ಮಾಡದ ಎಂಜಿನಿಯರನ್ನು ಮಾಧುಸ್ವಾಮಿ ತರಾಟೆಗೆ ತೆಗೆದುಕೊಂಡಿದ್ದರು) ಎಂದು ಅಸಮಾಧಾನ ತೋಡಿಕೊಳ್ಳುತ್ತಾರೆ. ಆ ಸಮಯದಲ್ಲಿ ಬೈರತಿ ಅವರು ಜಿ.ಎಸ್.ಬಸವರಾಜು ಅವರನ್ನು ಸುಮ್ಮನಿರಿಸುವ ಪ್ರಯತ್ನ ಮಾಡುತ್ತಲೇ ‘ನಮ್ಮ ಎಂಜಿನಿಯರ್‌ಗಾ’ ಎಂದು ಕೇಳುತ್ತಾರೆ. ಆ ಮೇಲೆ ಮಾತನಾಡೋಣ ಎನ್ನುತ್ತಾರೆ.

ನಂತರ ಮಾತು ಮುಂದುವರೆಸಿದ ಜಿ.ಎಸ್.ಬಸವರಾಜು, ‘ಅವನ್ಯಾರನ್ನೋ ನಮ್ಮ ತಾಲ್ಲೂಕಿಗೆ ಕರೆದುಕೊಂಡು ಬಂದ. ಅವನು ಬರುವಾಗಲೇ ಒಂದು ಸಾವಿರ ಕೋಟಿ ಡಿಕ್ಲೇರ್ ಮಾಡಿಕೊಂಡು ಬಂದಿದ್ದಾನೆ (ವಿಧಾನ ಪರಿಷತ್ ಅಭ್ಯರ್ಥಿಯಾಗಿದ್ದ ಲೋಕೇಶ್‌ಗೌಡ ಕುರಿತು). ಅವನು ನಮ್ಮನ್ನು ಕರೆಯಲಿಲ್ಲ, ಮಾತನಾಡಿಸಲೂ ಇಲ್ಲ’ ಎನ್ನುತಾರೆ (ಸಚಿವ ಮಾಧುಸ್ವಾಮಿ ಅವರು ಲೋಕೇಶ್‌ಗೌಡ ಅವರನ್ನು ಕರೆತಂದಿದ್ದರು ಎಂಬ ಕಾರಣಕ್ಕೆ ಈ ವಿಚಾರ ಪ್ರಸ್ತಾಪವಾಗಿದೆ).

ಇದೆಲ್ಲವನ್ನೂ ಕಿವಿಯಲ್ಲಿ ಕೇಳಿಸಿಕೊಂಡ ಬೈರತಿ ಅವರು ಸಾಕು, ಎನ್ನುತ್ತಲೇ ಪತ್ರಿಕಾಗೋಷ್ಠಿ ಆರಂಭಿಸಲೇ ಎನ್ನುತ್ತಾರೆ.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಹೊರಗೆ ಹೋಗುವಾಗ ಮುಖಗವಸು ಧರಿಸಿ

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

ಸಂಚಾರ (ವಾಣಿಜ್ಯ) ಶಾಖೆ

ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು–560027.

ಟೆಂಡರ್ ಆಹ್ವಾನದ ಸೂಚನಾ ಪತ್ರ

ಕರಾರಸಾನಿ/ಸಂಚಾರ/ಅವತಾರ್–ಇ6874/245/2021–22 ದಿನಾಂಕ: 06–01–2022

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಬಸ್ಸುಗಳ ಆಸನಗಳನ್ನು ಆನ್‌ಲೈನ್ ಮೂಲಕ ಮುಂಗಡವಾಗಿ ಕಾಯ್ದಿರಿಸುವ ಹಾಗೂ ಇತರೆ ಅಪ್ಲಿಕೇಷನ್ ಸಲುವಾಗಿ ಪೇಮೆಂಟ್ ಗೇಟ್ ವೇ (Payment Gateway) ಹಾಗೂ ಎಲೆಕ್ಟ್ರಾನಿಕ್ ಪೇಮೆಂಟ್ ಸೇವೆಯನ್ನು ಒದಗಿಸುವ ಸಂಬಂಧ ಸರ್ವೀಸ್ ಪ್ರೊವೈಡರ್ ಅನ್ನು ಆಯ್ಕೆ ಮಾಡುವ ಸಲುವಾಗಿ ಇ–ಪೋರ್ಟಲ್ (ಅಂತರ್ಜಾಲ) ಮುಖೇನ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಕ್ರ.ಸಂ.	ಟೆಂಡರ್ ಸಂಖ್ಯೆ	ಇ.ಎಂ.ಡಿ.(ರೂ.)
1.	ಸಂ: ಕರಾರಸಾನಿ/ಸಂಚಾರ/ಅವತಾರ್–ಇ6874/04/2021–22	ರೂ. 1,00,000/–

1. ನಿಗದಿತ ದಿನಾಂಕ ಮತ್ತು ಸಮಯ:

ವಿಷಯ	ದಿನಾಂಕ	ಸಮಯ
ಪ್ರೀ–ಬಿಡ್ ಸಭೆ	13–01–2022	11.00 ಗಂಟೆ
ಅಹವಾಲುಗಳನ್ನು ಸಲ್ಲಿಸಲು ಕೊನೆಯ ದಿನಾಂಕ	14–01–2022	17.00 ಗಂಟೆ
ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ	24–01–2022	17.00 ಗಂಟೆ
ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ	28–01–2022	11.00 ಗಂಟೆ
ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ	01–02–2022	11.00 ಗಂಟೆ

(2) ತಾಂತ್ರಿಕ ಬಿಡ್‌ನಲ್ಲಿ ಅರ್ಹವಾಗುವ ಬಿಡ್‌ದಾರರುಗಳ ಆರ್ಥಿಕ ಬಿಡ್‌ಗಳನ್ನು ಮಾತ್ರ ತೆರೆಯಲಾಗುವುದು. (3) ಟೆಂಡರ್ ಸಂಬಂಧಿತ ದಾಖಲಾತಿಗಳನ್ನು, ಷರತ್ತು & ನಿಬಂಧನೆಗಳು, ನಿಗದಿತ ಮಾನದಂಡಗಳು ಮತ್ತು ಇತರೆ ದಾಖಲಾತಿಗಳನ್ನು ಇ–ಪ್ರೊಕ್ಯೂರ್‌ಮೆಂಟ್‌ನ ವೆಬ್‌ಸೈಟ್: www.eproc.karnataka.gov.in. (4) ನಿಗದಿತ ಇ.ಎಂ.ಡಿ ಮೊತ್ತದಲ್ಲಿ ರೂ. 500/– ಗಳನ್ನು ಇ–ಪೋರ್ಟಲ್ ಮುಖೇನ ಹಾಗೂ ಇನ್ನುಳಿದ ರೂ. 99,500/– ಗಳನ್ನು ಡಿ.ಡಿ ಮುಖೇನ CAO-FA, KSRTC, Bengaluru-560027, ಇವರ ಹೆಸರಿಗೆ ಪಾವತಿಯಾಗುವಂತೆ ಸಲ್ಲಿಸುವುದು. (5) ಯಾವುದೇ ಕಾರಣ ನೀಡದೇ ಟೆಂಡರ್‌ನ್ನು ಪುರಸ್ಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ನಿಗಮವು ಕಾಯ್ದಿರಿಸಿಕೊಂಡಿರುತ್ತದೆ.

ಸಹಿ/–

ಮುಖ್ಯ ಸಂಚಾರ ವ್ಯವಸ್ಥಾಪಕರು (ವಾಣಿಜ್ಯ)

ಕೇಂದ್ರ ಕಛೇರಿ, ಶಾಂತಿನಗರ, ಬೆಂಗಳೂರು

ವಾ.ಸಾ.ಸಂ.ಇ/ಬೆಂ.ನಗರ/2737/ಆಕಾರ್/2021–22

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)

ನಂ. 49, ಈಸ್ಟ್ ವಿಂಗ್, 4ನೇ ಮತ್ತು 5ನೇ ಮಹಡಿ, ಖನಿಜ ಭವನ,

ರೇಸ್ ಕೋರ್ಸ್ ರಸ್ತೆ, ಬೆಂಗಳೂರು – 560 001. ಫೋನ್ : 080–22265383

website: www.kiadb.in

ನಂ. ಐಎಡಿಬಿ/ಇಎನ್‌ಜಿಜೆ/ಇಟಿಎನ್‌ಡಿ–ಡಿಪಿಆರ್–07/13131/2021–22 ದಿನಾಂಕ: 05.01.2022

ಟೆಂಡರ್ ಆಹ್ವಾನ ಪ್ರಕಟಣೆ

(ಜಿ.ಓ.ಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕೆಐಎಡಿಬಿಯು ಈ ಕೆಳಕಂಡ ಯೋಜನೆಗೆ ವಿವರವಾದ ಯೋಜನಾ ವರದಿಯನ್ನು ಸಿದ್ಧಪಡಿಸುವುದಕ್ಕಾಗಿ ಇದೇ ರೀತಿಯ ಕಾಮಗಾರಿಯನ್ನು ನಿರ್ವಹಿಸಿದ ದಾಖಲೆಯುಳ್ಳ ಮತ್ತು ಹೆಚ್ಚಿನ ಅನುಭವವಿರುವ, ಬೆಂಗಳೂರಿನಲ್ಲಿ ಕಛೇರಿಯುಳ್ಳ ಪ್ರತಿಷ್ಠಿತ ಅರ್ಹ ಸಮಾಲೋಚಕರು / ಸಂಸ್ಥೆಗಳಿಂದ ದ್ವಿ–ಲಕೋಟೆ ಬಿಡ್ ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಿದೆ.

ಕಾಮಗಾರಿಯ ಹೆಸರು: ಬೆಳಗಾವಿ ಜಿಲ್ಲೆ ಹುಕ್ಕೇರಿ ತಾಲ್ಲೂಕು, ಕಣಗಲಾ ಕೈಗಾರಿಕಾ ಪ್ರದೇಶಕ್ಕೆ ಹಿಡ್ಕಲ್ ಜಲಾಶಯದಿಂದ 5 ಎಂಎಲ್‌ಡಿ ನೀರು ಸರಬರಾಜು ಯೋಜನೆಯನ್ನು ಅನುಷ್ಠಾನಗೊಳಿಸಲು ಆರ್ಥಿಕ ವಿಶ್ಲೇಷಣೆ, ವಿನ್ಯಾಸ, ಕಾರ್ಯಸಾಧ್ಯತೆ ವರದಿಯನ್ನು ಒಳಗೊಂಡ ವಿವರವಾದ ಯೋಜನಾ ವರದಿಯನ್ನು (ಡಿ.ಪಿ.ಆರ್) ಸಿದ್ಧಪಡಿಸುವ ಸಲಹಾ ಸೇವೆಯನ್ನು ಒದಗಿಸುವುದು.

ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: 02.02.2022, ಸಂಜೆ 4.00 ಗಂಟೆವರೆಗೆ.

ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ದಿನಾಂಕ: 07.01.2022 ರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/–

DIPR/DDU/Zen/R.O:2697/2021-22 ಮುಖ್ಯ ಅಭಿಯಂತರರು–1, ಕೆಐಎಡಿಬಿ, ಬೆಂಗಳೂರು

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ವಿಜಯನಗರ ನಿರ್ಮಿತಿ ಕೇಂದ್ರ, ವಿಜಯನಗರ ಜಿಲ್ಲೆ

No. VNK/ADM/2021-22/13 Date: 19.11.2021

ಅಧಿಸೂಚನೆ

ವಿಜಯನಗರ ನಿರ್ಮಿತಿ ಕೇಂದ್ರ, ವಿಜಯನಗರ ಜಿಲ್ಲೆ ಇವರು ಈ ಕೆಳಕಾಣಿಸಿದ ಹುದ್ದೆಗಳಿಗೆ ಒಂದು ವರ್ಷದ ಅವಧಿಗೆ ಮಾತ್ರ ಗುತ್ತಿಗೆ ಆಧಾರದ ಮೇಲೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಕ್ರ.ಸಂ.	ಹುದ್ದೆಯ ಹೆಸರು	ಹುದ್ದೆಗಳ ಸಂಖ್ಯೆ	ವಿದ್ಯಾರ್ಹತೆ
1	ಅಕೌಂಟೆಂಟ್	01	ಬಿ.ಕಾಂ.
2	ಅಸಿಸ್ಟೆಂಟ್ ಅಕೌಂಟೆಂಟ್	01	ಬಿ.ಕಾಂ.

ಸಂಬಂಧಿಸಿದ ಕ್ಷೇತ್ರಗಳಲ್ಲಿ ಹೆಚ್ಚಿನ ವಿದ್ಯಾರ್ಹತೆ ಮತ್ತು ಅನುಭವವುಳ್ಳವರಿಗೆ ಆದ್ಯತೆ ನೀಡಲಾಗುವುದು. ಅರ್ಹ ಅಭ್ಯರ್ಥಿಗಳು ಅರ್ಜಿ ಹಾಗೂ ಸಂಬಂಧಿಸಿದ ದಾಖಲಾತಿಗಳನ್ನು **ದಿನಾಂಕ: 16–01–2022** ಸಮಯ ಸಾಯಂಕಾಲ **5:00** ರೊಳಗೆ **htpps://ballari.nic.in/** ಈ ವೆಬ್‌ಸೈಟಿನಲ್ಲಿ ಅರ್ಜಿ ಸಲ್ಲಿಸಲು ಕೋರಿದೆ. ಅಂಚೆ ಮೂಲಕವಾಗಲಿ ಮತ್ತು ಖುದ್ದಾಗಿ ಸಲ್ಲಿಸಲು ಅವಕಾಶವಿರುವುದಿಲ್ಲ.

ಆನ್‌ಲೈನ್ ಅರ್ಜಿ ಮತ್ತು ಅಧಿಸೂಚನೆ ವಿವರಗಳಿಗಾಗಿ **https://ballari.nic.in** ವೆಬ್‌ಸೈಟ್‌ನ್ನು ಸಂಪರ್ಕಿಸಲು ಕೋರಿದೆ.

ಸಹಿ/– ಅಧ್ಯಕ್ಷರು, ವಿಜಯನಗರ ನಿರ್ಮಿತಿ ಕೇಂದ್ರ ಹಾಗೂ ಜಿಲ್ಲಾಧಿಕಾರಿಗಳು, ವಿಜನಯನಗರ ಜಿಲ್ಲೆ

ಕರ್ನಾಟಕ ಸರ್ಕಾರ

ಅಬ್ದುಲ್ ನಜೀರ್ ಸಾಬ್

ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ

ಲಲಿತಮಹಲ್ ರಸ್ತೆ, ಮೈಸೂರು 570 011

No.SIRD/Admin/02/2021-22 ದಿನಾಂಕ : 06.01.2022

ಗುತ್ತಿಗೆ ನೇಮಕಾತಿ ಮರುಪ್ರಕಟಣೆ

ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ, ಮೈಸೂರು ವತಿಯಿಂದ ಆಯುಕ್ತರು, ಪಂಚಾಯತ್ ರಾಜ್ ಆಯುಕ್ತಾಲಯ, ಬೆಂಗಳೂರು ರವರ ಕಛೇರಿಗೆ 01 ಸಮಲೋಚಕರ ಸೇವೆಯನ್ನು ಗುತ್ತಿಗೆ ಆಧಾರದ ಮೇಲೆ 12 ತಿಂಗಳ ಅವಧಿಗೆ ಅರ್ಜಿಯನ್ನು ಆಹ್ವಾನಿಸಿದೆ. ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: 21.01.2022 ಸಂಜೆ 5.00 ಗಂಟೆಗೆ. ಅರ್ಹತಾ ಮಾನದಂಡ, ಅರ್ಜಿ, ಮತ್ತು ಅಧಿಸೂಚನೆ ಮುಂತಾದ ವಿವರಗಳನ್ನು ಸಂಸ್ಥೆಯ ವೆಬ್‌ಸೈಟ್ **www.sirdmysore.gov.in** ನಿಂದ ಪಡೆಯುವುದು.

ಸಹಿ/–ನಿರ್ದೇಶಕರು,

ಅನಸಾರಾಗಾ&ಪಂ.ರಾ.ಸಂಸ್ಥೆ, ಮೈಸೂರು

ವಾಸಾಸಂಇ/ಉನಿ–ಮೈಸೂರು/ಎಂಸಿಎ/ಡಿ–62/2021–22

ಕರ್ನಾಟಕ ಸರ್ಕಾರ

ಕಾರ್ಯಪಾಲಕ ಇಂಜಿನೀಯರರವರ ಕಛೇರಿ

ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಯಾದಗಿರ

ಸಂಖ್ಯೆ:ಕಾಪಾಅ/ಗ್ರಾನೀಸಮತ್ತುನೈ/ವಿಯಾ/ಟೆ.ಪ್ರ/ಪಿ.ಬಿ/JJM/2021–22/1117 ದಿನಾಂಕ:03–01–2022

ಅಲ್ಪಾವಧಿ ಟೆಂಡರ ಪ್ರಕಟಣೆ (ದ್ವಿ ಲಕೋಟೆ) “ಇ–ಪ್ರೊಕ್ಯೂರ್‌ಮೆಂಟ್” ಮೂಲಕ

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನೀಯರರು, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಯಾದಗಿರಿ ರವರಿಂದ ಕುಡಿಯುವ ನೀರು ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರಿಂದ ಟೆಂಡರ ಅಹ್ವಾನಿಸಲಾಗಿದ್ದು ವಿವರ ಈ ಕೆಳಗಿನಂತಿದೆ.

1) ಕಾಮಗಾರಿಯ ವಿವರ: 1) Golgera Doddi (General)–Est Cost Rs. 99.95 lakhs- Indent No.37437, 2)Nandihalli-J (General)–Est Cost Rs.74.00 lakhs- Indent No. 37438, 3)Tonnur (General)–Est Cost Rs.64.00 lakhs- Indent No. 37439, 4) Tekral (General)–Est Cost Rs.52.00 lakhs- Indent No. 37440, 5) Goudoor (General)–Est Cost Rs.80.00 lakhs- Indent No. 37441 & 6) Madnal (General)–Est Cost Rs.99.98 lakhs- Indent No. 37442 in SHAHAPUR TQ, 2) ಲೆಕ್ಕ ಶಿರ್ಷಿಕೆ: Jal Jeevan Mission-2021-22, 3) ಗುತ್ತಿಗೆದಾರರ, ಅರ್ಹತೆ : 3ನೇ ಹಾಗೂ ಮೇಲ್ಪಟ್ಟು ದರ್ಜೆ, 4) ಟೆಂಡರ ಫಾರಂ ಪಡೆಯುವ ದಿನಾಂಕ: 06–01–2022 ರಿಂದ 13–01–2022, 5) ಟೆಂಡರ್ ಅರ್ಜಿ ಬೆಲೆ ಮತ್ತು ಇ.ಎಂ.ಡಿ ಮೊತ್ತ ಇ–ಪ್ರೊಕ್ಯೂರ್‌ಮೆಂಟ್ ಪ್ರಕಾರ. 6) ಟೆಂಡರ್ ಫಾರಂ ಸಲ್ಲಿಸುವ ಅಂತಿಮ ದಿನಾಂಕ: 13–01–2022 ಸಾಯಂಕಾಲ 4.30 ಗಂಟೆವರೆಗೆ. 7) ತಾಂತ್ರಿಕ ಬಿಡ್ಡ್ ತೆರೆಯುವ ದಿನಾಂಕ: 14–01–2022 ಸಾಯಂಕಾಲ 5.00 ಗಂಟೆಯ ನಂತರ. 8) ಆರ್ಥಿಕ ಬಿಡ್ಡುಗಳನ್ನು ತೆರೆಯುವ ದಿನಾಂಕ: 17–01–2022 ಬೆಳಿಗ್ಗೆ 11.00 ಗಂಟೆಯ ನಂತರ. 9) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ: ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ, ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ರೈಲ್ವೇ ನಿಲ್ದಾಣದ ಹತ್ತಿರ ಯಾದಗಿರ. 10) ಅಂತರ್ಜಾಲ ತಾಣದ ವಿಳಾಸ: www.eproc.karnataka.gov.in.

ಸಹಿ/– ಕಾರ್ಯಪಾಲಕ ಇಂಜಿನೀಯರರು,

ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಯಾದಗಿರಿ.

ವಾ.ಸಾ.ಸಂ.ಇ/ಯಾದಗಿರಿ/314/ಎಂಸಿ&ಎ/2021–22

ಚುನಾವಣಾಧಿಕಾರಿಗಳು,

ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘ (ರಿ.)

ನಂ. 185, ಈಡಿಗ ಭವನ, ರಾಜೀವ್‌ಗಾಂಧಿ ವೃತ್ತ, ಶೇಷಾದ್ರಿಪುರಂ, ಬೆಂಗಳೂರು–560020

ಇವರ ನಡವಳಿಗಳು

ಕ್ರಮ ಸಂಖ್ಯೆ : ಚುನಾವಣಾಧಿಕಾರಿ/01/2021–22 ದಿನಾಂಕ : 06–01–2022

ಪ್ರಕಟಣೆ

ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘ (ರಿ.) ನಂ. 185, ಈಡಿಗ ಭವನ, ರಾಜೀವ್‌ಗಾಂಧಿ ವೃತ್ತ, ಶೇಷಾದ್ರಿಪುರಂ, ಬೆಂಗಳೂರು–560020 ಈ ಸಂಘದ 2021–22 ರಿಂದ 2025–26 ರವರೆಗಿನ ಅವಧಿಯ ಕಾರ್ಯಕಾರಿ ಸಮಿತಿ ಚುನಾವಣೆಯನ್ನು ದಿನಾಂಕ : 9–1–2022ರ ಭಾನುವಾರದಂದು ನಿಗಧಿಪಡಿಸಲಾಗಿತ್ತು. ಸರ್ಕಾರದ ಆದೇಶ ಸಂಖ್ಯೆ : ಆರ್‌ಡಿ 158 ಟಿಎನ್‌ಆರ್ 2020 ದಿ:4–01–2022ರ ಮಾರ್ಗಸೂಚಿಗಳನ್ವಯ ವಾರಾಂತ್ಯದಲ್ಲಿ ಕರ್ಫ್ಯೂ ಜಾರಿಯಲ್ಲಿರುವುದರಿಂದ, ಸಹಕಾರ ಚುನಾವಣಾ ಪ್ರಾಧಿಕಾರದ ಸುತ್ತೋಲೆ ಸಂಖ್ಯೆ : ಸಚುಪ್ರಾ/ಆಡಳಿತ/ಸುತ್ತೋಲೆ/39/2021–22 ದಿನಾಂಕ : 6–1–2022 ರನ್ವಯ ದಿನಾಂಕ : 9–1–2022ರ ಭಾನುವಾರದಂದು ನಿಗಧಿಪಡಿಸಿದ್ದ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಕೋಲಾರ, ರಾಮನಗರ ಮತ್ತು ಮಂಡ್ಯ ಹಾಗೂ ತುಮಕೂರು ಜಿಲ್ಲೆಗಳ ಚುನಾವಣೆಯ ಮತದಾನ ಪ್ರಕ್ರಿಯೆಯನ್ನು ಮುಂದೂಡಿ ದಿನಾಂಕ : 12–01–2022ರ ಬುಧವಾರದಂದು ಬೆಳಿಗ್ಗೆ 9–00 ಘಂಟೆಯಿಂದ ಸಂಜೆ 4–00 ಘಂಟೆಯವರೆಗೆ ಈಗಾಗಲೇ ನಿಗಧಿಪಡಿಸಲಾಗಿದ್ದ ಮತದಾನ ಕೇಂದ್ರಗಳಲ್ಲೇ ಜರುಗಿಸಲು ಮರುನಿಗಧಿಪಡಿಸಿದೆ.

ಸಹಿ/–

(ದೊಡ್ಡತಮ್ಮೇಗೌಡ)

ಚುನಾವಣಾಧಿಕಾರಿಗಳು,

ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘ (ರಿ.)

ಹಾಗೂ ಸಹಕಾರ ಸಂಘಗಳ ಉಪನಿಬಂಧಕರು (ನಿವೃತ್ತ)

ಬೆಂಗಳೂರು

ದಿನಾಂಕ : 06–01–2022

ಸ್ಥಳ : ಬೆಂಗಳೂರು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಚೇರಿ (ವಿದ್ಯುತ್), ಬೊಮ್ಮನಹಳ್ಳಿ ವಲಯ, ಬೇಗೂರು ಮುಖ್ಯರಸ್ತೆ, ಬೊಮ್ಮನಹಳ್ಳಿ, ಬೆಂಗಳೂರು.

ಸಂಖ್ಯೆ: ಬೃಬೆಂಮಪಾ/ಕಾಪಾಅ/ವಿದ್ಯುತ್/ಬೊವ/ಟೆಂಡರ್/05/2021–22ದಿನಾಂಕ: 06.01.2022

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) (ದ್ವಿಲಕೋಟೆ ಟೆಂಡರ್)

(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕಾರ್ಯಪಾಲಕ ಅಭಿಯಂತರರು (ವಿದ್ಯುತ್), ಬೊಮ್ಮನಹಳ್ಳಿ ವಿಭಾಗ, ಇವರು ಬೃ.ಬೆಂ.ಮ.ಪಾಲಿಕೆ ಇವರ ಪರವಾಗಿ, ಕೆಟಿಪಿಪಿ ಕಾಯಿದೆಗಳು 2000ಕ್ಕೆ ಅನುಗುಣವಾಗಿ ಬೃ.ಬೆಂ.ಮ.ಪಾಲಿಕೆ ಅಥವಾ ತತ್ಸಮಾನವಾಗಿ ಸಿ.ಪಿ.ಡಬ್ಲ್ಯೂ.ಡಿ/ಕೆ.ಪಿ.ಡಬ್ಲ್ಯೂ.ಡಿ/ರೈಲ್ವೇಸ್/ಎಂ.ಇ.ಎಸ್/ರಾಷ್ಟ್ರೀಯ ಹೆದ್ದಾರಿ ಅಥವಾ ತತ್ಸಮಾನವಾಗಿ ಯಾವುದೇ ಕೇಂದ್ರ/ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ವಿದ್ಯುತ್ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಗಳ ಹೆಸರು	ಅಂದಾಜು ಮೊತ್ತ (₹.ಲಕ್ಷಗಳಲ್ಲಿ)	ಇಎಂಡಿ (₹.ಲಕ್ಷಗಳಲ್ಲಿ)
1	ವಾರ್ಡ್ ಸಂಖ್ಯೆ–174, 188, 189 & 190ರಲ್ಲಿ ಸಂಬಂಧಿತ ಸಲಕರಣೆಗಳೊಂದಿಗೆ ಟ್ಯೂಬುಲರ್ ಕಂಬ, ಬೀದಿ ದೀಪಗಳು, ಏರಿಯಲ್ ಬಂಚ್ ಕೇಬಲ್, ಪಾರ್ಕ್ ದೀಪಗಳು/ಕೆರೆ ನಡಿಗೆದಾರಿ ದೀಪಗಳು ಮತ್ತು ಕಾಲಮಾಪಕ ಸ್ವಿಚ್‌ಗಳನ್ನು ಒದಗಿಸುವುದು.	490	7.35
2	ಬೊಮ್ಮನಹಳ್ಳಿ ವಲಯದ ವಾರ್ಡ್ ಸಂಖ್ಯೆ–191 ಸಿಂಗಸಂದ್ರದಲ್ಲಿ ಸಂಬಂಧಿತ ಸಲಕರಣೆಗಳೊಂದಿಗೆ ಟ್ಯೂಬುಲರ್ ಕಂಬ, ಬೀದಿ ದೀಪಗಳು, ಏರಿಯಲ್ ಬಂಚ್ ಕೇಬಲ್, ಪಾರ್ಕ್ ದೀಪಗಳು/ಕೆರೆ ನಡಿಗೆದಾರಿ ದೀಪಗಳು ಮತ್ತು ಕಾಲಮಾಪಕ ಸ್ವಿಚ್‌ಗಳನ್ನು ಒದಗಿಸುವುದು.	450	6.75
3	ವಾರ್ಡ್ ಸಂಖ್ಯೆ–175, 186, 187 & 193ರಲ್ಲಿ ಸಂಬಂಧಿತ ಸಲಕರಣೆಗಳೊಂದಿಗೆ ಟ್ಯೂಬುಲರ್ ಕಂಬ, ಬೀದಿ ದೀಪಗಳು, ಏರಿಯಲ್ ಬಂಚ್ ಕೇಬಲ್, ಪಾರ್ಕ್ ದೀಪಗಳು/ಕೆರೆ ನಡಿಗೆದಾರಿ ದೀಪಗಳು ಮತ್ತು ಕಾಲಮಾಪಕ ಸ್ವಿಚ್‌ಗಳನ್ನು ಒದಗಿಸುವುದು.	280	4.20
4	ವಾರ್ಡ್ ಸಂಖ್ಯೆ–184, 185 & 197ರಲ್ಲಿ ಸಂಬಂಧಿತ ಸಲಕರಣೆಗಳೊಂದಿಗೆ ಟ್ಯೂಬುಲರ್ ಕಂಬ, ಬೀದಿ ದೀಪಗಳು, ಏರಿಯಲ್ ಬಂಚ್ ಕೇಬಲ್, ಪಾರ್ಕ್ ದೀಪಗಳು/ಕೆರೆ ನಡಿಗೆದಾರಿ ದೀಪಗಳು ಮತ್ತು ಕಾಲಮಾಪಕ ಸ್ವಿಚ್‌ಗಳನ್ನು ಒದಗಿಸುವುದು.	380	5.70
5	ವಾರ್ಡ್ ಸಂಖ್ಯೆ–192 & 196ರಲ್ಲಿ ಸಂಬಂಧಿತ ಸಲಕರಣೆಗಳೊಂದಿಗೆ ಟ್ಯೂಬುಲರ್ ಕಂಬ, ಬೀದಿ ದೀಪಗಳು, ಏರಿಯಲ್ ಬಂಚ್ ಕೇಬಲ್, ಪಾರ್ಕ್ ದೀಪಗಳು/ಕೆರೆ ನಡಿಗೆದಾರಿ ದೀಪಗಳು ಮತ್ತು ಕಾಲಮಾಪಕ ಸ್ವಿಚ್‌ಗಳನ್ನು ಒದಗಿಸುವುದು.	380	5.70
6	ವಾರ್ಡ್ ಸಂಖ್ಯೆ–194 & 195ರಲ್ಲಿ ಸಂಬಂಧಿತ ಸಲಕರಣೆಗಳೊಂದಿಗೆ ಟ್ಯೂಬುಲರ್ ಕಂಬ, ಬೀದಿ ದೀಪಗಳು, ಏರಿಯಲ್ ಬಂಚ್ ಕೇಬಲ್, ಪಾರ್ಕ್ ದೀಪಗಳು/ಕೆರೆ ನಡಿಗೆದಾರಿ ದೀಪಗಳು ಮತ್ತು ಕಾಲಮಾಪಕ ಸ್ವಿಚ್‌ಗಳನ್ನು ಒದಗಿಸುವುದು.	400	6.00

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ದಿನಾಂಕ: **07.01.2022**ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಬಿಡಗಳನ್ನು ಆನ್‌ಲೈನ್‌ನಲ್ಲಿ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ **14.01.2022**ರ ಸಂಜೆ **4:00** ಗಂಟೆಯವರೆಗೆ ಅಥವಾ ಮುಂಚಿತವಾಗಿ. (3) ತಾಂತ್ರಿಕ ಬಿಡ್‌ಗಳನ್ನು ದಿನಾಂಕ **17.01.2022**ರ ಸಂಜೆ **4:00** ಗಂಟೆಗೆ ತೆರೆಯಲಾಗುವುದು. (4) ಆರ್ಥಿಕ ಬಿಡ್‌ಗಳನ್ನು ದಿನಾಂಕ **20.01.2022**ರ ಸಂಜೆ **4:00** ಗಂಟೆಗೆ ತೆರೆಯಲಾಗುವುದು.ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://eproc.karnataka.gov.in** ನಲ್ಲಿ ಪಡೆದುಕೊಳ್ಳಬಹುದಾಗಿದೆ. **ಸಹಿ/– ಕಾರ್ಯಪಾಲಕ ಅಭಿಯಂತರರು (ವಿದ್ಯುತ್) ಬೊಮ್ಮನಹಳ್ಳಿ ವಲಯ**

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ

(ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ)

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಶಿವಮೊಗ್ಗ

No: EE/RWSS/Dvn/SMG/JE/JJM/E-Proc/2021-22/2295 Date : 04.01.2022

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಕರ್ನಾಟಕ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕ ಅಧಿನಿಯಮ 2000ರ ಪ್ರಕಾರ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಶಿವಮೊಗ್ಗ ವ್ಯಾಪ್ತಿಯಲ್ಲಿ ಜಲಜೀವನ್ ಮಿಷನ್ ಯೋಜನೆಯಡಿಯಲ್ಲಿ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಟೆಂಡರ್ ಆಹ್ವಾನಿಸಲಾಗಿರುತ್ತದೆ.

ಇಂಡೆಂಟ್ ಸಂಖ್ಯೆ : **1) 30270, 2) 37277, 3) 37282, 4) 37288, 5) 37291, 6) 37330, 7) 37342, 8) 37265, 9) 37324, 10) 27192/Call2, 11) 36084/Call2, 12) 36230/Call2 , 13) 36211/Call2, 14) 36342/Call2, 15) 36345/Call2, 16) 35719/Call3, 17) RWSSD/AEE/THIRTHHALLI/NONAC-VEHICLE/2021/CALL-2**.

ಟೆಂಡರ್ ವಿವರಗಳು, ಷರತ್ತುಗಳು ಮತ್ತು ತಿದ್ದುಪಡಿಗಳು ಅಥವಾ ಬದಲಾವಣೆಗಳು **https://www.eproc.karnataka.gov.in** ಜಾಲತಾಣದಲ್ಲಿ ಲಭ್ಯವಿದ್ದು, ಅರ್ಹ ಗುತ್ತಿಗೆದಾರರು/ಬಿಡ್ಡುದಾರರು ಅಗತ್ಯ ದಾಖಲೆಗಳನ್ನು ಮತ್ತು ತಮ್ಮ ಬಿಡ್ ಅನ್ನು ಸದರಿ ಜಾಲತಾಣದಲ್ಲಿಯೇ ಸಲ್ಲಿಸುವುದು.

ಟೆಂಡರ್‌ನ ಕೆಲವು ಷರತ್ತುಗಳು

1) ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ : **11.01.2022 & 19.01.2022ರ ಸಂಜೆ 5.30**. **2)** ಏಕಲಕೋಟೆಯ ಆರ್ಥಿಕ ಬಿಡ್ ತೆರೆಯುವ ದಿನಾಂಕ : **13.01.2022 ರ ಬೆಳಿಗ್ಗೆ 11.30**. 3) ದ್ವಿಲಕೋಟೆಯ ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **21.01.2022ರ ಬೆಳಿಗ್ಗೆ 11.30**. 4) ದ್ವಿಲಕೋಟೆಯ ಆರ್ಥಿಕ ಬಿಡ್ ತೆರೆಯುವ ದಿನಾಂಕ : **23.01.2022ರ ಬೆಳಿಗ್ಗೆ 11.30**. 5) ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗಧಿಪಡಿಸಿದ ಕಾಲಾವಧಿ : **ಏಕ ಲಕೋಟೆ 2 ತಿಂಗಳು (60 ದಿನಗಳು) ದ್ವಿ ಲಕೋಟೆ 3 ತಿಂಗಳು (90 ದಿನಗಳು)**.

ಸಹಿ/– ಕಾರ್ಯಪಾಲಕ ಇಂಜಿನಿಯರರು,

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಶಿವಮೊಗ್ಗ

ವಾ.ಸಾ.ಸಂ.ಇ./ಶಿ/ನಂ.31–01

ಝೇಂಕಾರ್/2021–22

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರು (ವಿದ್ಯುತ್)ರವರ ಕಛೇರಿ, ಪೂರ್ವ ವಲಯ,

16ನೇ ಮಹಡಿ, ಪಿಯು ಕಟ್ಟಡ, ಎಂ.ಜಿ. ರಸ್ತೆ, ಬೆಂಗಳೂರು

ನಂ.: ಬಿಬಿಎಂಪಿ/ಕಾಪಾಅ/ವಿದ್ಯುತ್/ಪೂರ್ವ/ಟೆಂಡರ್/10/2021–22 ದಿನಾಂಕ: 06.01.2022

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)

(ಅಲ್ಪಾವಧಿ/ದ್ವಿ ಲಕೋಟೆ) (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು (ವಿದ್ಯುತ್), ಪೂರ್ವ ವಲಯ, ಇವರು ಕೆಟಿಪಿಪಿ ನಿಯಮ 2000ರಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಥವಾ ಯಾವುದೇ ತತ್ಸಮಾನ ಕೆಪಿಡಬ್ಲ್ಯುಡಿ / ಸಿಪಿಡಬ್ಲ್ಯುಡಿ / ರೈಲ್ವೇಸ್ / ಎಂಇಎಸ್ / ರಾಷ್ಟ್ರೀಯ ಹೆದ್ದಾರಿ ಅಥವಾ ತತ್ಸಮಾನ ಕೇಂದ್ರ / ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಗಿನ ವಿದ್ಯುತ್ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು	ಅಂದಾಜು ವೆಚ್ಚ (ಲಕ್ಷಗಳಲ್ಲಿ)	ಇಎಂಡಿ (ರೂ. ಲಕ್ಷಗಳಲ್ಲಿ)
1	ಶಾಂತಿನಗರ ಕ್ಷೇತ್ರದಡಿಯಲ್ಲಿ ಬರುವ ಕಬ್ಬನ್ ರಸ್ತೆ, ಮದರ್ ಥೆರೆಸಾ ರಸ್ತೆ, ವಿಕ್ಟೋರಿಯಲ್ ರಸ್ತೆ, ಹೆಚ್‌ಎಎಲ್ ಓಲ್ಡ್ ಏರ್‌ಪೋರ್ಟ್ ರಸ್ತೆಗಳು ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ಬೆಳಕಿನ ವ್ಯವಸ್ಥೆಯ ಅಭಿವೃದ್ಧಿ. ಸರ್ವಜ್ಞನಗರ ಕ್ಷೇತ್ರದಡಿಯಲ್ಲಿ ಬರುವ ವ್ಹೀಲರ್ಸ್ ರಸ್ತೆ, ಬಾಣಸವಾಡಿ 7ನೇ ಮುಖ್ಯರಸ್ತೆ, ಹೆಣ್ಣೂರು ಮುಖ್ಯರಸ್ತೆ, ಬಾಣಸವಾಡಿ ಮುಖ್ಯರಸ್ತೆ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ಬೆಳಕಿನ ವ್ಯವಸ್ಥೆಯ ಅಭಿವೃದ್ಧಿ. ಸಿ.ವಿ. ರಾಮನ್ ನಗರ ಕ್ಷೇತ್ರದಡಿಯಲ್ಲಿ ಬರುವ ಸದಾನಂದನಗರ ಮುಖ್ಯರಸ್ತೆ, ಕಸ್ತೂರಿನಗರ ಮುಖ್ಯರಸ್ತೆ, ಹಳೆ ಮದ್ರಾಸ್ ರಸ್ತೆ, ಸುರಂಜನ್ ದಾಸ್ ರಸ್ತೆ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ಬೆಳಕಿನ ವ್ಯವಸ್ಥೆಯ ಅಭಿವೃದ್ಧಿ.	110.00	2.00
2	ಹೆಬ್ಬಾಳ ಕ್ಷೇತ್ರದಡಿಯಲ್ಲಿ ಬರುವ ಬಳ್ಳಾರಿ ಮುಖ್ಯರಸ್ತೆ ಮತ್ತು ಸರ್ವೀಸ್ ರಸ್ತೆಗಳಲ್ಲಿ ಸಂಜಯನಗರ ಜಂಕ್ಷನ್‌ನಿಂದ ಪಶುವೈದ್ಯಕೀಯ ಕಾಲೇಜು, ಕೃಷಿ ವಿಜ್ಞಾನ ವಿಶ್ವವಿದ್ಯಾಲಯ ಸಮೀಪದ ಹೆಬ್ಬಾಳ ಬಸ್ ನಿಲ್ದಾಣದವರೆಗೆ, ಆರ್‌ಟಿ ನಗರ ಮುಖ್ಯರಸ್ತೆ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ಬೆಳಕಿನ ವ್ಯವಸ್ಥೆ ಅಭಿವೃದ್ಧಿ.	118.00	2.00
3	ಶಿವಾಜಿನಗರ ಕ್ಷೇತ್ರದಡಿಯಲ್ಲಿ ಬರುವ ಮಿಷನ್ ರಸ್ತೆ, ಅಲಿ ಅಸ್ಕರ್ ರಸ್ತೆ, ಕಂಟೋನ್ಮೆಂಟ್ ಜಂಕ್ಷನ್ ಅಂಡರ್‌ಪಾಸ್, ಕನ್ನಿಂಗ್‌ಹ್ಯಾಮ್ ಅಡ್ಡರಸ್ತೆ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ಬೆಳಕಿನ ವ್ಯವಸ್ಥೆಯ ಅಭಿವೃದ್ಧಿ. ಪುಲಕೇಶಿನಗರ ಕ್ಷೇತ್ರದಡಿಯಲ್ಲಿ ಬರುವ ಪಾಟರಿರಸ್ತೆ, ಎಂಎಂ ರಸ್ತೆ, ಹಾಲ್ ರಸ್ತೆ, ವಿವಿನ್ ರಸ್ತೆ, ಡೇವಿಸ್ ರಸ್ತೆ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ಬೆಳಕಿನ ವ್ಯವಸ್ಥೆಯ ಅಭಿವೃದ್ಧಿ.	157.00	2.355

ವೇಳಾಪಟ್ಟಿ: (1) ಟೆಂಡರ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ **07.01.2022** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. **(2)** ಬಿಡ್‌ಗಳನ್ನು ಆನ್‌ಲೈನ್ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ **14.01.2022**ರ **ಸಂಜೆ 4:00 ಗಂಟೆಗೆ** ಮುಂಚಿತವಾಗಿ ಸಲ್ಲಿಸತಕ್ಕದ್ದು. **(3)** ತಾಂತ್ರಿಕ ಬಿಡ್‌ಗಳನ್ನು **17.01.2022**ರ **ಸಂಜೆ 4:00 ಗಂಟೆಗೆ** ತೆರೆಯಲಾಗುವುದು. **(4)** ಆರ್ಥಿಕ ಬಿಡ್‌ಗಳನ್ನು **20.01.2022**ರ **ಸಂಜೆ 4:00 ಗಂಟೆಗೆ** ತೆರೆಯಲಾಗುವುದು. ಹೆಚ್ಚಿನ ಮಾಹಿತಿಯನ್ನು ಮೇಲಿನ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://eproc.karnataka.gov.in** ನಿಂದ ಪಡೆದುಕೊಳ್ಳಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು(ವಿದ್ಯುತ್), ಪೂರ್ವ ವಲಯ, ಬಿಬಿಎಂಪಿ

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರವರ ಕಛೇರಿ, ಮಹದೇವಪುರ ವಿಭಾಗ,

ವೈಟ್‌ಫೀಲ್ಡ್ ರಸ್ತೆ, ಫೀನಿಕ್ಸ್ ಮಾಲ್ ಎದುರು, ಬೆಂಗಳೂರು – 560048

ನಂ.: ಕಾಪಾಅ/ಮ ಪುರ/ಟೆಂಡರ್/17/2021–22 ದಿನಾಂಕ: 06.01.2022

ಟೆಂಡರ್‌ಗಳಿಗಾಗಿ ಆಹ್ವಾನ (ಐಎಫ್‌ಟಿ) – ಅಲ್ಪಾವಧಿ ಟೆಂಡರ್ ಪ್ರಕಟಣೆ

(ದ್ವಿ ಲಕೋಟೆ ಪದ್ಧತಿ) (ಜಿಒಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಮಹದೇವಪುರ ವಿಭಾಗ, ಬಿಬಿಎಂಪಿ ಇವರು, ಅರ್ಹ ಟೆಂಡರ್‌ದಾರರಿಂದ ಈ ಕೆಳಗಿನ ಕಾಮಗಾರಿಗಳಿಗೆ **ಐಟಂ ರೇಟ್** ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ / ಸಿಪಿಡಬ್ಲ್ಯುಡಿ / ಕೆಪಿಡಬ್ಲ್ಯುಡಿ / ರೈಲ್ವೇಸ್ / ಯಾವುದೇ ರಾಜ್ಯ ಅಥವಾ ಕೇಂದ್ರ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಸೂಕ್ತ ದರ್ಜೆಯ ಟೆಂಡರ್‌ದಾರರು ಯಾವುದೇ ಅಥವಾ ಎಲ್ಲಾ ಕಾಮಗಾರಿಗಳಿಗೆ ಟೆಂಡರನ್ನು ಸಲ್ಲಿಸಬಹುದು.

ಕ್ರ. ಸಂ.	ಪ್ಯಾಕೇಜ್ ಕಾಮಗಾರಿಯ ಹೆಸರು	ಕಾಮಗಾರಿಯ ಅಂದಾಜು ಮೊತ್ತ (ರೂ. ಲಕ್ಷ)	ಇಎಂಡಿ (ರೂ.ಗಳಲ್ಲಿ)
	ಕೊಳವೆಬಾವಿಗಳು, ಕೊಳವೆ ಮಾರ್ಗಗಳ ನೆಟ್ವರ್ಕ್‌ಗಳು ಮತ್ತು ಅಂತರ್ಜಲ ಮರುಪೂರಣ ಸೌಲಭ್ಯಗಳ ಮೂಲಕ ನೀರಿನ ಪೂರೈಕೆಯನ್ನು ಹೆಚ್ಚಿಸುವುದು		
1	**ವಾರ್ಡ್ ನಂ. 54** ಹೂಡಿ, **ವಾರ್ಡ್ ನಂ. 83** ಕಾಡುಗೋಡಿ, **ವಾರ್ಡ್ ನಂ. 84** ಹಗದೂರು (ಸ.ಆ. ಕ್ರ. ಸಂ. 12, 13, 14, 15, 16, ಕ್ರ. ಸಂ. 18, 19, 20, 21, 22 ಮತ್ತು 23) (**11 ಕಾಮಗಾರಿಗಳು – ಪ್ಯಾಕೇಜ್–12**)	770.00	11,55,000/– (1.00 ಲಕ್ಷ ಇ–ಪೇಮೆಂಟ್ ಮೂಲಕ ಬಾಕಿ ರೂ. 10,55,000/– ಬ್ಯಾಂಕ್ ಗ್ಯಾರಂಟಿ ಮೂಲಕ, ಬ್ಯಾಂಕ್ ಗ್ಯಾರಂಟಿಯನ್ನು ತಾಂತ್ರಿಕ ಬಿಡ್ ತೆರೆಯುವ ಮುನ್ನ ಸಲ್ಲಿಸತಕ್ಕದ್ದು.)
2	**ವಾರ್ಡ್ ನಂ. 85** ದೊಡ್ಡನೆಕ್ಕುಂದಿ, **ವಾರ್ಡ್ ನಂ. 149** ವರ್ತೂರು ಮತ್ತು **ವಾರ್ಡ್ ನಂ. 150** ಬೆಳ್ಳಂದೂರು (ಸ.ಆ. ಕ್ರ. ಸಂ. 17, ಕ್ರ. ಸಂ. 24, 25, 26, 27, 28, 29, 30 ಕ್ರ. ಸಂ. 31 ಮತ್ತು 32) (**10 ಕಾಮಗಾರಿಗಳು – ಪ್ಯಾಕೇಜ್–13**)	700.00	10,50,000/– (1.00 ಲಕ್ಷ ಇ–ಪೇಮೆಂಟ್ ಮೂಲಕ ಬಾಕಿ ರೂ. 9,50,000/– ಬ್ಯಾಂಕ್ ಗ್ಯಾರಂಟಿ ಮೂಲಕ, ಬ್ಯಾಂಕ್ ಗ್ಯಾರಂಟಿಯನ್ನು ತಾಂತ್ರಿಕ ಬಿಡ್ ತೆರೆಯುವ ಮುನ್ನ ಸಲ್ಲಿಸತಕ್ಕದ್ದು.)
3	**ವಾರ್ಡ್ ನಂ. 150** ಬೆಳ್ಳಂದೂರು (ಸ.ಆ. ಕ್ರ. ಸಂ. 33, 34, 35, 36, 37, 38, 39, 40, 41 ಮತ್ತು 42) (**10 ಕಾಮಗಾರಿಗಳು – ಪ್ಯಾಕೇಜ್–14**)	700.00	10,50,000/– (1.00 ಲಕ್ಷ ಇ–ಪೇಮೆಂಟ್ ಮೂಲಕ ಬಾಕಿ ರೂ. 9,50,000/– ಬ್ಯಾಂಕ್ ಗ್ಯಾರಂಟಿ ಮೂಲಕ, ಬ್ಯಾಂಕ್ ಗ್ಯಾರಂಟಿಯನ್ನು ತಾಂತ್ರಿಕ ಬಿಡ್ ತೆರೆಯುವ ಮುನ್ನ ಸಲ್ಲಿಸತಕ್ಕದ್ದು.)

ವೇಳಾಪಟ್ಟಿ: (1) ಪ್ರಸ್ತಾವನೆಗಳಿಗಾಗಿ ಆಹ್ವಾನ (ಆರ್‌ಎಫ್‌ಪಿ) ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ **https://eproc.karnataka.gov.in** ನಿಂದ **12.01.2022**ರ **ಸಂಜೆ 4:00 ಗಂಟೆಯಿಂದ** ಡೌನ್‌ಲೋಡ್ ಮಾಡಿಕೊಳ್ಳಬಹುದು. **(2)** ವಿಚಾರಣೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **14.01.2022**ರ **ಮಧ್ಯಾಹ್ನ 3:00 ಗಂಟೆವರೆಗೆ. (3)** ಪೂರ್ವಭಾವಿ ಸಭೆ: **18.01.2022**ರ **ಮಧ್ಯಾಹ್ನ 3:00 ಗಂಟೆಗೆ** ಮುಖ್ಯ ಅಭಿಯಂತರರ ಕಛೇರಿ, ಮಹದೇವಪುರ ವಲಯ, ಕೆ.ಆರ್. ಪುರ, ಬೆಂಗಳೂರು ಇಲ್ಲಿ ನಡೆಯಲಿದೆ. **(4)** ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: **27.01.2022**ರ **ಸಂಜೆ 4:00 ಗಂಟೆವರೆಗೆ. (5)** ತಾಂತ್ರಿಕ ಬಿಡ್ಡುಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: **28.01.2022**ರ **ಸಂಜೆ 4:30 ಗಂಟೆಗೆ.** ಹೆಚ್ಚಿನ ಮಾಹಿತಿಯನ್ನು ಮೇಲಿನ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://eproc.karnataka.gov.in** ನಿಂದ ಪಡೆದುಕೊಳ್ಳಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಮಹದೇವಪುರ ವಿಭಾಗ, ಬಿಬಿಎಂಪಿ

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸಿ.ಎಸ್ ವಿರುದ್ಧ ನ್ಯಾಯಾಂಗ ನಿಂದನೆ: 'ಸುಪ್ರೀಂ' ತಡೆ

ನವದೆಹಲಿ: ಜಿಲ್ಲಾ ಪಂಚಾಯಿತಿ ಮತ್ತು ಇತರ ಇಲಾಖೆಗಳ ನೌಕರರನ್ನು ಕಾಯಂಗೊಳಿಸುವುದಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಮತ್ತು ಇತರ ಹಿರಿಯ ಅಧಿಕಾರಿಗಳ ವಿರುದ್ಧದ ನ್ಯಾಯಾಂಗ ನಿಂದನೆ ಪ್ರಕರಣದ ವಿಚಾರಣೆಗೆ ಸುಪ್ರೀಂಕೋರ್ಟ್ ಗುರುವಾರ ತಡೆನೀಡಿದೆ.

ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ ಮತ್ತು ನ್ಯಾಯಮೂರ್ತಿಗಳಾದ ಸೂರ್ಯಕಾಂತ್, ಹಿಮಾ ಕೋಹ್ಲಿ ಅವರಿದ್ದ ಪೀಠ ವಿಚಾರಣೆ ನಡೆಸಿತು.

ಉಮಾದೇವಿ ತೀರ್ಪನ್ನು ಪಾಲಿಸದ ಕಾರಣ ಮುಖ್ಯ ಕಾರ್ಯದರ್ಶಿ ಸೇರಿದಂತೆ 15 ಹಿರಿಯ ಅಧಿಕಾರಿಗಳು ನ್ಯಾಯಾಂಗ ನಿಂದನೆ ವಿಚಾರಣೆ ಎದುರಿಸಲು ಗುರುವಾರ ಖುದ್ದಾಗಿ ಹಾಜರಾಗಬೇಕು ಎಂದು ಕರ್ನಾಟಕ ಹೈಕೋರ್ಟ್ ಸಮನ್ಸ್ ಜಾರಿಗೊಳಿಸಿತ್ತು.

ಹೈಕೋರ್ಟ್ ನೀಡಿದ್ದ ಸಮನ್ಸ್ ವಿರುದ್ಧ ಕರ್ನಾಟಕ ಸರ್ಕಾರ ಬುಧವಾರ ಸುಪ್ರೀಂಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿ ತುರ್ತು ವಿಚಾರಣೆಗೆ ಕೋರಿತ್ತು.

10ರಿಂದ 20 ವರ್ಷಗಳವರೆಗೆ ಸೇವೆ ಸಲ್ಲಿಸಿರುವ ದಿನಗೂಲಿ ನೌಕರರನ್ನು ಕಾಯಂಗೊಳಿಸಲು ತೆಗೆದುಕೊಂಡ ಕ್ರಮಗಳ ವಿವರಗಳನ್ನು ಒಳಗೊಂಡ ಪ್ರಮಾಣ ಪತ್ರ ಸಲ್ಲಿಸುವಂತೆ ಸುಪ್ರೀಂಕೋರ್ಟ್, ರಾಜ್ಯ ಸರ್ಕಾರದ ಪರವಾಗಿ ಹಾಜರಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರಿಗೆ ಹೇಳಿತು. ಸೇವೆಯನ್ನು ಕಾಯಂಗೊಳಿಸುವಂತೆ ದಿನಗೂಲಿ ನೌಕರರು ಸಲ್ಲಿಸಿದ್ದ ಮನವಿಯನ್ನು ಸರ್ಕಾರ ಏಕೆ ತಿರಸ್ಕರಿಸಿದೆ ಎಂಬುದಕ್ಕೆ ಸ್ಪಷ್ಟನೆ ನೀಡುವಂತೆ ಪೀಠ ರಾಜ್ಯ ಸರ್ಕಾರಕ್ಕೆ ಸೂಚಿಸಿದೆ.

'ಮೇಕೆದಾಟು: ರಾಜಕೀಯರಹಿತ ಒಗ್ಗಟ್ಟು ಅಗತ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮೇಕೆದಾಟು ಯೋಜನೆ ವಿಷಯದಲ್ಲಿ ರಾಜಕೀಯರಹಿತವಾಗಿ ಒಗ್ಗಟ್ಟು ಪ್ರದರ್ಶಿಸಬೇಕಾಗಿದೆ. 2-3 ದಿನಗಳಲ್ಲಿ ಯೋಜನೆಗೆ ಸಂಬಂಧಿಸಿದ ಎಲ್ಲ ಮಾಹಿತಿಯನ್ನು ಮುಖ್ಯಮಂತ್ರಿ ತೆರೆದಿಡಲಿದ್ದಾರೆ' ಎಂದು ಬಿಜೆಪಿ ಶಾಸಕ ಎಂ.ಸತೀಶ್ ರೆಡ್ಡಿ ಹೇಳಿದರೆ, 'ಈ ವಿಷಯದಲ್ಲಿ ಬಿಜೆಪಿಯವರು ಸುಮ್ಮನಿದ್ದಾರೆ. ಅವರನ್ನು ಜಾಗೃತಗೊಳಿಸಲು ನಾವು ಪಾದಯಾತ್ರೆಯನ್ನು ಕೈಗೊಂಡಿದ್ದೇವೆ' ಎಂದು ಕಾಂಗ್ರೆಸ್ ಶಾಸಕ ರಿಜ್ವಾನ್ ಅರ್ಷದ್ ಹೇಳಿದರು.

'ಈ ವಿಷಯದಲ್ಲಿ ರಾಜಕೀಯ ಬೆರೆಸದೆ ತಕ್ಷಣ ಯೋಜನೆ ಆರಂಭಿಸಬೇಕು. ಕುಡಿಯುವ ನೀರಿನ ಯೋಜನೆ ತಡೆಯಲು ಕಾನೂನಿನ ಅಡ್ಡಿ ಇಲ್ಲ' ಎಂದು ವಿಧಾನಪರಿಷತ್ ಜೆಡಿಎಸ್ ಸದಸ್ಯ ಕೆ.ಟಿ.ಶ್ರೀಕಂಠೇಗೌಡ ಪ್ರತಿಪಾದಿಸಿದರು. 'ತಜ್ಞರ ಸಲಹೆ ಪಡೆದು, ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಯೋಜನೆ ಕೈಗೆತ್ತಿಕೊಳ್ಳಬೇಕು' ಎಂದು ರೈತ ನಾಯಕಿ, ಮಂಡ್ಯದ ನಂದಿನಿ ಜಯರಾಂ ಸಲಹೆ ನೀಡಿದರು.

'ಮೇಕೆದಾಟು ರಾಜಕೀಯ' ಕುರಿತು 'ಪ್ರಜಾವಾಣಿ' ಗುರುವಾರ ಆಯೋಜಿಸಿದ್ದ ಫೇಸ್‌ಬುಕ್ ಸಂವಾದದಲ್ಲಿ ಅವರೆಲ್ಲರೂ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು. ಸಂವಾದವನ್ನು ವೀಕ್ಷಿಸಲು ಈ ಲಿಂಕ್ ಕ್ಲಿಕ್ಕಿಸಿ: https://bit.ly/3sYUhjf

ಪ್ರಜಾವಾಣಿ ಸಂವಾದ

'ರಾಷ್ಟ್ರೀಯ ಜಲನೀತಿ ಅಗತ್ಯ'

ಜಲ, ನೆಲ, ಧರ್ಮ, ಜಾತಿ ಇಂಥ ಎಲ್ಲ ವಿಷಯಗಳನ್ನು ಜ್ವಲಂತವಾಗಿ ಇಟ್ಟುಕೊಳ್ಳುವುದು ಎಲ್ಲ ಪಕ್ಷಗಳ ರಾಜಕೀಯ ನಡೆ. ಆದರೆ, ರಾಜಕೀಯ ಪಕ್ಷಗಳು ಸಾಮಾನ್ಯ ಜನರಿಗೆ ಏನು ಕೊಟ್ಟಿವೆ. ಯಾವ ರೀತಿ ಅನುಕೂಲ ಮಾಡಿಕೊಟ್ಟಿವೆ ಎನ್ನುವುದು ಮುಖ್ಯ. ನಾವು ಒಕ್ಕೂಟ ವ್ಯವಸ್ಥೆಯಲ್ಲಿದ್ದೇವೆ. ಹೀಗಾಗಿ, ರಾಜ್ಯಗಳ ಮಧ್ಯೆ ನೀರಿನ ಹಂಚಿಕೆ ವಿಷಯದಲ್ಲಿ ಎಲ್ಲ ರಾಜ್ಯಗಳ ಒಪ್ಪಿಗೆ ಬೇಕು, ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ಈ ಕಾರಣಕ್ಕೆ ರಾಷ್ಟ್ರೀಯ ಜಲನೀತಿ ಅಗತ್ಯ. ಯೋಜನೆ ಬೇಕೊ, ಬೇಡವೊ ಎಂದು ಹೇಳಬೇಕಾದವರು ಜಲ ತಜ್ಞರು. ಅದನ್ನು ಸರ್ಕಾರಗಳು ಕಾರ್ಯರೂಪಕ್ಕೆ ತರುವ ಬದ್ಧತೆ, ಮುತ್ಸದ್ದಿತನ ಪ್ರದರ್ಶಿಸಬೇಕು. ದೇಶಗಳ ನಡುವಿನ ಜಲವಿವಾದಕ್ಕೆ ಅಂತ್ಯಕಾಣಲು ಸಾಧ್ಯವಿದ್ದರೆ, ರಾಜ್ಯಗಳ ನಡುವಿನ ವ್ಯಾಜ್ಯ ಪರಿಹರಿಸಲು ಯಾಕೆ ಸಾಧ್ಯ ಇಲ್ಲ.

ನಂದಿನಿ ಜಯರಾಂ, ರೈತ ನಾಯಕಿ, ಮಂಡ್ಯ

'ಚುನಾವಣೆಗಾಗಿ ಪಾದಯಾತ್ರೆ ಅಲ್ಲ'

ಬಿಜೆಪಿಯವರದ್ದು ಡಬ್ಬಲ್ ಎಂಜಿನ್ ಸರ್ಕಾರ. ರಾಜ್ಯದಲ್ಲಿ ಅವರು ಅಧಿಕಾರಕ್ಕೆ ಬಂದ ಬಳಿಕ ಯೋಜನೆ ಜಾರಿಗೆ ಸಂಬಂಧಿಸಿದಂತೆ ಕೇಂದ್ರಕ್ಕೆ ಒಂದೇ ಒಂದು ಪತ್ರ ಬರೆದಿಲ್ಲ. ಅವರು ಅಧಿಕಾರ ವಹಿಸಿಕೊಂಡ ಬಳಿಕ ಏನೇನು ಮಾಡಿದ್ದಾರೆ ಎನ್ನುವುದನ್ನು ಜನರ ಮುಂದಿಡಲಿ. ರಾಜ್ಯದಿಂದ ಆಯ್ಕೆಯಾದ ಬಿಜೆಪಿ ಸಂಸದರು ಪ್ರಧಾನಿ ಜೊತೆಗೆ ಮಾತನಾಡಲು ಹೆದರುತ್ತಾರೆ. ಹಾಗೆಂದು, ನಾವು ಚುನಾವಣೆಗಾಗಿ ಪಾದಯಾತ್ರೆ ಹಮ್ಮಿಕೊಂಡಿಲ್ಲ. ನೀರಿಗಾಗಿ ನಮ್ಮ ನಡಿಗೆ. ಯೋಜನೆಗೆ ಸಂಬಂಧಿಸಿ ಪ್ರಧಾನಿ ಜತೆ ಮಾತನಾಡಲು ಬಿಜೆಪಿಯವರಿಗೆ ಧೈರ್ಯ ಇಲ್ಲದಿದ್ದರೆ ನಾವು ಸಾಥ್ ನೀಡುತ್ತೇವೆ. ಎಲ್ಲ ವಿಷಯಗಳಲ್ಲಿ ಕೇಂದ್ರ ಸರ್ಕಾರ ರಾಜ್ಯಕ್ಕೆ ಮಲತಾಯಿ ಧೋರಣೆ ತೋರಿಸುತ್ತಿದೆ. ಯೋಜನೆಗೆ ಕಾನೂನು ಅಡಚಣೆ ಇಲ್ಲ. ತಾಂತ್ರಿಕ ಅಡಚಣೆಗಳನ್ನು ನಿವಾರಿಸಬೇಕು.

ರಿಜ್ವಾನ್ ಅರ್ಷದ್, ಕಾಂಗ್ರೆಸ್ ಶಾಸಕ

'ಶೀಘ್ರದಲ್ಲಿಯೇ ಎಲ್ಲ ಮಾಹಿತಿ ಬಹಿರಂಗ'

ಎಲ್ಲರೂ ಒಗ್ಗಟ್ಟಾಗಿ ಯೋಜನೆ ಜಾರಿಗೊಳಿಸಲು ಪ್ರಯತ್ನಿಸಬೇಕಾಗಿದೆ. ಈ ವಿಷಯದಲ್ಲಿ ತಮಿಳುನಾಡು ಸರ್ಕಾರವು ಹಿಂದೆಯೂ ತಗಾದೆ ತೆಗೆದಿದೆ. ಇಂಥ ವಿಷಯದಲ್ಲಿ ಅಲ್ಲಿನ ಎಲ್ಲ ಪಕ್ಷಗಳು ಒಂದಾಗುತ್ತಿವೆ. ಈ ವಿಷಯದಲ್ಲಿ ರಾಜಕೀಯ ಮಾಡಿದರೆ ಈ ಯೋಜನೆಗೆ ಅನುಮತಿ ಸಿಗುವುದೇ ಕಷ್ಟ. ಕಾಂಗ್ರೆಸ್ ಪಾದಯಾತ್ರೆ ರಾಜಕೀಯಪ್ರೇರಿತ. ಕಾಂಗ್ರೆಸ್‌ನವರು ಏಕಾಏಕಿ ನಡಿಗೆ ಹೊರಟಿದ್ದಾರೆ. ಆದರೆ, ಯೋಜನೆ ಅನುಷ್ಠಾನಗೊಳಿಸಲು ಮುಖ್ಯಮಂತ್ರಿ ಬದ್ಧರಾಗಿದ್ದಾರೆ. ನೆಲ, ಜಲ ವಿಷಯದಲ್ಲಿ ರಾಜಿ ಇಲ್ಲ. ಈ ವಿಷಯದಲ್ಲಿ ರಾಜಕೀಯ ಬೇಡ. ಯೋಜನೆಗೆ ಸಂಬಂಧಿಸಿದಂತೆ ಎಲ್ಲ ಮಾಹಿತಿಯನ್ನು ಶೀಘ್ರದಲ್ಲಿಯೇ ಮುಖ್ಯಮಂತ್ರಿ, ಜಲ ಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಬಿಡುಗಡೆ ಮಾಡಲಿದ್ದಾರೆ. ಈ ವಿಷಯದಲ್ಲಿ ಕಾಂಗ್ರೆಸ್‌ನಿಂದ ನಾವು ಕಲಿಯಬೇಕಿಲ್ಲ.

ಎಂ.ಸತೀಶ್ ರೆಡ್ಡಿ, ಬಿಜೆಪಿ ಶಾಸಕ

'ರಾಜಕೀಯರಹಿತ ಪಾದಯಾತ್ರೆ ಮಾಡಬಹುದಿತ್ತು'

ಕಾವೇರಿ ಕೊಳ್ಳದಿಂದ ನಮ್ಮ ಪಾಲಿನ ನೀರು ಪಡೆಯಲು ಯಾವುದೇ ಸಮಸ್ಯೆ ಇಲ್ಲ. ಈ ಬಗ್ಗೆ ಸುಪ್ರೀಂ ಕೋರ್ಟ್‌ನ ಸ್ಪಷ್ಟ ಆದೇಶವಿದೆ. ಹೀಗಾಗಿ, ಮೇಕೆದಾಟು ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರಕ್ಕೆ ಏನು ಅಧಿಕಾರ ಇದೆ? ಪ್ರಾಧಿಕಾರದಿಂದ ಒಪ್ಪಿಗೆ ಪಡೆಯುವ ಅಗತ್ಯವೇನಿದೆ? ಈ ಬಗ್ಗೆ ರಾಜಕಾರಣ ಬೇಡ. ನಾವು (ಜೆಡಿಎಸ್) ಸಹ ವಿಧಾನಸೌಧದಿಂದ ರಾಜಭವನಕ್ಕೆ ಪಾದಯಾತ್ರೆಯಲ್ಲಿ ತೆರಳಿ ರಾಜ್ಯಪಾಲರ ಮೂಲಕ ರಾಷ್ಟ್ರಪತಿಗೆ ಮನವಿ ಸಲ್ಲಿಸಿದ್ದೇವೆ. ರಾಜ್ಯ-ಕೇಂದ್ರ ಎರಡೂ ಕಡೆ ಒಂದೇ ಸರ್ಕಾರ ಇದ್ದಾಗ ಯೋಜನೆಗೆ ಅನುಮತಿ ನೀಡದೇ ಇದ್ದರೆ ಹೇಗೆ? ಕಾಂಗ್ರೆಸ್ ಪಕ್ಷದ ಪಾದಯಾತ್ರೆಯ ಆಶಯ, ಉದ್ದೇಶ ಒಳ್ಳೆಯದೇ. ಆದರೆ, ಎಲ್ಲ ಪಕ್ಷಗಳ ಜೊತೆ ಮಾತನಾಡಬೇಕಿತ್ತು. ರಾಜಕೀಯರಹಿತ ಪಾದಯಾತ್ರೆ ಮಾಡಬಹುದಿತ್ತು.

ಕೆ.ಟಿ. ಶ್ರೀಕಂಠೇಗೌಡ, ವಿಧಾನ ಪರಿಷತ್ ಜೆಡಿಎಸ್ ಸದಸ್ಯ

ಸುದ್ದಿ 2 ನಿಮಿಷ

'ಕೋವಿಡ್ ನಿರ್ಬಂಧ ಉಲ್ಲಂಘಿಸಿದರೆ ಕಾನೂನು ಕ್ರಮ'

ಬೆಂಗಳೂರು: 'ಕೋವಿಡ್ ನಿರ್ಬಂಧ ಉಲ್ಲಂಘಿಸುವವರ ವಿರುದ್ಧ ಕಾನೂನು ಕ್ರಮ ಜರಗಿಸಲಾಗುವುದು' ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಗುರುವಾರ ಎಚ್ಚರಿಕೆ ನೀಡಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಕೋವಿಡ್ ನಿಯಮಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲಾಗುವುದು. ಉದ್ದೇಶಿತ ಪಾದಯಾತ್ರೆ ಬಗ್ಗೆ ಕಾಂಗ್ರೆಸ್ ನಾಯಕರು ಮರು ಆಲೋಚಿಸಿ, ಮುಂದೂಡಬೇಕು' ಎಂದು ಸಲಹೆ ನೀಡಿದರು.

'ರಾಜ್ಯದಲ್ಲಿ, ವಿಶೇಷವಾಗಿ ಬೆಂಗಳೂರು ನಗರದಲ್ಲಿ ಕೋವಿಡ್ ಪ್ರಕರಣಗಳು ಉಲ್ಬಣಗೊಳ್ಳುತ್ತಿವೆ. ಅದಕ್ಕೆ ಕಡಿವಾಣ ಹಾಕಬೇಕಾಗಿದೆ. ಕಾಂಗ್ರೆಸ್ ನಾಯಕರು ಸರ್ಕಾರದ ಕಾಳಜಿಯನ್ನು ಅರ್ಥಮಾಡಿಕೊಳ್ಳಬೇಕು' ಎಂದು ಕೋರಿದರು.

ಕೋವಿಡ್ ಹೆಚ್ಚುತ್ತಿದೆ ಎಂದು ಬಿಜೆಪಿ ನಗರದಲ್ಲಿ ಹಮ್ಮಿಕೊಂಡಿದ್ದ ಮೂರು ದಿನಗಳ ಕಾರ್ಯಕ್ರಮವನ್ನು ಮುಂದೂಡಿದೆ. ಕಾಂಗ್ರೆಸ್ ಪಕ್ಷವೂ ತನ್ನ ಕಾರ್ಯಕ್ರಮವನ್ನು ಮುಂದೂಡಲಿ ಎಂದು ಹೇಳಿದರು.

'ಫೆಬ್ರುವರಿಯಲ್ಲಿ 3ನೇ ಅಲೆ ಉತ್ತುಂಗಕ್ಕೆ'

ಬೆಂಗಳೂರು: ರಾಜ್ಯದಲ್ಲಿ ಫೆಬ್ರವರಿ ಮೊದಲ ವಾರ ಕೋವಿಡ್ ಮೂರನೇ ಅಲೆ ಉತ್ತುಂಗ ತಲುಪಲಿದೆ. ದಿನವೊಂದಕ್ಕೆ ಗರಿಷ್ಠ 1.20 ಲಕ್ಷ ಪ್ರಕರಣಗಳು ವರದಿಯಾಗುವ ಸಾಧ್ಯತೆಯಿದೆ ಎಂದು ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್ಸಿ) ಸಂಶೋಧಕರು ಸಂಖ್ಯಾಶಾಸ್ತ್ರೀಯ ಲೆಕ್ಕಾಚಾರ ಹಾಕಿದ್ದಾರೆ.

ಭಾರತೀಯ ಸಂಖ್ಯಾಶಾಸ್ತ್ರ ಸಂಸ್ಥೆ (ಐಎಸ್ಐ) ಸಹಯೋಗದಲ್ಲಿ ಈ ಲೆಕ್ಕಾಚಾರ ನಡೆದಿದೆ. ರಾಜ್ಯದಲ್ಲಿ ವರದಿಯಾಗುತ್ತಿರುವ ಕೋವಿಡ್ ಪ್ರಕರಣಗಳು ಹಾಗೂ ವಿದೇಶಗಳಲ್ಲಿ ಓಮೈಕ್ರಾನ್ ಸೋಂಕು ಹರಡಿರುವುದರ ಆಧಾರದಲ್ಲಿ ವರದಿ ಸಿದ್ಧಪಡಿಸಲಾಗಿದೆ.

'ಪ್ರಕರಣಗಳ ಹರಡುವಿಕೆ ಜನರ ವರ್ತನೆಯನ್ನು ಆಧರಿಸಿರುತ್ತದೆ. ಸೋಂಕು ದಿನವೊಂದಕ್ಕೆ 40 ಸಾವಿರಕ್ಕೆ ತಲುಪಿ, ಇಳಿಮುಖವಾಗಲೂಬಹುದು. ವೇಗವಾಗಿ ಹರಡಿದರೆ ದಿನವೊಂದಕ್ಕೆ ವರದಿಯಾಗುವ ಪ್ರಕರಣಗಳ ಸಂಖ್ಯೆ 80 ಸಾವಿರಕ್ಕೆ ತಲುಪಿ, ಒಂದು ಲಕ್ಷದ ಗಡಿಯನ್ನೂ ದಾಟಬಹುದು.' ಎಂದು ಸಂಖ್ಯಾಶಾಸ್ತ್ರೀಯ ತಜ್ಞರು ಕಳವಳ ವ್ಯಕ್ತಪಡಿಸಿದ್ದಾರೆ.

ಶಿವಾ ಆತ್ರೇಯ, ರಾಜೇಶ್ ಸುಂದರೇಶನ್ ನೇತೃತ್ವದ ತಂಡ ಪ್ರಕರಣಗಳ ಬಗ್ಗೆ ಲೆಕ್ಕಾಚಾರ ಹಾಕಿದ್ದಾರೆ. ಈ ವರದಿಯನ್ನು ಅವರು ಕೋವಿಡ್ ತಾಂತ್ರಿಕ ಸಲಹಾ ಸಮಿತಿಗೆ ಸಲ್ಲಿಸಿದ್ದಾರೆ.

5 ಸಾವಿರ ದಾಟಿದ ಪ್ರಕರಣ: ರಾಜ್ಯದಲ್ಲಿ ಕೋವಿಡ್ ಹೊಸ ಪ್ರಕರಣಗಳ ಸಂಖ್ಯೆ ಮತ್ತಷ್ಟು ಹೆಚ್ಚಳವಾಗಿದೆ. ಗುರುವಾರ 5 ಸಾವಿರ ಗಡಿ (5,031) ದಾಟಿದೆ. ಕೊರೊನಾ ಸೋಂಕಿತರಲ್ಲಿ ಒಬ್ಬರು ಮೃತಪಟ್ಟಿರುವುದು ದೃಢಪಟ್ಟಿದೆ.

ಎರಡನೇ ಅಲೆಯಲ್ಲಿ 2021ರ ಮೇ ತಿಂಗಳಲ್ಲಿ ದಿನವೊಂದಕ್ಕೆ 50 ಸಾವಿರ ದಾಟಿದ್ದ ಹೊಸ ಪ್ರಕರಣಗಳ ಸಂಖ್ಯೆ, ಜೂನ್ ಬಳಿಕ ಇಳಿದಿತ್ತು. ಆರು ತಿಂಗಳ ನಂತರ ದಿನವೊಂದಕ್ಕೆ 5 ಸಾವಿರಕ್ಕೂ ಅಧಿಕ ಪ್ರಕರಣಗಳು ವರದಿಯಾಗಿವೆ. ಒಂದು ದಿನದಲ್ಲಿ 1.27 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸೋಂಕು ದೃಢ ಪ್ರಮಾಣ ಶೇ 3.95ಕ್ಕೆ ತಲುಪಿದೆ. 25 ಜಿಲ್ಲೆಗಳಲ್ಲಿ ಕೋವಿಡ್ ಪ್ರಕರಣಗಳು ಹೊಸದಾಗಿ ಪತ್ತೆಯಾಗಿವೆ. 17 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ, 6 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ.

ನೀವು ಬಂಧಿಸಿದರೂ ನಾವು ಹೆದರುವುದಿಲ್ಲ– ಸರ್ಕಾರಕ್ಕೇ ಡಿಕೆಶಿ ಸವಾಲು

'ಪ್ರಾಣ ಹೋದರೂ ನಡಿಗೆ ನಿಲ್ಲಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನನ್ನ ಪ್ರಾಣ ಹೋದರೂ ಸರಿ, ಮೇಕೆದಾಟು ನಡಿಗೆ ಮಾಡಿಯೇ ತೀರುತ್ತೇವೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಗುರುವಾರ ಪುನರುಚ್ಚರಿಸಿದರು.

ರಾಜ್ಯಸಭೆ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಜೊತೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಪಾದಯಾತ್ರೆ ಮೊಟಕುಗೊಳಿಸಲು ಸರ್ಕಾರ ಷಡ್ಯಂತ್ರ ರೂಪಿಸುತ್ತಿದೆ.ಜೆಪಿ ಸರ್ಕಾರ ಕೀಳು ರಾಜಕೀಯಕ್ಕಾಗಿ ಜನರ ಜೀವದ ಜತೆ ಚೆಲ್ಲಾಟವಾಡುತ್ತಿದೆ' ಎಂದರು.

'ನೀವು ಒಂದು ದಿನ ಬಂಧಿಸಬಹುದು. ಮರುದಿನ ನಿಮ್ಮಿಂದ ಸಾಧ್ಯವಿಲ್ಲ. ಬಂಧಿಸಿದರೂ ನಾವು ಹೆದರುವುದಿಲ್ಲ. ನೀವು ಎಲ್ಲಿ ನಿಲ್ಲಿಸಿರುತ್ತಿರೋ ಅಲ್ಲಿಂದಲೇ ನಡೆಯುತ್ತೇನೆ. ಯಾರೂ ಪಾದಯಾತ್ರೆ ನಿಲ್ಲಿಸಲಾಗದು' ಎಂದು ಸವಾಲು ಹಾಕಿದರು.

'ಪಾದಯಾತ್ರೆ ಕಾರಣಕ್ಕೇ ನಾವು ಈಗಾಗಲೇ ರಾಮನಗರದ ಎಲ್ಲ ರೆಸಾರ್ಟ್, ಹೋಟೆಲ್‌ಗಳಲ್ಲಿ ಕೊಠಡಿ ಕಾಯ್ದಿರಿಸಿದ್ದೇವೆ. ಎಷ್ಟೇ ಜನ ಬಂದರೂ ವಾಸ್ತವ್ಯ, ಊಟದ ವ್ಯವಸ್ಥೆ ಮಾಡುತ್ತೇವೆ. ನಾನು, ಶಾಸಕಾಂಗ

ಶಿವಕುಮಾರ್

ಪಕ್ಷದ ನಾಯಕರು, ಶಾಸಕರು, ಪರಿಷತ್ ಸದಸ್ಯರು ಹಿಂದಿನ ದಿನ ಸಂಗಮದಲ್ಲಿರುವ ಜಾಗದಲ್ಲಿ ಉಳಿದುಕೊಂಡು ಮರುದಿನ ಪಾದಯಾತ್ರೆ ಆರಂಭಿಸುತ್ತೇವೆ. ಆದರೆ, ಯಾರೂ ಹೋಟೆಲ್ ತೆರೆಯಬಾರದೆಂದು ಹೆದರಿಸಲಾಗಿದೆ. ಸರ್ಕಾರ ನಮಗೆ ಜಾಗ ನೀಡದಿದ್ದರೂ ಪರ್ವಾಗಿಲ್ಲ, ಹೊಳೆ, ನದಿ ಪಕ್ಕ ಮರಗಳ ಕೆಳಗೆ ಹಾಸಿಗೆ ಹಾಕಿಕೊಂಡು ಮಲಗುತ್ತೇವೆ' ಎಂದರು.

'ಕ್ಷುಲ್ಲಕ ರಾಜಕಾರಣ ಮಾಡಬೇಡಿ ಎಂದು ಮುಖ್ಯಮಂತ್ರಿಗೆ ಪತ್ರ ಬರೆದಿದ್ದೇನೆ. ರಾಜ್ಯದ ಎಲ್ಲ ಹೋಟೇಲ್, ವ್ಯಾಪಾರ ವಹಿವಾಟು ಮುಚ್ಚಿಸುವ ನಿರ್ಬಂಧ ಸರಿಯಲ್ಲ. ಸಾರ್ವಜನಿಕರ ಬದುಕಿಗೆ ಅವರ ವಹಿವಾಟಿಗೆ ತೊಂದರೆ ಮಾಡುವುದು ಸರಿಯಲ್ಲ. ಜಿಲ್ಲಾಧಿಕಾರಿಗಳ ಮೂಲಕ ಹೊರಡಿಸಿರುವ ಆದೇಶ ಹಿಂಪಡೆಯುವಂತೆಯೂ ಮನವಿ ಮಾಡಿದ್ದೇನೆ' ಎಂದರು.

'ನಮ್ಮ ಕಾರ್ಯಕ್ರಮ ಮೊಟಕುಗೊಳಿಸಲು, ಯಾರಿಗೂ ಕೊಠಡಿ ಕೊಡಬೇಡಿ, ಹೋಟೆಲ್, ರೆಸ್ಟೋರೆಂಟ್ ಮುಚ್ಚಿಸಿ ಎಂದು ಜಿಲ್ಲಾಧಿಕಾರಿಗಳ ಮೂಲಕ ವಿಶೇಷ ಆದೇಶ ಹೊರಡಿಸಿದ್ದಾರೆ. ರಾಮನಗರದ ಜಿಲ್ಲಾಧಿಕಾರಿ ಮೂಲಕ ಮೇಕೆದಾಟು, ಚುಂಚಿ ಫಾಲ್ಸ್, ಕೆಲವು ಬೆಟ್ಟ, ಸಂಗಮ, ಇತರೆ ಪ್ರವಾಸಿ ತಾಣಗಳಿಗೆ ಯಾರೂ ಹೋಗದಂತೆ ಆದೇಶ ಹೊರಡಿಸಿದ್ದಾರೆ. ಸರ್ಕಾರ ಏನಾದರೂ ಮಾಡಿಕೊಳ್ಳಲಿ. ನಾವು ಪಾದಯಾತ್ರೆ ಮಾಡಿಯೇ ಸಿದ್ಧ' ಎಂದರು.

'ಆರೋಗ್ಯದ ಬಗ್ಗೆ ಚಿಂತಿಸಲಿ'

ಬೆಂಗಳೂರು: 'ಸಿದ್ದರಾಮಯ್ಯ, ಶಿವಕುಮಾರ್ ಕೂಡ ರಾಜ್ಯದ ಆಸ್ತಿ. ಅವರು ಆರೋಗ್ಯವಾಗಿರಬೇಕು ಎಂಬುದು ನಮ್ಮ ಆಸೆ. ಪಾದಯಾತ್ರೆ ನಡೆಸುವ ಮುನ್ನ ಅವರು ತಮ್ಮ ಆರೋಗ್ಯದ ಬಗ್ಗೆ ಚಿಂತಿಸಲಿ'.

ಈಶ್ವರಪ್ಪ

ಮೇಕೆದಾಟು ಯೋಜನೆಗೆ ಆಗ್ರಹಿಸಿ ಕಾಂಗ್ರೆಸ್ ಹಮ್ಮಿಕೊಂಡಿರುವ ಪಾದಯಾತ್ರೆ ತಡೆಯಲು ವಾರಾಂತ್ಯದ ಲಾಕ್‌ಡೌನ್ ಜಾರಿಗೊಳಿಸಲಾಗಿದೆ ಎಂಬ ಆರೋಪ ಕುರಿತು ಸಚಿವ ಕೆ.ಎಸ್.ಈಶ್ವರಪ್ಪ ಪ್ರತಿಕ್ರಿಯೆ ಇದು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಆರೋಗ್ಯದ ಕಾರಣದಿಂದ ಪಾದಯಾತ್ರೆ ಮಾಡಬೇಡಿ ಎಂದು ಮನವಿ ಮಾಡಿದ್ದೇವೆ. ಅವರು ಹಟ ಹಿಡಿದರೆ ನಾವು ಏನು ಮಾಡಲು ಸಾಧ್ಯ' ಎಂದು ಕೇಳಿದರು.

ಕಾಂಗ್ರೆಸ್ ಕ್ಷಮೆ ಕೋರಲಿ: ಪಂಜಾಬ್‌ನಲ್ಲಿ ದೇಶದ ಪ್ರ ಪ್ರಯಾಣಕ್ಕೆ ಅಡ್ಡಿಪಡಿಸಿ, ಅವಮಾನಿಸಿರುವುದಕ್ಕಾಗಿ ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್ ಸಮಿತಿ (ಎಐಸಿಸಿ) ನಾಯಕರು ದೇಶದ ಕ್ಷಮೆ ಯಾಚಿಸಬೇಕು ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಕೆ.ಎಸ್. ಈಶ್ವರಪ್ಪ ಆಗ್ರಹಿಸಿದರು.

ಕಾಂಗ್ರೆಸ್ ನಾಯಕರಾದ ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಕೂಡ ಈ ಬಗ್ಗೆ ಧ್ವನಿ ಎತ್ತಬೇಕು. ಅಡ್ಡಿಪಡಿಸಿದವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಅವರೂ ಒತ್ತಾಯಿಸಬೇಕು ಎಂದು ಒತ್ತಾಯಿಸಿದರು.

'5 ವರ್ಷ ನಿದ್ದೆ ಮಾಡುತ್ತಿದ್ದರು'

ಬೆಂಗಳೂರು: 'ಅಧಿಕಾರದಲ್ಲಿದ್ದಾಗ ಮೇಕೆದಾಟು ಯೋಜನೆ ಜಾರಿಗೆ ಕಾಂಗ್ರೆಸ್ ಏನೂ ಮಾಡಿಲ್ಲ. ಈಗ ಪಾದಯಾತ್ರೆ ಹೊರಟಿದ್ದಾರೆ. ಇದು ರಾಜಕೀಯ ತಂತ್ರ' ಎಂದು ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಟೀಕಿಸಿದರು. ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಅವರು, 'ನಾವು ಏನು ಮಾಡುತ್ತೇವೆ ಎನ್ನುವುದನ್ನು ಮುಂದೆ ಹೇಳುತ್ತೇನೆ' ಎಂದರು.

'2013ರಿಂದ 2018ರವರೆಗೆ ಯೋಜನೆ ವಿಳಂಬಕ್ಕೆ ಯಾರು ಕಾರಣ ಎನ್ನುವುದನ್ನು ದಾಖಲೆಗಳು ಹೇಳುತ್ತಿವೆ' ಎಂದು ದಾಖಲೆಗಳನ್ನು ತೋರಿಸಿದ ಕಾರಜೋಳ, 'ಐದು ವರ್ಷ ಅಧಿಕಾರದಲ್ಲಿ ಇದ್ದಾಗ ಅವರು ಏನೂ ಮಾಡದೆ ನಿದ್ದೆ ಮಾಡುತ್ತಿದ್ದರು. ಈಗ ಕಾವೇರಿ ಬಗ್ಗೆ ಕಣ್ಣೀರು ಹಾಕುತ್ತಿದ್ದಾರೆ. ಐದು ವರ್ಷದಲ್ಲಿ ಯಾವ ರೀತಿ ವಿಳಂಬ ಮಾಡಿದರು ಎನ್ನುವುದಕ್ಕೆ ದಾಖಲೆಗಳಿವೆ' ಎಂದರು. 'ವಿಸ್ತೃತ ಯೋಜನಾ ವರದಿ (ಡಿಪಿಆರ್) ತಯಾರಿಸಿ, ಕೇಂದ್ರ ಜಲ ಆಯೋಗಕ್ಕೆ (ಸಿಡಬ್ಲ್ಯುಸಿ) ಕಳುಹಿಸಲು ಕಾಂಗ್ರೆಸ್‌ನವರು ಐದು ವರ್ಷ ತೆಗೆದುಕೊಂಡರು. ಡಿಪಿಆರ್ ತಯಾರು ಮಾಡಲು ಎಚ್.ಡಿ. ಕುಮಾರಸ್ವಾಮಿ ಸರ್ಕಾರ ಬೇಕಿತ್ತು. ನೀವು ಐದು ವರ್ಷಗಳ ಕಾಲ ಏನು ಮಾಡಿದಿರಿ' ಎಂದು ಪ್ರಶ್ನಿಸಿದರು.

'ಡಬಲ್ ಎಂಜಿನ್ ಏನು ಮಾಡಿತು?'

'ಬಿಜೆಪಿ ಅಧಿಕಾರಕ್ಕೆ ಬಂದು ಎರಡೂವರೆ ವರ್ಷ ಆಗಿದೆ. ಕೇಂದ್ರದಲ್ಲೂ ಅವರದ್ದೇ ಸರ್ಕಾರ ಇದೆ. ಎರಡೂವರೆ ವರ್ಷದಲ್ಲಿ ಡಬಲ್ ಎಂಜಿನ್ ಏನು ಮಾಡಿತು ಎಂದು ಹೇಳುತ್ತಿಲ್ಲ' ಎಂದು ಸಿದ್ದರಾಮಯ್ಯ ಅವರು ಗೋವಿಂದ ಕಾರಜೋಳ ಹೇಳಿಕೆಗೆ ತಿರುಗೇಟು ನೀಡಿದರು.

'2016ರಲ್ಲಿಯೇ ಕೇಂದ್ರ ಜಲ ಆಯೋಗಕ್ಕೆ ಡಿಪಿಆರ್ ಕೊಟ್ಟಿದ್ದೇವೆ. ಬಳಿಕ ಆಯೋಗದವರು ಕೆಲ ಸ್ಪಷ್ಟನೆ ಕೇಳಿದ್ದರು. 2007ರ ಕಾವೇರಿ ತೀರ್ಪಿಗೆ ಸಲ್ಲಿಸಿದ್ದ ವಿಶೇಷ ಮೇಲ್ಮನವಿಯ ತೀರ್ಪು ಫೆ. 16ರಂದು ಬಂತು. 2018ರ ಮೇ ತಿಂಗಳಲ್ಲಿ ಸಮ್ಮಿಶ್ರ ಸರ್ಕಾರ ಅಧಿಕಾರಕ್ಕೆ ಬಂತು. 2019ರ ಜನವರಿಯಲ್ಲಿ ಜಲಸಂಪನ್ಮೂಲ ಸಚಿವರಾಗಿದ್ದ ಡಿ.ಕೆ.ಶಿವಕುಮಾರ್ ₹ 9000 ಕೋಟಿಗೆ ಪರಿಷ್ಕೃತ ಡಿಪಿಆರ್ ಸಲ್ಲಿಸಿದ್ದರು. ಹೀಗಿರುವಾಗ ನಾವು ವಿಳಂಬ ಎಲ್ಲಿ ಮಾಡಿದ್ದೇವೆ' ಎಂದು ಪ್ರಶ್ನಿಸಿದರು.

90 ಸಾವಿರ ದಾಟಿದ ಕೋವಿಡ್ ಪ್ರಕರಣ

ನವದೆಹಲಿ (ಪಿಟಿಐ): ದೇಶದಲ್ಲಿ ಗುರುವಾರ ಬೆಳಿಗ್ಗೆ 8 ಗಂಟೆಯ ಹಿಂದಿನ 24 ತಾಸುಗಳಲ್ಲಿ 90,928 ಕೋವಿಡ್ ಪ್ರಕರಣಗಳು ದೃಢಪಟ್ಟಿವೆ. ಇದು 200 ದಿನಗಳಲ್ಲಿಯೇ ಅತ್ಯಂತ ಹೆಚ್ಚು ಎಂದು ಕೇಂದ್ರ ಆರೋಗ್ಯ ಸಚಿವಾಲಯ ಹೇಳಿದೆ.

ಕೊರೊನಾ ವೈರಾಣುವಿನ ಹೊಸ ರೂಪಾಂತರ ತಳಿ ಓಮೈಕ್ರಾನ್ ಪ್ರಕರಣಗಳಲ್ಲಿ ಕೂಡ ದಾಖಲೆ ಏರಿಕೆ ಕಂಡು ಬಂದಿದೆ. 24 ತಾಸುಗಳಲ್ಲಿ 495 ಪ್ರಕರಣಗಳು ವರದಿಯಾಗಿವೆ. ಇದು ಒಂದು ದಿನದಲ್ಲಿ ಈ ವರೆಗಿನ ಗರಿಷ್ಠ ಏರಿಕೆಯಾಗಿದೆ. ಒಟ್ಟು ಪ್ರಕರಣಗಳ ಸಂಖ್ಯೆಯು 2,630ಕ್ಕೆ ಹೆಚ್ಚಿದೆ.

ಮಹಾರಾಷ್ಟ್ರದಲ್ಲಿ ಅತಿ ಹೆಚ್ಚು ಅಂದರೆ 797 ಪ್ರಕರಣಗಳು ವರದಿಯಾಗಿವೆ. ದೆಹಲಿ (465), ರಾಜಸ್ಥಾನ (236), ಕೇರಳ (234), ಕರ್ನಾಟಕ (226), ಗುಜರಾತ್ (204) ಮತ್ತು ತಮಿಳು ನಾಡು (121) ನಂತರದ ಸ್ಥಾನಗಳಲ್ಲಿವೆ.

ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ ಲೋಪದ ಚರ್ಚೆ: ಅಸಾಧಾರಣ ಕ್ರಮಕ್ಕೆ ಸಚಿವರ ಒತ್ತಾಯ

ಭದ್ರತೆ ಲೋಪ: 'ಸುಪ್ರೀಂ' ವಿಚಾರಣೆ ಇಂದು

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಪಂಜಾಬ್‌ಗೆ ಬುಧವಾರ ಭೇಟಿ ಕೊಟ್ಟಾಗ ಉಂಟಾದ ಭದ್ರತಾ ಲೋಪದ ಬಗ್ಗೆ ಸಮಗ್ರ ತನಿಖೆ ನಡೆಸಬೇಕು ಎಂದು ಕೋರಿ ಸಲ್ಲಿಕೆಯಾಗಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಶುಕ್ರವಾರ ವಿಚಾರಣೆಗೆ ಎತ್ತಿಕೊಳ್ಳಲಿದೆ. ಭವಿಷ್ಯದಲ್ಲಿ ಇಂತಹ ಭದ್ರತಾ ಲೋಪ ಸಂಭವಿಸದಂತೆ ಖಾತರಿಪಡಿಸಬೇಕು ಎಂದು ಅರ್ಜಿಯಲ್ಲಿ ಕೋರಲಾಗಿದೆ.

ಪ್ರಧಾನಿಯವರ ವಾಹನ ಸಾಲು ಭಟಿಂಡಾದಲ್ಲಿ ಸ್ವಲ್ಪ ಹೊತ್ತು ಸ್ಥಗಿತವಾಗಿತ್ತು. ಪ್ರಧಾನಿಯವರು ರ‍್ಯಾಲಿಯೊಂದರಲ್ಲಿ ಭಾಗವಹಿಸಬೇಕಿತ್ತು. ಆದರೆ, ಭದ್ರತಾ ಲೋಪದ ಬಳಿಕ ಪ್ರಧಾನಿಯವರು ಕಾರ್ಯಕ್ರಮದಲ್ಲಿ ಭಾಗವಹಿಸದೆಯೇ ಹಿಂದಿರುಗಿದ್ದರು.

'ಅರ್ಜಿಯ ಪ್ರತಿಯನ್ನು ರಾಜ್ಯ ಸರ್ಕಾರಕ್ಕೆ ಕಳುಹಿಸಿಕೊಡಿ. ನಾಳೆ (ಶುಕ್ರವಾರ) ಮೊದಲನೆಯದಾಗಿ ಈ ಅರ್ಜಿಯ ವಿಚಾರಣೆ ನಡೆಸಲಾಗುವುದು' ಎಂದು ಮುಖ್ಯ ನ್ಯಾಯಮೂರ್ತಿ ಎನ್.ವಿ. ರಮಣ ನೇತೃತ್ವದ ಪೀಠವು ಹೇಳಿದೆ.

ಹಿರಿಯ ವಕೀಲ ಮಣೀಂದರ್ ಸಿಂಗ್ ಅವರು ಅರ್ಜಿ ಸಲ್ಲಿಸಿದ್ದಾರೆ. ಅರ್ಜಿಯ ವಿಚಾರಣೆಯನ್ನು ತುರ್ತಾಗಿ ಇಂದೇ (ಗುರುವಾರ) ನಡೆಸಬೇಕು ಎಂದು ಅವರು ಕೋರಿದ್ದರು. ಪಂಜಾಬ್ ಪೊಲೀಸರು ಪಂಜಾಬ್ ಭೇಟಿಗಾಗಿ ಮಾಡಿದ್ದ ಭದ್ರತಾ ವ್ಯವಸ್ಥೆಯ ಎಲ್ಲ ಸಾಕ್ಷ್ಯಗಳನ್ನು ಸುಪರ್ದಿಗೆ ತೆಗೆದುಕೊಳ್ಳುವಂತೆ ಭಟಿಂಡಾ ಜಿಲ್ಲಾ ನ್ಯಾಯಾಧೀಶರಿಗೆ ನಿರ್ದೇಶನ ನೀಡಬೇಕು ಎಂದು ಅರ್ಜಿಯಲ್ಲಿ ಕೋರಲಾಗಿದೆ.

'ಪಂಜಾಬ್‌ನಲ್ಲಿ ಈಗ ಇರುವ ಪರಿಸ್ಥಿತಿಯಲ್ಲಿ ಲೋಪದ ಬಗ್ಗೆ ನ್ಯಾಯಯುತ ತನಿಖೆ ಸಾಧ್ಯವಿಲ್ಲ. ಹಾಗಾಗಿ, ಭವಿಷ್ಯದಲ್ಲಿ ಇಂತಹ ಘಟನೆಗಳು ನಡೆಯದಂತೆ ಖಾತರಿಪಡಿಸುವುದಕ್ಕಾಗಿ ಲೋಪಕ್ಕೆ ಹೊಣೆ ಯಾರು ಎಂಬುದನ್ನು ಗುರುತಿಸುವುದಕ್ಕೂ ಸಾಧ್ಯವಾಗದು' ಎಂದು ಮಣೀಂದರ್ ಅವರು ಪ್ರತಿಪಾದಿಸಿದ್ದಾರೆ.

'ನಮ್ಮಿಂದ ನೀವು ಏನನ್ನು ನಿರೀಕ್ಷಿಸುತ್ತಿದ್ದೀರಿ' ಎಂದು ಪೀಠವು ಮಣೀಂದರ್ ಅವರನ್ನು ಪ್ರಶ್ನಿಸಿತು.

'ಇಂತಹ ಘಟನೆಯು ಮರುಕಳಿಸಬಾರದು. ವೃತ್ತಿಪರ ಮತ್ತು ಪರಿಣಾಮಕಾರಿ ತನಿಖೆ ಆಗಬೇಕು. ನ್ಯಾಯಾಲಯದ ಉಸ್ತುವಾರಿಯಲ್ಲಿ ತನಿಖೆ ನಡೆಯಬೇಕು. ಈಗಿನ ಪರಿಸ್ಥಿತಿಯಲ್ಲಿ ಅದುವೇ ಸರಿಯಾದ ನಡೆ' ಎಂದು ಮಣೀಂದರ್ ಹೇಳಿದರು.

'ಲಾಯರ್ಸ್ ವಾಯ್ಸ್' ಸಂಸ್ಥೆಯ ಪರವಾಗಿ ಮಣೀಂದರ್ ಅವರು ಅರ್ಜಿ ಸಲ್ಲಿಸಿದ್ದಾರೆ. ಭದ್ರತಾ ಲೋಪವು ಉದ್ದೇಶಪೂರ್ವಕ. ರಾಷ್ಟ್ರೀಯ ಭದ್ರತೆ ಮತ್ತು ಈಗ ಇರುವ ರಾಜ್ಯ ಸರ್ಕಾರದ ಕುರಿತು ಇದು ಪ್ರಶ್ನೆಗಳನ್ನು ಹುಟ್ಟು ಹಾಕಿದೆ ಎಂದು ಅರ್ಜಿದಾರರು ಹೇಳಿದ್ದಾರೆ.

ಸಂಪುಟದಲ್ಲಿ ಚರ್ಚೆ: ಪ್ರಧಾನಿಯ ಭದ್ರತೆಯಲ್ಲಿ ಆಗಿರುವ ಲೋಪದ ಬಗ್ಗೆ ಗುರುವಾರ ನಡೆದ ಸಂಪುಟ ಸಭೆಯಲ್ಲಿ ಚರ್ಚೆ ಆಗಿದೆ. ಸಚಿವರಲ್ಲಿ ಹಲವರು ಘಟನೆಯ ಬಗ್ಗೆ ಕಳವಳ ವ್ಯಕ್ತಪಡಿಸಿದ್ದಾರೆ. ಲೋಪಕ್ಕೆ ಕಾರಣ ಆಗಿರುವವರ ವಿರುದ್ಧ ಅಸಾಧಾರಣ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ ಎಂದು ಮೂಲಗಳು ಹೇಳಿವೆ.

ಪಂಜಾಬ್‌ನಲ್ಲಿ ಅಧಿಕಾರದಲ್ಲಿರುವ ಕಾಂಗ್ರೆಸ್ ಸರ್ಕಾರವು ಪ್ರಧಾನಿಯ ಭೇಟಿಯನ್ನು ನಿರ್ವಹಿಸಿದ ರೀತಿಯ ಬಗ್ಗೆ ಸಚಿವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

- ರಾಜ್ಯದ ಗೃಹ ಸಚಿವ ಸುಖ್‌ಜಿಂದರ್ ಸಿಂಗ್ ರಾಂಧವ ಮತ್ತು ಪೊಲೀಸ್ ಮುಖ್ಯಸ್ಥರನ್ನು ವಜಾ ಮಾಡಬೇಕು ಎಂದು ಕೋರಿ ಪಂಜಾಬ್ ಬಿಜೆಪಿ ಘಟಕದ ಮುಖಂಡರು ರಾಜ್ಯಪಾಲರನ್ನು ಭೇಟಿಯಾಗಿ ಒತ್ತಾಯಿಸಿದ್ದಾರೆ
- ಪ್ರಧಾನಿ ನರೇಂದ್ರ ಮೋದಿ ಅವರು ದೀರ್ಘಾಯುಷ್ಯಕ್ಕಾಗಿ ಮಧ್ಯ ಪ್ರದೇಶದ ವಿವಿಧೆಡೆ ಬಿಜೆಪಿ ಮುಖಂಡರು ಮತ್ತು ಕಾರ್ಯಕರ್ತರು 'ಮಹಾಮೃತ್ಯುಂಜಯ ಯಾಗ'ವನ್ನು ಗುರುವಾರ ನಡೆಸಿದ್ದಾರೆ. ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ನೇತೃತ್ವದಲ್ಲಿ ಯಾಗ ನಡೆಯಿತು. ದೇಶದ ಇತರ ಕೆಲವು ರಾಜ್ಯಗಳಲ್ಲಿಯೂ ಪೂಜೆ ನಡೆದಿದೆ

ಪ್ರಧಾನಿ ಮೋದಿಯಿಂದ ಗಿಮಿಕ್: ಚನ್ನಿ

ಹೋಷಿಯಾರ್‌ಪುರ (ಪಂಜಾಬ್) (ಪಿಟಿಐ): 'ಪ್ರಜಾಸತ್ತಾತ್ಮಕವಾಗಿ ಆಯ್ಕೆಯಾಗಿರುವ ಪಂಜಾಬ್ ಸರ್ಕಾರವನ್ನು ಉರುಳಿಸಿ, ರಾಷ್ಟ್ರಪತಿ ಆಳ್ವಿಕೆ ಹೇರಲು ಪ್ರಧಾನಿ ನರೇಂದ್ರ ಮೋದಿ ಅವರು ಭದ್ರತಾ ಲೋಪದ ಗಿಮಿಕ್ ಮಾಡುತ್ತಿದ್ದಾರೆ' ಎಂದು ಪಂಜಾಬ್ ಮುಖ್ಯಮಂತ್ರಿ ಚರಣ್‌ಜಿತ್ ಸಿಂಗ್ ಚನ್ನಿ ಆರೋಪಿಸಿದ್ದಾರೆ.

'ಮೋದಿ ಅವರು ಹೋಗಬೇಕಿದ್ದ ರ‍್ಯಾಲಿಯಲ್ಲಿ ಜನರೇ ಸೇರಿರಲಿಲ್ಲ. ಇದರಿಂದ ರ‍್ಯಾಲಿ ರದ್ದುಪಡಿಸಿದರು. ಪ್ರಧಾನಿ ಜೀವಕ್ಕೆ ಅಪಾಯವಿತ್ತು ಎಂಬ ಆರೋಪದಲ್ಲೂ ಹುರುಳಿಲ್ಲ. ಪ್ರಧಾನಿ ಇದ್ದ ವಾಹನಗಳು ನಿಂತಿದ್ದ ಜಾಗದಿಂದ 1 ಕಿ.ಮೀ. ದೂರದಲ್ಲಿ ರೈತರು ಪ್ರತಿಭಟನೆ ನಡೆಸುತ್ತಿದ್ದರು. ಮೇಲ್ಸೇತುವೆ ಮೇಲೆ ಪ್ರತಿಭಟನಕಾರರು ಒಂದು ಘೋಷಣೆಯನ್ನೂ ಕೂಗಿಲ್ಲ. ಹೀಗಿದ್ದಾಗ, ಅವರಿಗೆ ಅಪಾಯ ಎದುರಾಗಿದ್ದಾದರೂ ಹೇಗೆ' ಎಂದು ಚನ್ನಿ ಪ್ರಶ್ನಿಸಿದ್ದಾರೆ. 'ಜಮ್ಮು-ಕಾಶ್ಮೀರದಲ್ಲಿ ಏನೂ ಸರಿ ಇಲ್ಲ ಎಂದು ಬಿಂಬಿಸಿದಂತೆ, ಪಂಜಾಬ್‌ನಲ್ಲೂ ಬಿಂಬಿಸಲು ಸರ್ಕಾರ ತಂತ್ರ ಹೂಡುತ್ತಿದೆ. ಆ ಮೂಲಕ ಇಲ್ಲಿ ರಾಷ್ಟ್ರಪತಿ ಆಳ್ವಿಕೆ ಹೇರಲು ಸಂಚು ಮಾಡುತ್ತಿದೆ' ಎಂದಿದ್ದಾರೆ.



ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರನ್ನು ಪ್ರಧಾನಿ ನರೇಂದ್ರ ಮೋದಿ ಅವರು ಭೇಟಿ ಮಾಡಿದರು —ಪಿಟಿಐ ಚಿತ್ರ

ತನಿಖೆಗೆ ಆಗ್ರಹ

ಮಾನ್ಯ ಪ್ರಧಾನಿಯ ಭದ್ರತೆಗೆ ಸಂಬಂಧಿಸಿದಂತೆ ನಿರ್ದಿಷ್ಟ ನಿಯಮಾವಳಿಗಳು ಇವೆ. ಅವುಗಳನ್ನು ಚಾಚೂತಪ್ಪದೆ ಅನುಷ್ಠಾನಕ್ಕೆ ತರಬೇಕು. ಅವರ ಭೇಟಿಯ ವೇಳೆ ಅಗತ್ಯವಿರುವ ಎಲ್ಲಾ ವ್ಯವಸ್ಥೆಗಳನ್ನು ಮಾಡಬೇಕು

ಓಂ ಪ್ರಕಾಶ್ ಬಿರ್ಲಾ, ಲೋಕಸಭೆ ಸ್ಪೀಕರ್

ಪ್ರಧಾನಿ ಮೋದಿ ಈ ಹಿಂದೆ ಮಾಹಿತಿ ನೀಡದೆಯೇ, ಪಾಕಿಸ್ತಾನದ ಅಂದಿನ ಪ್ರಧಾನಿ ನವಾಜ್ ಷರೀಫ್ ಅವರ ಮನೆಗೆ ಭೇಟಿ ನೀಡಿದ್ದರು. ಆಗ ಅವರಿಗೆ ಯಾವುದೇ ತೊಂದರೆ ಇರಲಿಲ್ಲ. ಆದರೆ, ಈಗ ಈ ವಿಚಾರವನ್ನು ದೊಡ್ಡದು ಮಾಡುತ್ತಿದ್ದಾರೆ. ಮೋದಿ ಈ ವಿಚಾರವನ್ನು ಇಷ್ಟು ದೊಡ್ಡದು ಮಾಡಬಾರದಿತ್ತು

ದಿಗ್ವಿಜಯ್ ಸಿಂಗ್, ಕಾಂಗ್ರೆಸ್ ಹಿರಿಯ ನಾಯಕ

ಜಗತ್ತಿನ ಅತ್ಯಂತ ಖ್ಯಾತ ಮತ್ತು ಪ್ರೀತಿಪಾತ್ರ ನಾಯಕರಾದ ಪ್ರಧಾನಿ ನರೇಂದ್ರ ಮೋದಿ ಅವರ ಭದ್ರತೆ ವಿಚಾರದಲ್ಲಿ ಕಾಂಗ್ರೆಸ್ ಸರ್ಕಾರವು ಉದ್ದೇಶಪೂರ್ವಕವಾಗಿ ನಿರ್ಲಕ್ಷ್ಯ ತೋರಿದೆ. ಇದೊಂದು ಸಂಚೇ ಸರಿ

ಮುಕ್ತಾರ್ ಅಬ್ಬಾಸ್ ನಖ್ವಿ, ಕೇಂದ್ರ ಸಚಿವ

ಪ್ರಧಾನಿ ಭದ್ರತೆಯಲ್ಲಿ ಲೋಪವಾದ ಕಾರಣ, ರ‍್ಯಾಲಿಯನ್ನು ರದ್ದುಪಡಿಸಲಾಯಿತು ಎಂದು ಬಿಜೆಪಿ ಹೇಳುತ್ತಿದೆ. ಆದರೆ ರ‍್ಯಾಲಿಯಲ್ಲಿ ಜನರೇ ಇಲ್ಲದೆ, ಕುರ್ಚಿಗಳು ಖಾಲಿ ಇದ್ದವು. ಇದಕ್ಕಾಗಿ ರ‍್ಯಾಲಿ ರದ್ದುಪಡಿಸಲಾಯಿತು ಎಂದು ಪಂಜಾಬ್ ಮುಖ್ಯಮಂತ್ರಿ ಹೇಳುತ್ತಿದ್ದಾರೆ. ಈಗ ಭದ್ರತಾ ಲೋಪದಿಂದಲೇ ಹೀಗಾಯಿತೇ ಅಥವಾ ಇದಕ್ಕೆ ರೈತರ ಆಕ್ರೋಶ ಕಾರಣವೇ ಎಂಬುದನ್ನು ಪತ್ತೆಮಾಡುವುದು ಅತ್ಯಗತ್ಯವಾಗಿದೆ

ರಾಕೇಶ್ ಟಿಕಾಯತ್, ಬಿಕೆಯು ನಾಯಕ

ಮಳೆ ಬರುತ್ತಿತ್ತು, ರ‍್ಯಾಲಿಗೆ ಜನರು ಬಂದಿರಲಿಲ್ಲ. ಇನ್ನೆರಡು ತಿಂಗಳಲ್ಲಿ ಚುನಾವಣೆ ಎದುರಿಸಲಿರುವ ರಾಜ್ಯದಲ್ಲಿ, ಸರ್ಕಾರ ಮತ್ತು ಮುಖ್ಯಮಂತ್ರಿಯ ಮೇಲೆ ದೋಷ ಹೊರಿಸುವ ಬದಲು, ಪ್ರಧಾನಿ ಅವರು ತಮ್ಮ ರ‍್ಯಾಲಿಯನ್ನು ಗೌರವಪೂರ್ವಕವಾಗಿ ಮುಂದೂಡಬಹುದಾಗಿತ್ತು. ಅಲ್ಲಿಗೆ ಹೋಗಲೇಬೇಕು ಎಂದು ಪ್ರಧಾನಿಯೇ ನಿರ್ಧರಿಸಿದರೆ ಅಥವಾ ಆ ಬಗ್ಗೆ ಯಾರಾದರೂ ಪ್ರಧಾನಿಯ ಹಾದಿ ತಪ್ಪಿಸಿದರೆ ಎಂಬುದನ್ನು ಪತ್ತೆ ಮಾಡಲು ತನಿಖೆ ನಡೆಸಬೇಕು

ಅಶೋಕ್ ಗೆಹಲೋತ್, ರಾಜಸ್ಥಾನ ಮುಖ್ಯಮಂತ್ರಿ

ಈ ವಿಚಾರದಲ್ಲಿ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ ಪರಸ್ಪರ ಭಿನ್ನವಾದ ಹೇಳಿಕೆ ನೀಡುತ್ತಿವೆ. ಇಲ್ಲಿ ನಿಜಕ್ಕೂ ಏನಾಗಿದೆ ಎಂಬುದನ್ನು ತಿಳಿದುಕೊಳ್ಳಲು ಮತ್ತು ತಪ್ಪಿತಸ್ಥರನ್ನು ಪತ್ತೆ ಮಾಡಲು ಹಾಲಿ ನ್ಯಾಯಮೂರ್ತಿಯೊಬ್ಬರ ನೇತೃತ್ವದಲ್ಲಿ ನ್ಯಾಯಾಂಗ ತನಿಖೆ ನಡೆಸಬೇಕು. ಜನರಿಗೆ ಸತ್ಯ ತಿಳಿಯಬೇಕಾದದ್ದೇ ಅತ್ಯಂತ ಮುಖ್ಯ

ನವಾಬ್ ಮಲಿಕ್, ಎನ್‌ಸಿಪಿ ವಕ್ತಾರ

ಪರೀಕ್ಷೆ ಹೆಚ್ಚಿಸಲು 9 ರಾಜ್ಯಗಳಿಗೆ ಕೇಂದ್ರ ಪತ್ರ

ನವದೆಹಲಿ (ಪಿಟಿಐ): ಕೊರೊನಾ ರೂಪಾಂತರ ತಳಿ ಓಮೈಕ್ರಾನ್ ಪ್ರಬಲವಾಗಿ ಹರಡುವ ಗುಣ ಹೊಂದಿದ್ದು, ರೋಗಲಕ್ಷಣಗಳಿಲ್ಲದ ಪ್ರಕರಣಗಳು ಹೆಚ್ಚಾಗಿ ಕಂಡುಬರುತ್ತಿವೆ. ರೋಗ ಲಕ್ಷಣಗಳಿಲ್ಲದ ಜನರಿಂದ ಇತರರಿಗೆ ಸೋಂಕು ಹರಡುವುದಕ್ಕೆ ಕಡಿವಾಣ ಹಾಕುವ ಉದ್ದೇಶದಿಂದ ಕೋವಿಡ್ ಪತ್ತೆ ಪರೀಕ್ಷೆಗಳ ಪ್ರಮಾಣವನ್ನು ಹೆಚ್ಚಿಸುವಂತೆ 9 ರಾಜ್ಯಗಳಿಗೆ ಕೇಂದ್ರ ಸರ್ಕಾರ ಗುರುವಾರ ಸೂಚಿಸಿದೆ.

ತಮಿಳುನಾಡು, ಪಂಜಾಬ್, ಒಡಿಶಾ, ಉತ್ತರ ಪ್ರದೇಶ, ಉತ್ತರಾಖಂಡ, ಮಿಜೋರಾಂ, ಮೇಘಾಲಯ, ಜಮ್ಮು-ಕಾಶ್ಮೀರ ಮತ್ತು ಬಿಹಾರ ರಾಜ್ಯಗಳಿಗೆ ಕೇಂದ್ರ ಆರೋಗ್ಯ ಸಚಿವಾಲಯದ ಹೆಚ್ಚುವರಿ ಕಾರ್ಯದರ್ಶಿ ಆರತಿ ಅಹುಜಾ ಅವರು ಪತ್ರ ಬರೆದಿದ್ದಾರೆ. ಕೋವಿಡ್ ಪ್ರಕರಣಗಳು ಹೆಚ್ಚುತ್ತಿದ್ದರೂ, ಕೋವಿಡ್ ದೃಢಪಡುವ ಪ್ರಮಾಣ ಅಧಿಕವಾಗುತ್ತಿದ್ದರೂ ರಾಜ್ಯಗಳು ಪರೀಕ್ಷೆ ಪ್ರಮಾಣವನ್ನು ಹೆಚ್ಚಿಸಿಲ್ಲ ಎಂದು ಅವರು ಕಳವಳ ವ್ಯಕ್ತಪಡಿಸಿದ್ದಾರೆ.

'ಓಮೈಕ್ರಾನ್ ಪ್ರಕರಣಗಳಲ್ಲಿ ತೀವ್ರ ಹೆಚ್ಚಳ ಕಂಡುಬಂದಿರುವುದರಿಂದ ಹಾಗೂ ಲಸಿಕೆ ಕಾರ್ಯಕ್ರಮವನ್ನು ಪೂರ್ಣಗೊಳಿಸಿರುವ ದೇಶಗಳಲ್ಲೂ ಸೋಂಕು ವ್ಯಾಪಕವಾಗಿ ಉಲ್ಬಣಿಸುತ್ತಿರುವುದರಿಂದ, ನಿರಂತರವಾದ ನಿಗಾ ಅಗತ್ಯವಿದೆ' ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಮತ್ತೆ ಕೋವಿಡ್ ಅಬ್ಬರ

- ದೆಹಲಿಯಲ್ಲಿ ಒಂದೇ ದಿನದಲ್ಲಿ 15,097 ಹೊಸ ಪ್ರಕರಣ ದಾಖಲಾಗಿದ್ದು, ಕೋವಿಡ್ ದೃಢಪಡುವ ಪ್ರಮಾಣ ಶೇ 15.34ಕ್ಕೆ ಏರಿಕೆ. ಮುಂಬೈಯಲ್ಲಿ 20,181 ಪ್ರಕರಣಗಳು ಪತ್ತೆಯಾಗಿವೆ.
- ಕೋವಿಡ್ ಏರಿಕೆ: 'ವೈಬ್ರಂಟ್ ಗುಜರಾತ್' ಸಮಾರಂಭ ಮುಂದೂಡಿಕೆ
- ಹರಿಯಾಣ: 6 ಜಿಲ್ಲೆಗಳಲ್ಲಿ ಚಿತ್ರಮಂದಿರ, ಮಲ್ಟಿಪ್ಲೆಕ್ಸ್ ಮುಚ್ಚಲು ಆದೇಶ
- ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹಲೋತ್, ಕೇಂದ್ರ ಸಚಿವರಾದ ನಿತ್ಯಾನಂದ ರಾಯ್ ಹಾಗೂ ಭಾರತಿ ಪವಾರ್ ಅವರಿಗೆ ಕೋವಿಡ್ ದೃಢ
- ಇಟಲಿಯಿಂದ ಅಮೃತಸರಕ್ಕೆ ಬಂದ ವಿಮಾನದಲ್ಲಿದ್ದ 179 ಪ್ರಯಾಣಿಕರ ಪೈಕಿ 125 ಮಂದಿಗೆ ಕೋವಿಡ್ ದೃಢಪಟ್ಟಿದೆ.

ಮುನ್ನೆಚ್ಚರಿಕೆ ಡೋಸ್ ಮಾರ್ಗಸೂಚಿ

ಆರೋಗ್ಯ ಕಾರ್ಯಕರ್ತರು ಮತ್ತು ಕೋವಿಡ್ ಮುಂಚೂಣಿ ಕಾರ್ಯಕರ್ತರಿಗೆ ಕೋವಿಡ್ ಲಸಿಕೆಯ ಮೊದಲ ಎರಡು ಡೋಸ್ ರೀತಿಯಲ್ಲಿಯೇ 'ಮುನ್ನೆಚ್ಚರಿಕೆ ಡೋಸ್' ಅನ್ನು ಕೂಡ ನೀಡಲಾಗುವುದು. ಹಿರಿಯ ನಾಗರಿಕರು ಮತ್ತು ಗಂಭೀರ ಅನಾರೋಗ್ಯ ಹೊಂದಿರುವವರಿಗೂ ಮುನ್ನೆಚ್ಚರಿಕೆ ಡೋಸ್ ನೀಡಲಾಗುವುದು. ಇದು ಇದೇ 10ರಂದು ಆರಂಭವಾಗಲಿದೆ.

ಕೋವಿಡ್ ಲಸಿಕೆ ಕೇಂದ್ರಗಳಾಗಿ ಕಾರ್ಯನಿರ್ವಹಿಸುತ್ತಿರುವ ಖಾಸಗಿ ಆಸ್ಪತ್ರೆಗಳು ತಮ್ಮ ಸಿಬ್ಬಂದಿಗೆ ಮುನ್ನೆಚ್ಚರಿಕೆ ಡೋಸ್ ನೀಡಬಹುದು ಎಂದು ಕೇಂದ್ರ ಆರೋಗ್ಯ ಕಾರ್ಯದರ್ಶಿ ರಾಜೇಶ್ ಭೂಷಣ್ ಅವರು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಬರೆದ ಪತ್ರದಲ್ಲಿ ಹೇಳಿದ್ದಾರೆ.

ಸೌಮ್ಯ ಲಕ್ಷಣ: ಮನೆ ಆರೈಕೆಗೆ ಸೂಚನೆ

ಬೆಂಗಳೂರು: ಕೊರೊನಾ ಸೋಂಕಿತರಲ್ಲಿ ಲಕ್ಷಣ ರಹಿತರು ಹಾಗೂ ಸೌಮ್ಯ ಲಕ್ಷಣ ಇರುವವರು ಮನೆ ಆರೈಕೆಗೆ ಒಳಗಾಗಬೇಕು ಎಂದು ಆರೋಗ್ಯ ಇಲಾಖೆ ಸೂಚಿಸಿದೆ.

ಈ ಬಗ್ಗೆ ಇಲಾಖೆ ಸುತ್ತೋಲೆ ಹೊರಡಿಸಿದೆ. ಸಣ್ಣ ಪ್ರಮಾಣದಲ್ಲಿ ಉಸಿರಾಟದ ಸಮಸ್ಯೆ, ರಕ್ತದಲ್ಲಿನ ಆಮ್ಲಜನಕ ಪ್ರಮಾಣ ಶೇ 93ಕ್ಕಿಂತ ಕಡಿಮೆ ಇರುವವರು ತಕ್ಷಣ ಆಸ್ಪತ್ರೆಗೆ ದಾಖಲಾಗಬೇಕು ಎಂದು ತಿಳಿಸಲಾಗಿದೆ.

ಮನೆಯಲ್ಲಿ ಆರೈಕೆಗೆ ಒಳಗಾಗುವರು ಕಡ್ಡಾಯವಾಗಿ ಎರಡೂ ಡೋಸ್ ಲಸಿಕೆ ಪಡೆದಿರಬೇಕು. ಆರೋಗ್ಯ ಕಾರ್ಯಕರ್ತರು ಅವರ ಮೇಲೆ ನಿಗಾ ಇಡಬೇಕು. 60 ವರ್ಷ ಮೇಲ್ಪಟ್ಟವರು ಹಾಗೂ ಅನಾರೋಗ್ಯ ಸಮಸ್ಯೆ ಉಳ್ಳವರು ಮನೆ ಆರೈಕೆಗೆ ಒಳಗಾಗುವಂತಿಲ್ಲ. ವೈದ್ಯರ ಸಲಹೆಯಂತೆ ಚಿಕಿತ್ಸೆ ಪಡೆಯಬೇಕು ಎಂದು ಹೇಳಲಾಗಿದೆ.

ಸೋಂಕಿತರಿರುವ ಕೊಠಡಿ ಗಾಳಿ– ಬೆಳಕಿನಿಂದ ಕೂಡಿರಬೇಕು. ಕಿಟಕಿ ತೆರೆದಿಡಬೇಕು. ಸೋಂಕಿತರು ಮೂರು ಪದರಗಳ ಮುಖಗವಸು (ಮಾಸ್ಕ್) ಧರಿಸಬೇಕು. ದ್ರವ ರೂಪದ ಆಹಾರವನ್ನು ಹೆಚ್ಚಾಗಿ ಸೇವಿಸಬೇಕು. ಪಲ್ಸ್ ಆಕ್ಸಿಮೀಟರ್ ನೆರವಿನಿಂದ ಆಮ್ಲಜನಕದ ಮಟ್ಟ ಪರೀಕ್ಷಿಸಿಕೊಳ್ಳಬೇಕು. ದೇಹದ ಉಷ್ಣತೆ ಬಗ್ಗೆಯೂ ಗಮನಿಸೇಕು ಎಂದು ಸೂಚಿಸಲಾಗಿದೆ.

ವಾರಾಂತ್ಯ ಕರ್ಫ್ಯೂ ಇಂದು ರಾತ್ರಿಯಿಂದ

ಬೆಂಗಳೂರು: ಕೋವಿಡ್ ಪ್ರಕರಣಗಳು ಹೆಚ್ಚಳವಾಗುತ್ತಿರುವುದರಿಂದ ರಾಜ್ಯದಾದ್ಯಂತ ವಾರಾಂತ್ಯದ ಎರಡು ದಿನದ ಕರ್ಫ್ಯೂ ಶುಕ್ರವಾರ (ಜ.7) ರಾತ್ರಿಯಿಂದ ಜಾರಿಯಾಗಲಿದೆ.

ರಾತ್ರಿ 10ರಿಂದ ಸೋಮವಾರ ಬೆಳಿಗ್ಗೆ 5 ಗಂಟೆವರೆಗೆ ಕರ್ಫ್ಯೂ ಜಾರಿಯಲ್ಲಿರುತ್ತದೆ. ಈ ವೇಳೆ, ಅನಗತ್ಯ ಓಡಾಟಗಳಿಗೆ ನಿರ್ಬಂಧ ವಿಧಿಸಲಾಗಿದೆ. ಅನಿವಾರ್ಯ, ತುರ್ತು ಸಂದರ್ಭಗಳಲ್ಲಿ ಕಾರು, ಮತ್ತಿತರ ಖಾಸಗಿ ವಾಹನಗಳಲ್ಲಿ ಅಂತರ್ ಜಿಲ್ಲಾ ಪ್ರಯಾಣ ಮಾಡಬಹುದಾಗಿದೆ. ಪ್ರಯಾಣ ಮಾಡುವವರು ಅಗತ್ಯ ದಾಖಲೆಗಳು ಅಥವಾ ಟಿಕೆಟ್ ತೋರಿಸಬೇಕು.

ಆಹಾರ, ದಿನಸಿ, ಹಣ್ಣು–ತರಕಾರಿ, ಮೀನು, ಮಾಂಸ, ಡೇರಿ, ಹಾಲಿನ ಬೂತ್ ಮತ್ತು ಪ್ರಾಣಿಗಳ ಆಹಾರಗಳ ಮಾರಾಟ ಮಳಿಗೆಗಳು ತೆರೆಯಲು ಅವಕಾಶವಿದೆ. ನ್ಯಾಯಬೆಲೆ ಅಂಗಡಿ, ಬೀದಿ ವ್ಯಾಪಾರಿಗಳಿಗೂ ಅವಕಾಶವಿದೆ. ಮನೆಗಳಿಗೆ ವಿವಿಧ ಪದಾರ್ಥ ಮತ್ತು ವಸ್ತುಗಳನ್ನು ತಂದುಕೊಡುವುದಕ್ಕೆ ಅವಕಾಶವಿದೆ.

‘ಇನ್ನು ಒಂದೆರಡು ವರ್ಷ ಕಳೆದರೆ ಚಿತ್ರರಂಗದಲ್ಲಿ ಐದು ದಶಕಗಳು ಭರ್ತಿಯಾಗುತ್ತವೆ. ಎಲ್ಲೇ ಹೋದರೂ ಜನ ಗುರುತಿಸಿ ಮುಗುಳ್ನಗೆ ಬೀರುತ್ತಾರೆ. ಅದಕ್ಕೆ ನಾನು ಕೃತಜ್ಞ...’ ಬದುಕಿನ 75ನೇ ವಸಂತಕ್ಕೆ ಕಾಲಿಟ್ಟ ನಟ ರಮೇಶ್ ಭಟ್ ವಿನೀತರಾಗಿ ಹೇಳುವ ಮಾತುಗಳಿವು.


ರಮೇಶ್ ಭಟ್

ಜನರ ಮುಗುಳ್ನಗುವಿಗೆ ಕೃತಜ್ಞ

ನಿರೂಪಣೆ: ಶರತ್ ಹೆಗ್ಡೆ

ನಾನು ಕುಂದಾಪುರದ ಮಂಕಿ ಎಂಬ ಪುಟ್ಟ ಹಳ್ಳಿಯಿಂದ ಸಣ್ಣ ವಯಸ್ಸಿನಲ್ಲೇ ಅಪ್ಪನ ಜೊತೆ ಬೆಂಗಳೂರಿಗೆ ವಲಸೆ ಬಂದೆ. ಹಾಗೆ ನೋಡಿದರೆ ಅವಿಭಜಿತ ದಕ್ಷಿಣ ಕನ್ನಡದವರು ಹೆಚ್ಚಿನವರು ಎಲ್ಲೆಲ್ಲಿಗೋ ವಲಸೆ ಹೋದವರೇ. ನಾವು ಬೆಂಗಳೂರಿಗೆ ಬಂದೆವು. ಪುಟ್ಟ ಅಂಗಡಿ ಇಟ್ಟುಕೊಂಡು ಜೀವನ ಸಾಗಿಸುತ್ತಿದ್ದರು ನಮ್ಮ ಅಪ್ಪ. ಸರ್ಕಾರಿ ಶಾಲೆಯಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ. ಮತ್ತೆ ಹೈಸ್ಕೂಲ್ ಶಿಕ್ಷಣ ಖಾಸಗಿ ಸಂಸ್ಥೆಯಲ್ಲಿ ಆಯಿತು. ಮುಂದೆಯೂ ಓದಬೇಕು ಅನ್ನಿಸಿತ್ತು. ಆದರೆ, ಆರ್ಥಿಕ ಪರಿಸ್ಥಿತಿ ಚೆನ್ನಾಗಿರಲಿಲ್ಲ. ಪಾಲಿಟೆಕ್ನಿಕ್ ಓದಿದೆ. ಮೈಸೂರು ಸ್ಯಾಂಡಲ್ ಸೋಪ್ ಕಾರ್ಖಾನೆಯಲ್ಲಿ ಕೆಲಸ ಪಡೆಯುವುದು ಅಂದಿನ ಕನಸಾಗಿತ್ತು. ಪಾಲಿಟೆಕ್ನಿಕ್ ಓದು ಮುಗಿಯುತ್ತಿದ್ದಾಗ ಈ ರಂಗದ ಗೀಳು ಆಗಲೇ ಅಂಟಿಕೊಂಡಿತ್ತು. ಅದಕ್ಕೂ ಮೊದಲು ಪ್ರಾಥಮಿಕ ಶಾಲೆಯಲ್ಲಿ ಯಾವುದೇ ನಾಟಕ, ಕಲಾ ಪ್ರದರ್ಶನಗಳಿಗೆ ಶಿಕ್ಷಕರು ನನ್ನನ್ನು ಹುರಿದುಂಬಿಸುತ್ತಿದ್ದರು. ಆಗಲೇ ನಾನೊಬ್ಬ ಮುಖ್ಯ ವ್ಯಕ್ತಿ ಅನ್ನುವುದು ತಲೆಯಲ್ಲಿ ತುಂಬಿಹೋಗಿತ್ತು.

ಮುಂದೆ ಬದುಕು ಹೇಗೋ ಸಾಗಬೇಕಲ್ಲಾ, ಅದಕ್ಕಾಗಿ ಗಾಂಧಿ ಬಜಾರ್ ಸಮೀಪ ಜ್ಯೋತಿಪ್ರಕಾಶ್ ಸ್ಟೋರ್ ಎಂಬ ಅಂಗಡಿ ತೆರೆದೆ. ಅದೊಂದು ಎಲ್ಲರಿಗೂ ಕೇಂದ್ರ ಸ್ಥಾನ ಆಗಿತ್ತು. ಅಂಗಡಿಯ ಒಂದು ಶೋಕೇಸಿನಲ್ಲಿ ಪ್ರತಿದಿನ ಒಬ್ಬ ನಟ ಅಥವಾ ನಟಿಯ ದೊಡ್ಡದಾದ ಚಿತ್ರ ಇರಿಸುತ್ತಿದ್ದೆ. ಅದನ್ನು ನೋಡಲೆಂದೇ ಕಾಲೇಜು ಹುಡುಗ ಹುಡುಗಿಯರು ಬರುತ್ತಿದ್ದರು. ಅವರಿಗೆ ಇದೊಂದು ‘ಸಂದೇಶ ಕೇಂದ್ರ’ವೂ ಆಗಿತ್ತು. ನಾಟಕ ಪ್ರದರ್ಶನಗಳ ಪ್ರಚಾರ ಪತ್ರ ಅಂಟಿಸಲೂ ಒಂದು ಫಲಕ ಇತ್ತು. ಹೀಗೆ ಇಲ್ಲಿ ಕಲಾವಿದರು, ಸಾಹಿತಿಗಳ ಪರಿಚಯ ಆಯಿತು.

ವ್ಯಾಪಾರದ ಮಧ್ಯೆ ನಾಟಕಗಳ ಅವಕಾಶ ಬಂದಾಗೆಲ್ಲಾ ಬಿಡುವು ಮಾಡಿಕೊಂಡು ಹೋಗಿ ಅಭ್ಯಾಸ ಮಾಡಿಬರುತ್ತಿದ್ದೆ.

ಅದು 1978–79 ನನ್ನ ಬದುಕಿಗೆ ತಿರುವು ಸಿಕ್ಕಿತು. ಆ ತಿರುವು ಕೊಟ್ಟವರು ಶಂಕರ್‌ನಾಗ್. ಅವರ ಮೂಲಕ ನನಗೊಂದು ಗುರುತು ಸಿಕ್ಕಿದಂತಾಯಿತು. ಸಂಕೇತ್ ತಂಡ ಕಟ್ಟಿದ್ದು, ‘ಅಂಜು ಮಲ್ಲಿಗೆ’ ನಾಟಕವಾಡಿದ್ದು, ಮುಂದೆ ‘ಮಿಂಚಿನ ಓಟ’ ಸಿನಿಮಾ ಮಾಡಿದ್ದು, ಮಾಲ್ಗುಡಿ ಡೇಸ್‌ಗೆ ಸಹ ನಿರ್ದೇಶನ ಮಾಡಿದ್ದು... ಒಂದಾ ಎರಡಾ. ಶಂಕರ್‌ನಾಗ್ ಎನ್ನುವ ಮಾನವೀಯ ವ್ಯಕ್ತಿ ಜೊತೆ ಆತ್ಮೀಯ ಬಂಧ ಇತ್ತು. ಅವೆಲ್ಲಾ ಈಗ ನೆನಪುಗಳು.

ಆಗ ನಾಟಕ, ಸಿನಿಮಾಕ್ಕೆ ಬಾ ಎಂದು ಶಂಕರ್‌ನಾಗ್ ಕರೆದಾಗ ಒಂದು ಆತಂಕವೂ ಇತ್ತು. ಅಂಗಡಿ ವ್ಯಾಪಾರ ಬಿಟ್ಟು ಹೋಗುವುದೇ? ಮುಂದೆ ಹೊಟ್ಟೆಪಾಡಿಗೆ ಏನು ಮಾಡಲಿ ಎಂಬ ಅಳುಕು ಅದು. ಆಗ ನೀನು ಇಲ್ಲಿ ಏನು ಗಳಿಸುತ್ತೀಯೋ ಅದನ್ನು ಸಿನಿಮಾದಲ್ಲೂ ಗಳಿಸಬಹುದು’ ಎಂದು ಹೇಳಿದ ಶಂಕರ್‌ನಾಗ್ ಭರವಸೆಯ ಮೇಲೆ ಗಟ್ಟಿಮನಸ್ಸು ಮಾಡಿ ಹೊರಟೇಬಿಟ್ಟೆ.

ಮುಂದೆ, ನೋಡಿ ಸ್ವಾಮಿ ನಾವಿರೋದೇ ಹೀಗೆ ಚಿತ್ರ ನಿರ್ಮಾಣ ಮಾಡಿದೆ. ಆ ಬಳಿಕ ಅವಕಾಶಗಳೇ ತುಂಬಾ ಕಡಿಮೆಯಾದವು. ಒಮ್ಮೆ ಭಾರ್ಗವ ಅವರ ‘ಜೀವನಚಕ್ರ’ ಸಿನಿಮಾದಲ್ಲಿ ಹಾಸ್ಯ ಪಾತ್ರ ಮಾಡಿದೆ. ಎಲ್ಲರಿಗೂ ಇಷ್ಟವಾಯಿತು. ಒಟ್ಟಾರೆ ಸಿನಿಮಾಗಳು ಸುಮಾರು 600 ಆಗಬಹುದೇನೋ. ಲೆಕ್ಕ ಇಟ್ಟಿಲ್ಲ.

ನಾನು ಮಾಡದ ಕೆಲಸ ಇಲ್ಲ. ಸಿನಿಮಾದ ಎಲ್ಲ ವಿಭಾಗಗಳಲ್ಲೂ ಕೆಲಸ ಮಾಡಿದ್ದೇನೆ.ಅಂಗಡಿ, ಹೋಟೆಲ್, ರೇಷ್ಮೆ ಸಾಕಣೆಕೆ ಮಾಡಿ ಕೈ ಸುಟ್ಟುಕೊಂಡಿದ್ದೂ ಆಗಿದೆ. ಬಳಿಕ ಪುಟ್ಟ ವಿನ್ಯಾಸ ಸಂಸ್ಥೆ (ಬ್ರಾಂಡ್ ಡಿಸೈನ್, ಮುದ್ರಣ ಇತ್ಯಾದಿ) ಹಾಕಿದ್ದೇವೆ. ಮಗ ಅದನ್ನು ನಡೆಸಿಕೊಂಡು ಹೋಗುತ್ತಿದ್ದಾನೆ. ಪತ್ನಿ, ಮಗ, ಇಬ್ಬರು ಮೊಮ್ಮಕ್ಕಳ ಜೊತೆ ಆನಂದವಾಗಿದ್ದೇನೆ.

ಬದುಕಿನಲ್ಲಿ ಸಾಕಷ್ಟು ಏರಿಳಿತ ಕಂಡಿದ್ದೇನೆ. ಕಾಲವೂ ಬದಲಾಗಿದೆ. ಸಿನಿಮಾ ಕ್ಷೇತ್ರವೂ ಸಾಕಷ್ಟು ಬದಲಾಗಿದೆ. ಸಂಬಂಧಗಳೂ ಬದಲಾಗಿವೆ. ಹೌದು ನಾನು ಅಂಗಡಿ ಇಟ್ಟುಕೊಂಡು ಹೊಟ್ಟೆಪಾಡು ನಡೆಸುತ್ತಿದ್ದವನು. ಅಂಥವನನ್ನು ಜನ ನಟ ಎಂದು ಗುರುತಿಸಿದ್ದಾರಲ್ಲಾ ನನಗದೇ ತೃಪ್ತಿ. ❖

ಚಂದನವನ ಓಮೈಕ್ರಾನ್... ಕಟ್... ಪ್ಯಾಕಪ್!?

ಸಿನಿಮಾ ಉದ್ಯಮವನ್ನೂ ಓಮೈಕ್ರಾನ್ ಭೀತಿ ಅಲುಗಾಡಿಸಿದೆ. ಬೆಳ್ಳಿತೆರೆಯಲ್ಲಿ ಮತ್ತೆ ಕತ್ತಲಾವರಿಸುವ ಆತಂಕ ಎದುರಾಗಿದೆ. ‘ಮುಂದೇನು’ ಎಂಬ ಚಿಂತೆ ಈ ಕ್ಷೇತ್ರದವರನ್ನು ಕಾಡುತ್ತಿದೆ. ‘ಸಿನಿಮಾ ಪುರವಣಿ’ ಮುಂದೆ ಅವರು ತಮ್ಮ ಆತಂಕ ಹೊರಹಾಕಿದ್ದು ಹೀಗೆ...

ರಾಜ್ಯದಲ್ಲಿ, ಕೋವಿಡ್ ಪ್ರಕರಣಗಳ ಹೆಚ್ಚಳ, ಓಮೈಕ್ರಾನ್ ಭೀತಿ, ಸರ್ಕಾರದ ಕಠಿಣ ನಿಯಮಗಳ ಕಾರಣ ಚಿತ್ರರಂಗದ ಚಟುವಟಿಕೆಗಳಿಗೆ ಭಾರೀ ಹೊಡೆತ ಬೀಳುವ ಆತಂಕ ಎದುರಾಗಿದೆ. ‘ಲೈಟ್ಸ್– ಕ್ಯಾಮೆರಾ– ಆ್ಯಕ್ಷನ್....’ ಎಂದೆಲ್ಲಾ ಕೂಗುತ್ತಿದ್ದ ನಿರ್ದೇಶಕರು ಸದ್ಯ ‘ಓಮೈಕ್ರಾನ್– ಕಟ್– ಪ್ಯಾಕಪ್’ ಹೇಳುವ ಸ್ಥಿತಿಗೆ ಬಂದಿದ್ದಾರೆ.

ದೊಡ್ಡ ಬಜೆಟ್ ಸಿನಿಮಾಗಳ ಬಿಡುಗಡೆ ಮುಂದೂಡಿಕೆ, ಜೊತೆಗೆ ಕನ್ನಡದ ಯಾವುದೇ ಸಿನಿಮಾ ಬಿಡುಗಡೆ ಆಗದಿರುವುದು, ಪ್ರಚಾರ ಸ್ಥಗಿತವಾಗಿರುವುದು ಆ ಕ್ಷೇತ್ರದಲ್ಲಿ ಖಾಲಿತನ ಸೃಷ್ಟಿಸಿದೆ.

ನಿರ್ಮಾಣ – ಪ್ರಚಾರ– ಪ್ರದರ್ಶನ–ಗಳಿಕೆ ಈ ಒಟ್ಟಾರೆ ಚಕ್ರವೇ ಸ್ಥಗಿತಗೊಂಡಂತಾಗಿದೆ. ನಿರ್ಮಾಪಕರಿಗೆ ಹಣ ಹೂಡಿ ಕಾಯುವ ತಲೆನೋವು, ಕಾರ್ಮಿಕರಿಗೆ ಮತ್ತೆ ಕೈ ಖಾಲಿಯಾಗುವ ಭೀತಿ. ಪುಟ್ಟ ವೈರಾಣುವೊಂದು ಬೃಹತ್ ಉದ್ಯಮವನ್ನು ಅಲುಗಾಡಿಸಿದ ಪರಿ ಇದು.

ಚಿತ್ರಮಂದಿರದ ಮಾಲೀಕರೊಬ್ಬರ ಪ್ರಕಾರ, ‘ಕಳೆದ ವಾರ ಮೂರು ಕನ್ನಡ ಚಿತ್ರಗಳು ಬಿಡುಗಡೆಯಾದವು. ಅವು ಕನಿಷ್ಠ ಎರಡು ವಾರ ಓಡಬಹುದು ಅಷ್ಟೇ. ಚಿತ್ರಮಂದಿರ ಖಾಲಿ ಬಿಡುವ ಬದಲು ಮತ್ತೂ ಒಂದು ವಾರ ಪ್ರದರ್ಶಿಸಬಹುದು. ಆದರೆ, ಶೇ 50ರ ಆಸನ ಭರ್ತಿ ನಿಯಮ ಬಂದರೆ ನಮಗೆ ಬರುವ ಪ್ರೇಕ್ಷಕರು ಶೇ 25ಕ್ಕಿಂತಲೂ ಕಡಿಮೆ. ಏಕೆಂದರೆ ವಾರದ ದಿನಗಳಲ್ಲಿ ಚಿತ್ರಮಂದಿರಗಳಿಗೆ ಬರುವ ಪ್ರೇಕ್ಷಕರೂ ಶೇ 50ರಷ್ಟೇ ಇರುತ್ತಾರೆ’ ಎನ್ನುತ್ತಾರೆ.

‘ವಾರಾಂತ್ಯದ ಲಾಕ್‌ಡೌನ್‌ನಲ್ಲಂತೂ ತಿಂಗಳಲ್ಲಿ 8 ದಿನ ಚಿತ್ರಮಂದಿರ ಮುಚ್ಚಲೇಬೇಕಾಗಿದೆ. ಒಂದಿಷ್ಟು ಆದಾಯ ಬರುವುದೇ ವಾರಾಂತ್ಯದಲ್ಲಿ. ಸದ್ಯದ ಸ್ಥಿತಿಯಲ್ಲಿ ಮನೋರಂಜನೆಯು ಸಾಮಾನ್ಯ ಪ್ರೇಕ್ಷಕನ ಕೊನೆಯ ಆಯ್ಕೆ. ಈ ಇತಿಮಿತಿ, ಆದಾಯದ ಕೊರತೆ ಹಿನ್ನೆಲೆಯಲ್ಲಿ ಚಿತ್ರಮಂದಿರಗಳಿಗೆ ಬರುವವರ ಸಂಖ್ಯೆಯೂ ಇಳಿಮುಖವಾಗಲಿದೆ’ ಎಂಬುದು ಅವರ ಅಭಿಪ್ರಾಯ.

ಪ್ರಚಾರ ಸಂಸ್ಥೆಗಳೂ ಮೌನ: ಸಿನಿಮಾದ ಪ್ರಚಾರ ವಿನ್ಯಾಸ, ಕಟೌಟ್, ಬ್ಯಾನರ್ ಮಾಡುತ್ತಿದ್ದ ಕಾರ್ಮಿಕರೂ ಈ ವಾರದಿಂದ ಕೆಲಸವಿಲ್ಲದಂತಾಗಿದ್ದಾರೆ.

‘ದೊಡ್ಡ ಬಜೆಟ್ ಚಿತ್ರಗಳ ನಿರ್ಮಾಪಕರು ಕಾದು ನೋಡಲು ನಿರ್ಧರಿಸಿದ್ದಾರೆ. ಸಿನಿಮಾ ಕ್ಷೇತ್ರದ ಅರ್ಥವ್ಯವಸ್ಥೆಯೇ ಕೆಟ್ಟು ಹೋಗಲಿದೆ. ನಿರ್ಮಾಣಕ್ಕೆ ಹೂಡಿದ ಹಣದ ಬಡ್ಡಿ ವಿಪರೀತ ಏರುತ್ತಿದೆ. ಸರ್ಕಾರ ಲಾಕ್‌ಡೌನ್‌ನಂಥ ನಿರ್ಧಾರಕ್ಕೆ ಬರಬಾರದಿತ್ತು’ ಎಂಬುದು ನಿರ್ಮಾಪಕರ ಅಳಲು.

‘ಚಿತ್ರಮಂದಿರಗಳು ಇತ್ತೀಚೆಗಷ್ಟೇ ತೆರೆದುಕೊಂಡಿವೆ. ಮತ್ತೆ ಲಾಕ್‌ಡೌನ್, ಶೇ 50ರ ಪ್ರೇಕ್ಷಕರ ಪ್ರವೇಶ ಎಂದೆಲ್ಲಾ ನಿಯಮಗಳನ್ನು ತಂದರೆ ಈ ಉದ್ಯಮ ನಡೆಸುವುದು ಅಸಾಧ್ಯ. ಆದ್ದರಿಂದ ಸರ್ಕಾರ ಈ ಉದ್ಯಮವನ್ನು ಚಾಲನಾ ಸ್ಥಿತಿಯಲ್ಲಿ ಇಡುವಂತೆ ಅವಕಾಶ ಕಲ್ಪಿಸಿ ನಿಯಮ ರೂಪಿಸಬೇಕು’ ಎಂಬುದು ಚಿತ್ರ ಪ್ರದರ್ಶಕರ ಸಂಘದ ಅಧ್ಯಕ್ಷ ಕೆ.ವಿ. ಚಂದ್ರಶೇಖರ್ ಕೋರಿಕೆಯಾಗಿದೆ.

ಕೆ.ವಿ.ಚಂದ್ರಶೇಖರ್

‘ಸದ್ಯ ಚಿತ್ರರಂಗದ ಸಮಯವೇ ಸರಿಯಿಲ್ಲ ಎಂದೆನಿಸುತ್ತದೆ. ಯಾವುದೇ ಸಿನಿಮಾ ಮೂರು, ನಾಲ್ಕು ದಿನ ಚೆನ್ನಾಗಿ ಪ್ರದರ್ಶನವಾಗುತ್ತದೆ. ಬಳಿಕ ಪ್ರೇಕ್ಷಕರ ಸಂಖ್ಯೆಯೂ ಕಡಿಮೆಯಾಗುತ್ತದೆ. ಮುಂದೆ ಶೇ 50ರಷ್ಟು ಆಸನ ಭರ್ತಿಗೆ ಅವಕಾಶ ಇದ್ದರೂ ಜನರು ಬರುವುದಿಲ್ಲ. ಚಿತ್ರಗಳ ಬಿಡುಗಡೆ ಇಲ್ಲವಾದಲ್ಲಿ ಚಿತ್ರಮಂದಿರ ಮುಚ್ಚುವುದು ಅನಿವಾರ್ಯವಾಗಲಿದೆ’ ಎಂಬುದು ಉತ್ತರ ಕರ್ನಾಟಕ ಚಿತ್ರ ಪ್ರದರ್ಶಕರ ಮಹಾಮಂಡಲದ ಅಧ್ಯಕ್ಷ ಓದುಗೌಡರ್ ಅಭಿಪ್ರಾಯ. ❖

ಬಿಗ್ ಬಜೆಟ್ ಚಿತ್ರಗಳೇ ಮುಂದಕ್ಕೆ ಹೋಗಿವೆ. ಪರಿಸ್ಥಿತಿ ನೋಡಿಕೊಂಡು ಬಿಡುಗಡೆಯ ದಿನಾಂಕವನ್ನು ನಿರ್ಧರಿಸುತ್ತೇವೆ. ಸದ್ಯ ಏನನ್ನೂ ನಿರ್ಧರಿಸುವ ಸ್ಥಿತಿಯಲ್ಲಿ ನಾವಿಲ್ಲ.

ಶ್ರೀನಿ, ನಟ, ನಿರ್ದೇಶಕ, ‘ಓಲ್ಡ್ ಮಾಂಕ್’

ಕರ್ಫ್ಯೂ ಸಡಿಲಿಸಲು ಮನವಿ



ವಾರಾಂತ್ಯದ ಕರ್ಫ್ಯೂವನ್ನು ಸಡಿಲಿಸಿ ಕೊನೇ ಪಕ್ಷ ಶೇ 50ರ ಆಸನ ಭರ್ತಿಯಲ್ಲಿ ಶನಿವಾರ ಭಾನುವಾರ ಚಿತ್ರ ಪ್ರದರ್ಶನಕ್ಕೆ ಅವಕಾಶ ಕಲ್ಪಿಸಿ ಎಂದು ನಿರ್ಮಾಪಕರು ಕೋರಿದ್ದಾರೆ. ಅದಕ್ಕಾಗಿ ಮುಖ್ಯಮಂತ್ರಿ ಜೊತೆ ಚರ್ಚಿಸಲು ಸಮಯ ಕೇಳಿದ್ದೇವೆ. ಶುಕ್ರವಾರ ಬಿಡುಗಡೆಯಾಗುವ ಸಿನಿಮಾಗಳು ಶನಿವಾರ– ಭಾನುವಾರವೇ ಪ್ರದರ್ಶನ ಇಲ್ಲವಾದರೆ ಉದ್ಯಮದ ಆರ್ಥಿಕ ಬಂಡಿ ಮುಂದುವರಿಯುವುದು ಅಸಾಧ್ಯ.

– ಡಿ.ಆರ್. ಜೈರಾಜ್,
ಅಧ್ಯಕ್ಷ, ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ

ದಿಕ್ಕು ತೋಚುತ್ತಿಲ್ಲ

ಲಾಕ್‌ಡೌನ್ ಅಥವಾ ಯಾವುದೇ ನಿರ್ಬಂಧಗಳು ಬಂದರೆ ನಿರ್ಮಾಪಕರ ಪರಿಸ್ಥಿತಿ ಅಧೋಗತಿಗಿಳಿಯುತ್ತದೆ. ಎರಡು ಅಲೆಗಳು ಬಂದು ಹೋದವು. ಇನ್ನು ಯಾವುದೇ ಭಯ ಇರಲಿಕ್ಕಿಲ್ಲ ಎಂದು ನಿಟ್ಟುಸಿರುಬಿಟ್ಟಿದ್ದೆವು. ಈಗ ಮತ್ತೆ ಆತಂಕ ಶುರುವಾಗಿದೆ. ಚಿತ್ರರಂಗದ ಚಟುವಟಿಕೆಗಳನ್ನು ಮುಕ್ತವಾಗಿ ನಡೆಸುವಂತಿಲ್ಲ. ಹೊಸ ಚಿತ್ರಗಳನ್ನು ಬಿಡುಗಡೆ ಮಾಡುವಂತಿಲ್ಲ. ಒಟ್ಟಾರೆ ದಿಕ್ಕು ತೋಚದಂತಾಗಿದೆ.

– ಡಿ.ಕೆ.ರಾಮಕೃಷ್ಣ, ಅಧ್ಯಕ್ಷ, ನಿರ್ಮಾಪಕರ ಸಂಘ

‘ವಿಕ್ರಾಂತ್ ರೋಣ’ಗೆ ಭರ್ಜರಿ ಆಫರ್

ಕಿಚ್ಚ ಸುದೀಪ್ ಅಭಿನಯದ, ಅನೂಪ್ ಭಂಡಾರಿ ನಿರ್ದೇಶನದ ಪ್ಯಾನ್ ಇಂಡಿಯಾ ಚಿತ್ರ ‘ವಿಕ್ರಾಂತ್ ರೋಣ‘ ಚಿತ್ರಕ್ಕೆ ಒಟಿಟಿ ವೇದಿಕೆಯಿಂದ ಭರ್ಜರಿ ಆಫರ್ ಬಂದಿದೆ. ‘ಸುಮಾರು ₹ 90 ಕೋಟಿವರೆಗೆ ಆಫರ್ ಬಂದಿದೆ’ ಎಂದು ನಿರ್ಮಾಪಕ ಜಾಕ್ ಮಂಜು ಅವರೇ ಖಚಿತಪಡಿಸಿದ್ದಾರೆ.

ಕನ್ನಡ ಚಿತ್ರವೊಂದಕ್ಕೆ ಮೊದಲ ಬಾರಿ ಒಟಿಟಿಯಿಂದ ಇಷ್ಟೊಂದು ಮೊತ್ತದ ಆಫರ್ ಬಂದಿರುವುದು ಸಂತಸ ತಂದಿದೆ’ ಎಂದು ಅವರು ಹೇಳಿದರು.

‘ಒಟಿಟಿ, ಕನ್ನಡ ಹಾಗೂ ಚಿತ್ರದ ಹಿಂದಿ ಅವತರಣಿಕೆಯ ಸ್ಯಾಟಲೈಟ್ ಪ್ರಸಾರ ಹಕ್ಕು ಸೇರಿ ಸುಮಾರು ₹ 110ರಿಂದ ₹120 ಕೋಟಿವರೆಗೆ ಮೊತ್ತ ಸಿಗಲಿದೆ. ಚಿತ್ರದ ಬಜೆಟ್ ₹100 ಕೋಟಿ ಆಗಿದೆ. ಈ ಕೊಡುಗೆಯ ಕಾರಣಕ್ಕೆ ನಾವು ಚಿತ್ರವನ್ನು ತಕ್ಷಣಕ್ಕೆ ಒಟಿಟಿಗೆ ಕೊಡುವುದಿಲ್ಲ. ಚಿತ್ರವನ್ನು 3ಡಿಯಲ್ಲಿ ನಿರ್ಮಾಣ ಮಾಡಿದ್ದೇವೆ. ಇದನ್ನು ಚಿತ್ರಮಂದಿರಗಳಲ್ಲೇ ಜನರಿಗೆ ತೋರಿಸಬೇಕು ಎಂದು ನಿರ್ಧರಿಸಿದ್ದೇವೆ. ಅದಕ್ಕಾಗಿಯೇ 2 ವರ್ಷ ಕಾದಿದ್ದೇವೆ . ಫೆ. 24ಕ್ಕೆ ಚಿತ್ರಮಂದಿರಗಳಲ್ಲೇ ‘ವಿಕ್ರಾಂತ್ ರೋಣ’ ಬಿಡುಗಡೆಗೆ ನಿರ್ಧರಿಸಿದ್ದೇವೆ. ಪರಿಸ್ಥಿತಿಯ ಕಾರಣದಿಂದ ಗೊಂದಲದಲ್ಲಿದ್ದೇವೆ’ ಎಂದು ಅವರು ಹೇಳಿದರು.

‘ಎಲ್ಲ ಚಿತ್ರಗಳನ್ನು ತಕ್ಷಣ ಒಪ್ಪಲ್ಲ’

ಪ್ರೇಮ, ಸೋನು ಗೌಡ

ವಿಕ್ರಮ್ ಪ್ರಭು ನಿರ್ದೇಶನದ ಚೊಚ್ಚಲ ಚಿತ್ರ ‘ವೆಡ್ಡಿಂಗ್ ಗಿಫ್ಟ್’ನ ಚಿತ್ರೀಕರಣ ಪೂರ್ಣಗೊಂಡಿದೆ. ಡಾರ್ಕ್ ಥ್ರಿಲ್ಲರ್ ಕಥಾಹಂದರ ಹೊಂದಿರುವ ಈ ಸಿನಿಮಾದಲ್ಲಿ ಲಾಯರ್ ಪಾತ್ರದಲ್ಲಿ ನಟಿ ಪ್ರೇಮ ನಟಿಸಿದ್ದು, ಸುಮಾರು ನಾಲ್ಕು ವರ್ಷದ ಬಳಿಕ ಪ್ರೇಮಾ ತೆರೆ ಮೇಲೆ ಕಾಣಿಸಿಕೊಳ್ಳಲಿದ್ದಾರೆ.

‘ಕಥೆ ವಿಭಿನ್ನವಾಗಿತ್ತು. ಮೊದಲ ಸಲ ಲಾಯರ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ. ನಾನು ಎಲ್ಲಾ ಚಿತ್ರಗಳನ್ನು ಒಪ್ಪಿಕೊಳ್ಳುವುದಿಲ್ಲ. ಪಾತ್ರ ಚೆನ್ನಾಗಿದ್ದರಷ್ಟೇ ಒಪ್ಪಿಕೊಳ್ಳುತ್ತೇನೆ. ಈ ಚಿತ್ರದ ಕಥೆ ಬಗ್ಗೆ ಒಂದೆಳೆ ಹೇಳಿದರೂ, ಪೂರ್ತಿ ಹೇಳಿದಂತೆ. ಉತ್ತಮ ಸಂದೇಶವಿರುವ ಈ ಚಿತ್ರದಲ್ಲಿ ನಟಿಸಿರುವ ಖುಷಿಯಿದೆ’ ಎಂದು ಸುದ್ದಿಗೋಷ್ಠಿಯಲ್ಲಿ ತಮ್ಮ ಅನುಭವ ಹಂಚಿಕೊಂಡರು ಪ್ರೇಮ.

‘ಡಿಸೆಂಬರ್ 30ರಂದೇ ಚಿತ್ರೀಕರಣ ಮುಗಿದಿದೆ. ಬೆಂಗಳೂರು, ತುಮಕೂರು, ಉಡುಪಿ, ಮಂಗಳೂರು ಮುಂತಾದ ಕಡೆ ಮೂವತ್ತೇಳು ದಿನಗಳ ಚಿತ್ರೀಕರಣ ನಡೆದಿದೆ. ಗಂಡ–ಹೆಂಡತಿ ನಡುವಿನ ಸಂಬಂಧಗಳ ಕಥಾಹಂದರವಿರುವ ಚಿತ್ರವಿದು. ಸೆಕ್ಷನ್ 498 ಸಂಬಂಧಿಸಿದ ಕೆಲವು ಸನ್ನಿವೇಶಗಳು ನಮ್ಮ ಚಿತ್ರದಲ್ಲಿವೆ. ನಿಶಾನ್ ನಾಣಯ್ಯ - ಸೋನುಗೌಡ ನಾಯಕ, ನಾಯಕಿಯಾಗಿ ಕಾಣಿಸಿಕೊಂಡಿದ್ದಾರೆ. ಅಚ್ಯುತ್ ಕುಮಾರ್, ಪವಿತ್ರ ಲೋಕೇಶ್ ತಾರಾಬಳಗದಲ್ಲಿದ್ದಾರೆ. ಏಪ್ರಿಲ್ ವೇಳೆಗೆ ಚಿತ್ರ ಬಿಡುಗಡೆಗೆ ಸಿದ್ಧತೆ ನಡೆಸಿದ್ದೇವೆ’ ಎಂದರು ನಿರ್ದೇಶಕ ವಿಕ್ರಮ್ ಪ್ರಭು. ❖

ಗಣೇಶ್

ಗಣೇಶನ ‘ಗ್ಯಾಂಗ್’ ನಾಳೆಯಿಂದ

ಕಿರುತೆರೆ

ಗೋಲ್ಡನ್ ಸ್ಟಾರ್ ಗಣೇಶ್ ಈಗ ಗ್ಯಾಂಗ್ ಕಟ್ಟಿಕೊಂಡು ಹೊಸ ಅವತಾರದಲ್ಲಿ ಕಿರುತೆರೆಮೇಲೆಬರುತ್ತಿದ್ದಾರೆ.

‘ಗೋಲ್ಡನ್ ಗ್ಯಾಂಗ್’ಜೀ ಕನ್ನಡ ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ ಹೊಸ ಗೇಮ್ ಷೋದ ಹೆಸರು. ಜ. 8ರಿಂದ ಪ್ರತಿ ಶನಿವಾರ ಮತ್ತು ಭಾನುವಾರ ರಾತ್ರಿ 9ಕ್ಕೆ ಪ್ರಸಾರವಾಗಲಿದೆ.

ತರುಣ್, ಶರಣ್, ಪ್ರೇಮ್ ಅವರು ಕೂಡಾ ಗೋಲ್ಡನ್ ಗ್ಯಾಂಗ್‌ನ ಸಂಚಿಕೆಯಲ್ಲಿದ್ದಾರೆ. ವಿವಿಧ ಕ್ಷೇತ್ರಗಳ ತಾರೆಯರು ತಮ್ಮ ಬದುಕಿನಲ್ಲಿ ಜತೆಯಾದವರ ಸ್ನೇಹವನ್ನು ಈ ವೇದಿಕೆಯಲ್ಲಿ ಸಂಭ್ರಮಿಸಲಿದ್ದಾರೆ. ಅಂದಹಾಗೆ ಈ ಕಾರ್ಯಕ್ರಮದಲ್ಲೂ ಗಣೇಶ್ ಅವರೇ ನಿರೂಪಕ. ❖

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ನಾವು ಸೀಮಿತಗೊಂಡಿರುವುದು ನಮ್ಮ ಸಾಮರ್ಥ್ಯಗಳ ಕೊರತೆಯಿಂದಲ್ಲ, ಬದಲಿಗೆ ನಮ್ಮ ದೃಷ್ಟಿಕೋನದಿಂದ.

-ಖಲೀಲ್ ಗಿಬ್ರಾನ್

ಪ್ರಧಾನಿಯ ಭದ್ರತೆಯು ರಾಜಕೀಯ ವಿಚಾರವಲ್ಲ: ವೃತ್ತಿಪರ ತನಿಖೆ ನಡೆಯಲಿ

ಪ್ರಧಾನಿ ನರೇಂದ್ರ ಮೋದಿ ಅವರು ಪಂಜಾಬ್‌ನ ಫಿರೋಜ್‌ಪುರದ ಮೇಲ್ಸೇತುವೆಯೊಂದರಲ್ಲಿ ಬುಧವಾರ 15–20 ನಿಮಿಷ ಸಿಕ್ಕಿಹಾಕಿಕೊಂಡ ಘಟನೆಗೆ ಹಲವು ಆಯಾಮಗಳು ಮತ್ತು ವಿವರಣೆಗಳು ಇವೆ. ಒಂದು ಅತ್ಯಂತ ಮುಖ್ಯವಾದ ವಿಚಾರ ಇದೆ. ಈ ಘಟನೆಗೆ ಸಂಬಂಧಿಸಿ ನಡೆಯುತ್ತಿರುವ ರಾಜಕೀಯದ ಮಧ್ಯೆ, ಭದ್ರತಾ ಲೋಪ ಎಂಬ ಅತ್ಯಂತ ಮುಖ್ಯ ವಿಚಾರವು ಮರೆಯಾಗಿ ಹೋಗಲು ಅವಕಾಶ ನೀಡಬಾರದು. ಪ್ರತಿಭಟನೆ ನಡೆಸುತ್ತಿದ್ದ ರೈತರು ರಸ್ತೆತಡೆ ನಡೆಸಿದ್ದರಿಂದಾಗಿ ಪ್ರಧಾನಿಯವರಿದ್ದ ವಾಹನ ಮತ್ತು ಬೆಂಗಾವಲು ವಾಹನಗಳ ಸಾಲು ಮೇಲ್ಸೇತುವೆಯಲ್ಲಿ ಸ್ಥಗಿತಗೊಳ್ಳುವಂತಾಯಿತು. ಭಟಿಂಡಾಕ್ಕೆ ವಾಯುಮಾರ್ಗದಲ್ಲಿ ಬಂದಿದ್ದ ಪ್ರಧಾನಿಯವರು ಅಲ್ಲಿಂದ ಫಿರೋಜ್‌ಪುರ ಸಮೀಪದ ಹುಸೈನಿವಾಲಾಕ್ಕೆ ರಸ್ತೆಮಾರ್ಗದ ಮೂಲಕ ಹೋಗಿದ್ದರು. ಭದ್ರತಾ ಲೋಪದ ಬಳಿಕ, ಪ್ರಧಾನಿಯವರು ಕಾರ್ಯಕ್ರಮವನ್ನು ರದ್ದುಪಡಿಸಿ ದೆಹಲಿಗೆ ಹಿಂದಿರುಗಿದರು. ಇದೊಂದು ಭದ್ರತಾ ಲೋಪ ಎಂದು ಕೇಂದ್ರ ಗೃಹ ಸಚಿವಾಲಯ ಪರಿಗಣಿಸಿದೆ. ಪ್ರಕರಣದ ಬಗ್ಗೆ ವರದಿ ಕೊಡುವಂತೆ ಪಂಜಾಬ್ ಸರ್ಕಾರಕ್ಕೆ ಸೂಚಿಸಿದೆ. ಲೋಪಕ್ಕೆ ರಾಜ್ಯ ಸರ್ಕಾರವೇ ಹೊಣೆ ಎಂದು ಬಿಜೆಪಿ ಆರೋಪಿಸಿದೆ. ಮುಖ್ಯಮಂತ್ರಿ ಚರಣ್‌ಜಿತ್ ಸಿಂಗ್ ಚನ್ನಿ ಅವರು ಘಟನೆಯ ಕುರಿತು ವಿಷಾದ ವ್ಯಕ್ತಪಡಿಸಿದ್ದಾರೆ. ಪ್ರಧಾನಿಯವರ ಭದ್ರತೆಗೆ ಯಾವುದೇ ಬೆದರಿಕೆ ಉಂಟಾಗಿಲ್ಲ ಎಂದಿದ್ದಾರೆ. ತನಿಖೆ ನಡೆಸುವಂತೆ ರಾಜ್ಯ ಸರ್ಕಾರ ಆದೇಶಿಸಿದೆ.

ಲೋಪಕ್ಕೆ ಕಾರಣರಾದ ಜನ ಅಥವಾ ಸಂಸ್ಥೆಗಳನ್ನು ಗುರುತಿಸಿ, ಅವರ ಮೇಲೆ ಹೊಣೆ ಹೊರಿಸಬೇಕು. ರಾಜಕೀಯದ ಪ್ರಭಾವಕ್ಕೆ ಒಳಗಾಗದೆಯೇ ಇವೆಲ್ಲವೂ ನಡೆಯಬೇಕು

ಪ್ರಧಾನಿಯವರು ಸಂಚರಿಸುವ ಮಾರ್ಗವನ್ನು ಕೊನೆಯ ಕ್ಷಣದಲ್ಲಿ ಬದಲಾವಣೆ ಮಾಡಿದ್ದರ ಬಗ್ಗೆ ಯಾವುದೇ ಮಾಹಿತಿ ಇರಲಿಲ್ಲ ಎಂದು ಪಂಜಾಬ್ ಸರ್ಕಾರ ಹೇಳಿದೆ. ಪ್ರಧಾನಿಯವರು ಭಾಗವಹಿಸಬೇಕಿದ್ದ ಕಾರ್ಯಕ್ರಮದಲ್ಲಿ ಸೇರಿದ್ದ ಜನರ ಸಂಖ್ಯೆಯು ನಿರೀಕ್ಷಿಸಿದ್ದಕ್ಕಿಂತ ಬಹಳ ಕಡಿಮೆ ಇತ್ತು. ಹಾಗಾಗಿ, ಪ್ರಧಾನಿಯವರ ಕಾರ್ಯಕ್ರಮವನ್ನು ರದ್ದು ಮಾಡಲಾಯಿತು ಎಂದು ಕಾಂಗ್ರೆಸ್ ಪಕ್ಷವು ಆರೋಪಿಸಿದೆ. ಪ್ರಧಾನಿಯವರು ಕಾರ್ಯಕ್ರಮದಲ್ಲಿ ಭಾಗವಹಿಸದೆಯೇ ಹಿಂದಿರುಗಿದ್ದು, ಘಟನೆಯ ಕುರಿತು ನಾಟಕೀಯವಾದ ಹಲವು ಬೆಳವಣಿಗೆಗಳಿಗೆ ಕಾರಣವಾಗಿದೆ. ರಾಜಕೀಯ ಪಕ್ಷಗಳ ನಡುವೆ ಕೆಸರೆರಚಾಟ ನಡೆದಿದೆ. ಆದರೆ, ಈ ರಾಜಕೀಯ ಮೇಲಾಟದಲ್ಲಿ ಭದ್ರತಾ ಲೋಪದ ವಿಚಾರವು ಹಿನ್ನೆಲೆಗೆ ಸರಿಯಬಾರದು. ಪ್ರಧಾನಿಯವರ ಸಂಚಾರಕ್ಕೆ ಸಂಬಂಧಿಸಿ ಬಹಳಷ್ಟು ಯೋಜನೆ ಮಾಡಲಾಗುತ್ತದೆ. ಪ್ರಧಾನಿಗೆ ಯಾವುದೇ ಲೋಪ ಇಲ್ಲದೆ ಭದ್ರತೆ ಒದಗಿಸುವುದರಲ್ಲಿ ಹಲವು ಸಂಸ್ಥೆಗಳ ಪಾತ್ರ ಇದೆ. ಭದ್ರತೆಯ ಹಲವು ಪದರಗಳು ಇರುತ್ತವೆ. ಪರ್ಯಾಯ ಯೋಜನೆಗಳು ಇರುತ್ತವೆ. ಅನಿರೀಕ್ಷಿತವಾದ ಯಾವುದೇ ಸಂಗತಿ ನಡೆದರೂ ಅದನ್ನು ಎದುರಿಸಲು ಬೇಕಾದ ಕಾರ್ಯತಂತ್ರ ಇರುತ್ತದೆ. ದಿಢೀರ್ ಪ್ರತಿಭಟನೆ, ರಸ್ತೆತಡೆಯಂತಹುದು ನಡೆದರೆ ಏನು ಮಾಡಬೇಕು ಎಂಬುದನ್ನು ಗಣನೆಗೆ ತೆಗೆದುಕೊಳ್ಳಲಾಗಿದೆಯೇ ಎಂಬುದು ತಿಳಿದುಬಂದಿಲ್ಲ. ಕಾರ್ಯಕ್ರಮವನ್ನೇ ರದ್ದುಪಡಿಸುವುದು ಕೊನೆಯ ಆಯ್ಕೆ. ಏಕೆಂದರೆ, ಕಾರ್ಯಕ್ರಮವನ್ನು ರದ್ದು ಮಾಡಿದರೆ ವೈಫಲ್ಯವನ್ನು ಒಪ್ಪಿಕೊಂಡಂತೆಯೇ ಆಗುತ್ತದೆ. ಪ್ರಧಾನಿಯವರ ಸುರಕ್ಷತೆಯನ್ನು ಖಾತರಿಪಡಿಸಿಕೊಳ್ಳಲು ಆಗದೇ ಇದ್ದರೆ ಕಾರ್ಯಕ್ರಮವನ್ನು ರದ್ದುಪಡಿಸುವ ಆಯ್ಕೆ ಮಾತ್ರ ಇರುತ್ತದೆ ಎಂಬುದೂ ನಿಜ.

ಭದ್ರತಾ ಲೋಪ ಘಟನೆಯ ತನಿಖೆಯು ವೃತ್ತಿಪರವಾಗಿ ನಡೆಯಬೇಕು; ಲೋಪಕ್ಕೆ ಕಾರಣರಾದ ಜನರು ಅಥವಾ ಸಂಸ್ಥೆಗಳನ್ನು ಗುರುತಿಸಿ, ಅವರ ಮೇಲೆ ಹೊಣೆ ಹೊರಿಸಬೇಕು. ರಾಜಕೀಯದ ಪ್ರಭಾವಕ್ಕೆ ಒಳಗಾಗದೆಯೇ ಇವೆಲ್ಲವೂ ನಡೆಯಬೇಕು. ಪ್ರಧಾನಿಯವರ ಸುರಕ್ಷತೆಯು ರಾಜಕೀಯ ಮಾಡುವ ವಿಚಾರ ಅಲ್ಲ. ಇಬ್ಬರು ಪ್ರಧಾನ ಮಂತ್ರಿಗಳ ಸಾವಿನಂತಹ ಬಹುದೊಡ್ಡ ಬೆಲೆಯನ್ನು ಭದ್ರತಾ ಲೋಪಕ್ಕೆ ದೇಶವು ತೆತ್ತಿದೆ. ಇಂದಿರಾ ಗಾಂಧಿ ಅವರು ಪ್ರಧಾನಿಯಾಗಿದ್ದಾಗ ಅವರು ಭಾಗವಹಿಸಿದ್ದ ಸಭೆಯೊಂದರಲ್ಲಿ ಕಲ್ಲೆಸೆತ ಉಂಟಾಗಿ, ಭದ್ರತಾ ಲೋಪ ಆಗಿತ್ತು. ಆದರೆ, ಆ ಘಟನೆಯಲ್ಲಿ ಇಂದಿರಾ ಅವರಿಗೆ ತೊಂದರೆಯೇನೂ ಆಗಿರಲಿಲ್ಲ. ಈಗಿನ ಕಾಲವು ಭಿನ್ನವಾಗಿದೆ ಮತ್ತು ಹೆಚ್ಚು ಕ್ಲಿಷ್ಟಕರವಾಗಿದೆ. ಪ್ರಧಾನಿ ಅವರ ಸುರಕ್ಷತೆಯ ವಿಚಾರದಲ್ಲಿ ಅಸಡ್ಡೆ ಮತ್ತು ನಿರ್ಲಕ್ಷ್ಯ ಸಲ್ಲದು.

ದಿನದ ಟ್ವೀಟ್

ಇನ್ನೂ ಹೊರಬಾರದ ಸತ್ಯ

ಪುಲ್ವಾಮಾದಲ್ಲಿ ಸೈನಿಕರ ಮೇಲೆ ದಾಳಿ ನಡೆದದ್ದು ಹೇಗೆ ಎಂಬುದು ಮೂರು ವರ್ಷಗಳು ಕಳೆದರೂ ಇನ್ನೂ ನಮಗೆ ತಿಳಿಯಲಿಲ್ಲ. ಹೀಗಿದೆ ನಮ್ಮ ಭದ್ರತೆ.

ರಾಖಿ ತ್ರಿಪಾಠಿ, ಸಹಪ್ರಾಧ್ಯಾಪಕಿ

ಕಿಡಿನುಡಿ

ಪ್ರಧಾನ ಮಂತ್ರಿಯವರ ಜೊತೆ ಸೌಹಾರ್ದ ಸಂಬಂಧ ಹೊಂದಿರುವ ಎಚ್.ಡಿ.ದೇವೇಗೌಡ ಅವರು ನರೇಂದ್ರ ಮೋದಿ ಅವರ ಮೇಲೆ ಒತ್ತಡ ಹೇರಿ, ಮೇಕೆದಾಟು ಯೋಜನೆಗೆ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದಿಂದ ಶೀಘ್ರ ಅನುಮತಿ ದೊರಕಿಸಿಕೊಟ್ಟು ರಾಜ್ಯದ ಹಿತರಕ್ಷಣೆ ಮಾಡಲಿ.

ಸಿದ್ದರಾಮಯ್ಯ, ವಿಧಾನಸಭೆ ವಿರೋಧ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಮಂಗಳವಾರ, 7-1-1997

● **ಪ್ರಧಾನಿ ಮಧ್ಯಸ್ಥಿಕೆಗೆ ಪಟೇಲ್ ಮನವಿ**

ಬೆಂಗಳೂರು, ಜ. 6– ಕಾವೇರಿ ನೀರು ಹಂಚಿಕೆ ಸಂಬಂಧದಲ್ಲಿ ಉಭಯ ರಾಜ್ಯಗಳ ನಡುವಿನ ಮಾತುಕತೆ ವಿಫಲವಾಗಲು ಕಾರಣವಾಗಿರುವ ತಮಿಳುನಾಡು ಸರ್ಕಾರವನ್ನು ವಜಾ ಮಾಡುವಂತೆ ರಾಜ್ಯದ ವಿರೋಧ ಪಕ್ಷಗಳ ನಾಯಕರು ಕೇಂದ್ರ ಸರ್ಕಾರವನ್ನು ಆಗ್ರಹಪಡಿಸಿದ್ದರೆ, ವಿವಾದ ಬಗೆಹರಿಸಲು ಮಧ್ಯ ಪ್ರವೇಶಿಸುವಂತೆ ಪ್ರಧಾನಿ ಎಚ್.ಡಿ. ದೇವೇಗೌಡರಿಗೆ ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಮನವಿ ಮಾಡಿದ್ದಾರೆ.

ಸೌಹಾರ್ದ ಚರ್ಚೆಯ ಮೂಲಕವೇ ವಿವಾದ ಬಗೆಹರಿಸಿಕೊಳ್ಳುವಂತೆ ಸುಪ್ರೀಂ ಕೋರ್ಟ್ ನೀಡಿದ ನಿರ್ದೇಶನದ ಹಿನ್ನೆಲೆಯಲ್ಲಿ ಉಭಯ ರಾಜ್ಯಗಳ ಮುಖ್ಯಮಂತ್ರಿಗಳ ನಡುವೆ ನಡೆಯುತ್ತಿದ್ದ ಮಾತುಕತೆ ವಿಫಲವಾಗಲು ಕಾರಣವಾಗಿರುವ ತಮಿಳುನಾಡಿನ ಮುಖ್ಯಮಂತ್ರಿ ಕರುಣಾನಿಧಿ ಅವರ ನಿಲುವಿನಿಂದ ಉಭಯ ರಾಜ್ಯಗಳ ಬಾಂಧವ್ಯಕ್ಕೆ ಧಕ್ಕೆ ಉಂಟಾಗಿದೆ ಎಂದು ವಿರೋಧಿ ನಾಯಕರು ಟೀಕಿಸಿದ್ದಾರೆ.

● **ವಿದ್ಯುತ್ ಸರಬರಾಜು ಖಾಸಗಿಗೆ: ಪ್ರಸ್ತಾವ**

ಕೊಯಮತ್ತೂರು, ಜ. 6 (ಪಿಟಿಐ)– ರಾಷ್ಟ್ರದಲ್ಲಿ ವಿದ್ಯುತ್ ಸರಬರಾಜು ಮಾಡುವ ವ್ಯವಸ್ಥೆಯನ್ನು ಖಾಸಗೀಕರಣಗೊಳಿಸುವ ವಿದ್ಯುತ್ ಸಚಿವಾಲಯದ ಪ್ರಸ್ತಾವವನ್ನು ಅಂಗೀಕಾರಕ್ಕಾಗಿ ಶೀಘ್ರದಲ್ಲೇ ಕೇಂದ್ರ ಸಚಿವ ಸಂಪುಟದ ಮುಂದೆ ಮಂಡಿಸಲಾಗುವುದು ಎಂದು ವಿದ್ಯುತ್ ಮತ್ತು ಅಸಾಂಪ್ರದಾಯಿಕ ಇಂಧನ ಮೂಲಗಳ ರಾಜ್ಯ ಸಚಿವ ಡಾ. ಎಸ್.ವೇಣುಗೋಪಾಲಚಾರಿ ಇಂದು ಇಲ್ಲಿ ತಿಳಿಸಿದರು.

ಹಾಲಿ ಇರುವ ವಿದ್ಯುತ್ ಕಾಯಿದೆ ಅನ್ವಯ ಖಾಸಗಿಯವರು ವಿದ್ಯುತ್ ಸರಬರಾಜು ಮಾಡಲು ಅವಕಾಶವಿಲ್ಲ. ತಮ್ಮ ಸಚಿವಾಲಯವು ಕಾಯಿದೆಗೆ ತಿದ್ದುಪಡಿ ಕೋರಿದ್ದು, ಇದಕ್ಕೆ ಕೇಂದ್ರ ಕಾನೂನು ಸಚಿವಾಲಯವು ಅನುಮತಿ ನೀಡಿದೆ ಎಂದು ಪತ್ರಕರ್ತರಿಗೆ ತಿಳಿಸಿದರು.

50 ವರ್ಷಗಳ ಹಿಂದೆ

ಶುಕ್ರವಾರ, 7-1-1972

● **'ಭಾರತದ ಬಗ್ಗೆ ಗಡಸು ನೀತಿ ತಾಳಲು ನಿಕ್ಸನರೇ ಆದೇಶ ನೀಡಿದ್ದರು'**

ವಾಷಿಂಗ್ಟನ್, ಜ. 6– ಇತ್ತೀಚೆಗೆ ಭಾರತ–ಪಾಕಿಸ್ತಾನದ ನಡುವೆ ಘರ್ಷಣೆ ಸಂಭವಿಸಿದ ಸಮಯದಲ್ಲಿ ಭಾರತದ ಬಗ್ಗೆ ಗಡಸು ನೀತಿ ಅನುಸರಿಸುವಂತೆ ಅಧ್ಯಕ್ಷ ನಿಕ್ಸನ್ ಅವರೇ ತಮ್ಮ ಸರ್ಕಾರಕ್ಕೆ ಆದೇಶ ನೀಡಿದ್ದರು ಎಂದು ಪತ್ರಕರ್ತ ಜಾಕ್ ಆಂಡರ್‌ಸನ್ ಹೊರಗೆಡವಿದ್ದಾರೆ.

ಅಧ್ಯಕ್ಷ ನಿಕ್ಸನ್‌ರು ಪಾಕಿಸ್ತಾನದ ಬಗ್ಗೆ ಒಲವು ತೋರಲು ಬಯಸಿದ್ದರು ಎಂದು ನಿಕ್ಸನ್‌ರ ವಿಶೇಷ ಸಲಹೆಗಾರ ಹೆನ್ರಿ ಕಿಸಿಂಜರ್ ಸೂಚಿಸಿದ್ದ ರಹಸ್ಯ ಪತ್ರವೊಂದು ಅವರಿಗೆ ದೊರೆತಿದೆ.

ಇದರ ಜೊತೆಗೆ, ಭಾರತ–ಪಾಕ್ ಸಮರದ ಬಗ್ಗೆ ಅಮೆರಿಕದ ನೀತಿಯನ್ನು ನಿರೂಪಿಸುವ ಸರ್ಕಾರದ ಇನ್ನೆರಡು ರಹಸ್ಯ ಪತ್ರಗಳನ್ನೂ ವಶಪಡಿಸಿಕೊಂಡಿರುವ ಆಂಡರ್‌ಸನ್ ಅವರು ಅವುಗಳ ಆಧಾರದ ಮೇಲೆ ಸರ್ಕಾರದ ರಹಸ್ಯಗಳನ್ನು ಬಯಲಿಗೆಳೆದಿದ್ದಾರೆ.

● **ಕೆಲವು ತಿಂಗಳಲ್ಲೇ ಹೊಸ ಆವರಣಕ್ಕೆ ನಗರ ವಿ.ವಿ.**

ಬೆಂಗಳೂರು, ಜ. 6– ಬೆಂಗಳೂರು ವಿಶ್ವವಿದ್ಯಾನಿಲಯದ ಅಭಿವೃದ್ಧಿ ನಿರೀಕ್ಷಿತ ಮಟ್ಟದಲ್ಲಿ ಆಗದಿರುವುದಕ್ಕೆ ಅದು ಸೂಕ್ತ ವಾತಾವರಣ ಹೊಂದದಿರುವುದೇ ಕಾರಣವೆಂದು ರಾಜ್ಯಪಾಲ ಶ್ರೀ ಧರ್ಮವೀರ ಅವರು ಇಂದು ಇಲ್ಲಿ ನುಡಿದು, ನಾಗರಬಾವಿಯ ನೂತನ ಆವರಣದಲ್ಲಿ ಅದರ ಪ್ರಗತಿ ಶೀಘ್ರವಾಗಿ ನಡೆಯಲೆಂದು ಹಾರೈಸಿದರು.

ನಾಗರಬಾವಿಯಲ್ಲಿ ಸುಮಾರು ₹ 7 ಲಕ್ಷ ವೆಚ್ಚದಲ್ಲಿ ನಿರ್ಮಿಸಲಾಗುವ ಜಿಯಾಲಜಿ ವಿಭಾಗದ ಕಟ್ಟಡಕ್ಕೆ ಅಸ್ತಿಭಾರ ಹಾಕಿ ಅವರು ಮಾತನಾಡಿದರು.

ವಿನಾಶದತ್ತ 'ಸಾಮೂಹಿಕ ಭೂಮಿ': ಕೃಷಿ, ಪಶುಸಂಗೋಪನೆ, ಗ್ರಾಮೀಣ ಜೀವನೋಪಾಯಗಳಿಗೆ ಭಂಗ

ಬರಿದಾದ ಗೋಮಾಳ, ನೆರೆ–ಬರ ಧಾರಾಳ!

ವಿಶ್ಲೇಷಣೆ

ಕೇಶವ ಎಚ್. ಕೊರ್ಸೆ

ಸಣ್ಣ ರೈತರು ಹಾಗೂ ವನವಾಸಿಗರು ಮೇವಿನ ಕೊರತೆ ಎದುರಿಸುತ್ತಿರುವ ಸನ್ನಿವೇಶವು ಇದೀಗ ಬೇಸಿಗೆ ಬರುವ ಮುನ್ನವೇ ನಾಡಿನ ಬಹಳೆಡೆ ಸೃಷ್ಟಿಯಾಗುತ್ತಿದೆ. ಬೆಳೆದ ಹುಲ್ಲು ಇತ್ತೀಚಿನ ಅಕಾಲಿಕ ಮಳೆ ಹಾಗೂ ನೆರೆಯಿಂದಾಗಿ ಬಹುತೇಕ ನಾಶವಾಗಿ ಮಾರುಕಟ್ಟೆಯಲ್ಲೂ ಮೇವಿನ ಕೊರತೆ ತಲೆದೋರುತ್ತಿದೆ. ನೆರೆ- ಬರಗಳೇನೋ ಕಾಲಚಕ್ರದಲ್ಲಿ ಸಹಜವಾಗಿದ್ದವಾದರೂ ಮೇವಿನ ಕೊರತೆಯೆಂಬುದು ಇತ್ತೀಚಿನ ದಶಕಗಳ ವಿದ್ಯಮಾನವೇ ಸರಿ.

ಮೊದಲೆಲ್ಲ ದನಕರುಗಳಿಗೆ ಮೇಯಲೆಂದೇ ಮೀಸಲಿಟ್ಟ ಊರಿನ ಗೋಮಾಳದಲ್ಲಿ ಹುಲ್ಲು- ಸೊಪ್ಪುಗಳ ಕನಿಷ್ಠ ಮೇವಾದರೂ ಸಿಗುತ್ತಿತ್ತು. ಈಗ ಈ ಸಾಮೂಹಿಕ ಭೂಮಿಯೇ ಕಣ್ಮರೆಯಾಗುತ್ತಿರುವುದರಿಂದ, ಜಾನುವಾರು ಅವಲಂಬಿಸಿದ ಗ್ರಾಮೀಣ ಬದುಕೇ ಕುಸಿಯುತ್ತಿದೆ! ಹಳ್ಳಿಯೊಂದಕ್ಕೆ ಕಾಲಿಟ್ಟರೆ, ಮುಖ್ಯವಾಗಿ ಮೂರು ಬಗೆಯ ಭೂಮಿಗಳನ್ನು ಗುರುತಿಸಬಹುದು. ಒಂದೆಡೆ, ಖಾಸಗಿ ಮಾಲೀಕತ್ವದ ಗದ್ದೆ- ತೋಟಗಳಿರುವ ಕೃಷಿಜಮೀನು. ಇನ್ನೊಂದೆಡೆ, ಅರಣ್ಯ ಇಲಾಖೆ ವ್ಯಾಪ್ತಿಯ ಗುಡ್ಡ- ಕಣಿವೆಗಳ ಕಾಡು. ಆಹಾರ ಸುರಕ್ಷತೆ ಹಾಗೂ ಆರ್ಥಿಕತೆಯನ್ನು ಕೃಷಿಭೂಮಿ ಕಾಪಾಡಿಕೊಂಡರೆ, ನೆಲ-ಜಲ ಹಾಗೂ ಭವಿಷ್ಯದ ಪರಿಸರ ಸುರಕ್ಷತೆ ಕಾಯುವುದು ಈ ಜೀವವೈವಿಧ್ಯಭರಿತ ಅರಣ್ಯಗಳು.

ಇವೆರಡೂ ಅಲ್ಲದ, ಆದರೆ ಎಲ್ಲರೂ ಅವಲಂಬಿಸಿರುವ ಮೂರನೇ ಬಗೆಯದೇ 'ಸಾಮೂಹಿಕ ಭೂಮಿ'. ಹಳ್ಳಿಗರಿಗೆಲ್ಲ ಸಮಾನ ಹಕ್ಕಿರುವ ಈ ಪ್ರದೇಶದಲ್ಲಿಯೇ ಕೆರೆ-ಹಳ್ಳಗಳಂಥ ಜಲಮೂಲಗಳು, ಗೋಮಾಳ, ಕುರುಚಲು ಕಾಡು ಎಲ್ಲವೂ ವ್ಯಾಪಿಸಿರುವುದು. ಮೇವಿನ ಹುಲ್ಲು, ಬೇಸಾಯಕ್ಕಾಗಿ ಸೊಪ್ಪು- ತರಗೆಲೆ, ಉರುವಲು, ಜೇನು, ಹಣ್ಣು- ಹಂಪಲುಗಳೆಲ್ಲ ದೊರಕುವುದೂ ಇಲ್ಲಿಯೇ. ಕಾಡಿನ ಮೇಲಿನ ಹಳ್ಳಿಗರ ಒತ್ತಡವನ್ನು ಕಡಿಮೆ ಮಾಡುವ ಹಾಗೂ ಕಾಡುಪ್ರಾಣಿಗಳು ಊರಿಗೆ ಬರದಂತೆ ನಿಯಂತ್ರಿಸುವ ಹಸಿರುಬೇಲಿಯಿದು. ನೆರೆ-ಬರಗಳು ಬಂದಾಗ ಆಗುವ ಆಘಾತದ ತೀವ್ರತೆ ತಗ್ಗಿಸಬಲ್ಲ ರಕ್ಷಣಾಪೊರೆ ಸಹ. ಇದೊಂದು ಅಮೂಲ್ಯವಾದ ಸಮುದಾಯ ಸಂಪತ್ತು (Common Pool Resources-CPR) ಎಂದು ಪರಿಸರ- ಅರ್ಥಶಾಸ್ತ್ರಜ್ಞರು ಗುರುತಿಸುವುದು ಈ ಎಲ್ಲ ಕಾರಣಗಳಿಗಾಗಿ.

ರಾಜ್ಯದ ಸ್ಥಿತಿಗತಿ ಗಮನಿಸುವುದಾದರೆ, ಒಟ್ಟು ವಿಸ್ತಾರದ ಸುಮಾರು 191 ಲಕ್ಷ ಹೆಕ್ಟೇರ್ ಭೂಪ್ರದೇಶದಲ್ಲಿ, ಸುಮಾರು ಶೇ 65ರಷ್ಟು ಕೃಷಿ ಜಮೀನಿದೆ. ಸುಮಾರು ಶೇ 20ರಷ್ಟು ಪ್ರದೇಶ ಅರಣ್ಯ ಇಲಾಖೆಗೆ ಸೇರಿದ ಕಾಡು. ಇವು ಹಾಗೂ ಹಳ್ಳಿ- ನಗರಗಳ ವಸತಿ ಪ್ರದೇಶ ಹೊರತುಪಡಿಸಿ ಉಳಿಯುವ ಭೂಪ್ರದೇಶವೇ ಈ ಸಾಮೂಹಿಕ ಭೂಮಿ. ರಾಜ್ಯದ ಸುಮಾರು ಶೇ 8ರಷ್ಟು ಭೂಭಾಗದಲ್ಲಿ ಕಂದಾಯ ಇಲಾಖೆ ಮಾಲೀಕತ್ವದ ಈ ಬಗೆಯ ಭೂಮಿಯಿದೆ. ಮೇವಿಗೆಂದೇ ಮೀಸಲಿರಿಸಿದ ಸುಮಾರು 17.5 ಲಕ್ಷ ಹೆಕ್ಟೇರ್ ಗೋಮಾಳ ಭೂಮಿಯೂ ಒಳಗೊಂಡಂತೆ, ಒಟ್ಟು 25 ಲಕ್ಷ ಹೆಕ್ಟೇರ್ ಸರ್ಕಾರಿ ಕಂದಾಯ ಜಮೀನಿದೆ. ಆದರೆ, ಈಗಾಗಲೇ ಸುಮಾರು 5.6 ಲಕ್ಷ ಹೆಕ್ಟೇರ್ ಸಾಮೂಹಿಕ ಭೂಮಿ ಒತ್ತುವರಿಯಾಗಿಬಿಟ್ಟಿದೆ!

ಎಲ್ಲೆಡೆಯೂ ಗೋಮಾಳಭೂಮಿ ಖಾಸಗಿ ಸ್ವತ್ತಾಗಿ ಪರಿವರ್ತಿತವಾಗುತ್ತಿದೆ. ಗೋಮಾಳ, ಗಾಯರಾಣ, ಹುಲ್ಲುಬನ್ನಿ, ಗೋಚರ, ಜಾಡಿ, ಕುಮ್ಕಿ ಎಂದೆಲ್ಲ ಪಹಣಿಗಳಲ್ಲಿ ದಾಖಲಿಸಿ, ಸಮುದಾಯಗಳ ಉಪಯೋಗಕ್ಕಾಗಿಯೇ ಮೀಸಲಿಡುತ್ತಿದ್ದ ಸ್ವಾತಂತ್ರ್ಯೋತ್ತರ ಕಾಲದ ಕಲ್ಯಾಣರಾಜ್ಯ ತತ್ವಗಳು, ಇತ್ತೀಚಿನ ಸರ್ಕಾರಿ ನೀತಿ-ನಡಾವಳಿಯಲ್ಲಿ ಕಣ್ಮರೆಯಾಗುತ್ತಿರುವುದೇ ಇದಕ್ಕೆ ಕಾರಣ ಎನ್ನಬೇಕು. ಈ ಸರ್ಕಾರಿ ಭೂಮಿ ಇರುವುದೇ ಸಾಮೂಹಿಕ ಹಿತದ ಬಳಕೆಗಾಗಿ. ರಸ್ತೆ, ಶಾಲೆ, ಆಸ್ಪತ್ರೆಯಂಥ ಉಪಯೋಗಕ್ಕೆ ಭೂಮಿ ಬೇಕೆಂದರೆ, ಸಾಮಾನ್ಯವಾಗಿ 'ಸಿ' ಮತ್ತು 'ಡಿ' ಎಂದು ವರ್ಗೀಕರಿಸಲಾದ, ಕೃಷಿಗೆ ಯೋಗ್ಯವಲ್ಲದ ಈ ಭೂಮಿಯನ್ನೇ ನೀಡುವುದು. ವಸತಿಹೀನರಿಗೆ ಮನೆ ಕಟ್ಟಲು ಅಥವಾ ಭೂರಹಿತರಿಗೆ ಉಳುಮೆ ಮಾಡಿ ಬದುಕು ಕಟ್ಟಿಕೊಳ್ಳಲು ಭೂಮಿ ನೀಡಬೇಕಾದದ್ದೂ ಈ ಪ್ರದೇಶದಿಂದಲೇ.

ಕೆರೆ ಅಚ್ಚುಕಟ್ಟು ಅಭಿವೃದ್ಧಿ, ನೀರಾವರಿ, ಸಾರ್ವಜನಿಕ ಸಂಸ್ಥೆಗಳು ಇತ್ಯಾದಿಗಳಿಗೆ ಗೋಮಾಳ ಭೂಮಿ ನೀಡುವ ಸಂದರ್ಭವೂ ಇರುತ್ತದೆ. ಈ ಬಗೆಯ ಸ್ಥಳೀಯ ಅಗತ್ಯಗಳನ್ನೆಲ್ಲ ವಾಸ್ತವ ನೆಲೆಗಟ್ಟಿನಲ್ಲಿ ಚಿಂತಿಸಿ, ನ್ಯಾಯಯುತವಾಗಿ ಭೂಮಂಜೂರಿ ಮಾಡುವ ವಿವೇಚನಾ ಅಧಿಕಾರವನ್ನು ಭೂಕಂದಾಯ ಕಾಯ್ದೆಯು ಜಿಲ್ಲಾಧಿಕಾರಿಗಳಿಗೆ ನೀಡಿದೆ. ಕರ್ನಾಟಕ ಭೂಕಂದಾಯ ಕಾಯ್ದೆ (1966) ನಿಯಮಗಳಲ್ಲಿನ ಈ ವಿವೇಚನಾ ಅಧಿಕಾರವನ್ನೇ ಅಧಿಕಾರ ರಾಜಕಾರಣವು ಇತ್ತೀಚಿನ ದಶಕಗಳಲ್ಲಿ ವ್ಯಾಪಕವಾಗಿ ದುರ್ಬಳಕೆ ಮಾಡುತ್ತಿರುವುದು!

ಇದನ್ನು ಎರಡು ವಿಧಗಳಲ್ಲಿ ಕಾಣಬಹುದು. ಮೊದಲಿನದು, ಸಮೃದ್ಧ ಸಾಮೂಹಿಕ ಭೂಮಿಯನ್ನು ಉದ್ಯಮಗಳಿಗೆ ಗುತ್ತಿಗೆಯಲ್ಲಿ ಕೊಡುವ ಪರಿಪಾಟ. ವ್ಯಾಪಕ ಸಾರ್ವಜನಿಕ ವಿರೋಧದ ನಡುವೆಯೂ ಎಪ್ಪತ್ತರ ದಶಕದಿಂದಲೇ ಸಾಗಿಬಂದಿರುವ ಸರ್ಕಾರಿ ನೀತಿಯಿದು. ಇದರಿಂದಾಗಿ ಲಕ್ಷಾಂತರ ಹೆಕ್ಟೇರ್ ಗೋಮಾಳಭೂಮಿ ಈಗಾಗಲೇ ಗಣಿಗಾರಿಕೆ ಹಾಗೂ ಏಕಪ್ರಭೇದ ನೆಡುತೋಪುಗಳಿಗೆ ಬಲಿಯಾಗಿದೆ. ಎಂಬತ್ತರ ದಶಕದಲ್ಲಿ ಶಿವಮೊಗ್ಗ- ಹಾವೇರಿ ಜಿಲ್ಲೆಗಳ ಗೋಮಾಳಗಳಲ್ಲಿ ಬೆಳೆಸತೊಡಗಿದ ನೀಲಗಿರಿ ನೆಡುತೋಪು ವಿರೋಧಿಸಿ ರೂಪುಗೊಂಡ ವ್ಯಾಪಕ ಜನಾಂದೋಲನವನ್ನೂ



ಶಿವರಾಮ ಕಾರಂತರಂಥವರು ಈ ಕುರಿತು ಸರ್ಕಾರವನ್ನು ಎಚ್ಚರಿಸಿದ್ದನ್ನೂ ಇಲ್ಲಿ ಉಲ್ಲೇಖಿಸಬೇಕು. ಇಷ್ಟಾಗ್ಯೂ, ರಾಜ್ಯಾದ್ಯಂತ ಕಂದಾಯಭೂಮಿ ಕಾನುಗಳು, ಗೋಮಾಳ, ಚಿತ್ರದುರ್ಗ- ತುಮಕೂರು ಭಾಗದ ಕಾವಲ್ ಪ್ರದೇಶಗಳೆಲ್ಲ ಕೈಗಾರಿಕೀಕರಣದ ಹೆಸರಿನಲ್ಲಿ ಖಾಸಗಿ ತೆಕ್ಕೆಗೆ ಜಾರುತ್ತಲೇ ಇವೆ!

ಎರಡನೆಯದು, ಬಡವರ ಹೆಸರಿನಲ್ಲಿ ಬಲಾಢ್ಯರಿಂದ ಆಗುತ್ತಿರುವ ಭೂ ಒತ್ತುವರಿ. ಗೋಮಾಳದಂಥ ಸಮೃದ್ಧ ಸಮುದಾಯ ಭೂಮಿಗಳು ಖಾಸಗಿಯವರ ಕೈಸೇರುತ್ತಿವೆ. ಭೂಕಂದಾಯ ಕಾಯ್ದೆ (1964), ಪಟ್ಟಣ ಮತ್ತು ಹಳ್ಳಿಗಳ ಯೋಜನಾ ಕಾಯ್ದೆ (1961), ಭೂಸುಧಾರಣಾ ಕಾಯ್ದೆಯ (1961) ಕೆಲ ಅಂಶಗಳನ್ನೇ ತಿರುಚಿ, ಕಾನೂನು ಕಣ್ಣಿಗೆ ಮಣ್ಣೆರಚಿ ಈ ಕಾರ್ಯ ಸಾಧಿಸಲಾಗುತ್ತಿದೆ.

ಶಿವಮೊಗ್ಗ, ಚಿಕ್ಕಮಗಳೂರು, ತುಮಕೂರು, ಕೊಡಗು, ಕರಾವಳಿ ಜಿಲ್ಲೆಗಳು ಸೇರಿದಂತೆ ಹಲವೆಡೆ, ಗೋಮಾಳ, ಕಾನು, ಕಾವಲ್, ಕುಮ್ಕಿಯಂಥ ಪ್ರದೇಶಗಳನ್ನು ರಾತ್ರೋರಾತ್ರಿ ಆಕ್ರಮಿಸಿ, ನೂರಾರು ಎಕರೆಯಲ್ಲಿ ಶುಂಠಿ, ರಬ್ಬರ್, ಅಡಿಕೆ ಬೆಳೆಯುತ್ತಿರುವುದನ್ನು ಕಂದಾಯ ಇಲಾಖೆ ನೋಡುತ್ತಿಲ್ಲವೇಕೆ?

ಇತ್ತೀಚಿನ ವಿಧಾನಮಂಡಲದ ಅಧಿವೇಶನದಲ್ಲಿ ಸರ್ಕಾರವೇ ಹೇಳಿರುವಂತೆ, ಗೋಮಾಳವೂ ಸೇರಿದಂತೆ ಸುಮಾರು ಒಂದೂಮುಕ್ಕಾಲು ಲಕ್ಷ ಹೆಕ್ಟೇರ್ ಕಂದಾಯಭೂಮಿ ಒತ್ತುವರಿಯನ್ನು ಇನ್ನೂ ತೆರವುಗೊಳಿಸಬೇಕಾಗಿದೆ; ಹದಿನಾರು ಸಾವಿರಕ್ಕಿಂತ ಹೆಚ್ಚು ಪ್ರಕರಣಗಳು ನ್ಯಾಯಾಲಯಗಳಲ್ಲಿ ಬಾಕಿಯಿವೆ. ದಾಖಲೆಯೇ ಆಗದ ಒತ್ತುವರಿ ಪ್ರಕರಣಗಳು ಇನ್ನೆಷ್ಟೋ!

ಸಾಮೂಹಿಕ ಭೂಮಿ ನಾಶವು ಗ್ರಾಮಸ್ವಾಸ್ಥ್ಯವನ್ನು ಕಸಿಯುತ್ತಿದೆಯೆಂದು, ಕೇವಲ ಪರಿಸರಶಾಸ್ತ್ರಜ್ಞರು ಹಾಗೂ ಜನಪರ ಚಳವಳಿಗಳು ಹೇಳುತ್ತಿಲ್ಲ; ಸರ್ಕಾರವೇ ರಚಿಸಿದ್ದ ಎ.ಟಿ.ರಾಮಸ್ವಾಮಿ ಸದನ ಸಮಿತಿ ಮತ್ತು ಬಾಲಸುಬ್ರಮಣಿಯನ್ ನೇತೃತ್ವದ ತಜ್ಞ ಸಮಿತಿ ಕೂಡ ಇದನ್ನೇ ಹೇಳಿವೆ. ಕಾನೂನು ತಿರುಚಿ ಅಥವಾ ಸರ್ಕಾರಿ ದಾಖಲೆಗಳನ್ನೇ ತಿದ್ದಿ, ಗೋಮಾಳದಂಥ ಸಾಮೂಹಿಕ ಭೂಮಿಯನ್ನು ಖಾಸಗಿ ಜಮೀನನ್ನಾಗಿ ಪರಿವರ್ತಿಸುವ ಭೂಗಳ್ಳರ ಜಾಲವೇ ರೂಪುಗೊಂಡಿರುವುದನ್ನು ಅವು ಗುರುತಿಸಿವೆ.

ಗೋಮಾಳಗಳನ್ನು ಅನ್ಯ ಉದ್ದೇಶಗಳಿಗೆ ಬಳಸದಂತೆ ಹೈಕೋರ್ಟ್ ಸಹ ಹಲವು ಪ್ರಕರಣಗಳಲ್ಲಿ ಆದೇಶಿಸಿದೆ. ಹೀಗಿದ್ದೂ, ಹೊಸ ಅಕ್ರಮ- ಸಕ್ರಮ ಅರ್ಜಿಗಳಿಗೆ ಅವಕಾಶ ನೀಡುವುದು ಹಾಗೂ ಅರ್ಹರಲ್ಲದವರಿಗೆ ಗೋಮಾಳ ಮಂಜೂರು ಮಾಡುವುದಕ್ಕೆ ಸರ್ಕಾರ ಮುಂದಾಗಿರುವುದು ದುರಂತವಲ್ಲವೇ?

ಬದುಕು ಕಾಯುವ ಮೂಲಸೆಲೆಗಳಾದ ನದಿ- ಕೆರೆ, ಕಾನು- ಗೋಮಾಳಗಳಂಥ 'ಹಸಿರು ಪುಪ್ಪಸ'ಗಳನ್ನು ಸಾರ್ವಜನಿಕ ವಲಯದಲ್ಲೇ ಇರಿಸಿಕೊಳ್ಳಬೇಕಾದ ಅಗತ್ಯವನ್ನು ತಜ್ಞರು ಪ್ರತಿಪಾದಿಸುತ್ತಲೇ ಬಂದಿದ್ದಾರೆ. ಸಾಮೂಹಿಕ ಸಂಪತ್ತೆಲ್ಲ ಖಾಸಗಿ ಆಸ್ತಿಗಳಾಗತೊಡಗಿದರೆ, ನೈಸರ್ಗಿಕ ಸಂಪನ್ಮೂಲಗಳು ಧ್ವಂಸಗೊಂಡು ಗ್ರಾಮೀಣ ಆರ್ಥಿಕತೆ ಕುಸಿಯತೊಡಗುತ್ತದೆ. ಹಳ್ಳಿಗರ ಬದುಕು ಆಗ ಇನ್ನಷ್ಟು ಹಳಿ ತಪ್ಪುತ್ತದೆ.

ಹುಟ್ಟಿಸಿದ ದೇವರು ಹುಲ್ಲು ಮೇಯಿಸಲಾದರೂ ಸರ್ಕಾರವು ಗೋಮಾಳವನ್ನು ಉಳಿಸಬೇಕಲ್ಲವೇ?

ಲೇಖಕ: ನಿರ್ದೇಶಕ, ಸಂರಕ್ಷಣಾ ಜೀವಶಾಸ್ತ್ರ ಮತ್ತು ಸುಸ್ಥಿರ ಅಭಿವೃದ್ಧಿ ಅಧ್ಯಯನ ಕೇಂದ್ರ, ಶಿರಸಿ

ಚುರುಮುರಿ



ಉತ್ತರವಿಲ್ಲದ ಪ್ರಶ್ನೆಗಳು!

● ಬಿ.ಎನ್.ಮಲ್ಲೇಶ್

ಕರ್ಫ್ಯೂಗೆ ಹೆದರಿ ರಾತ್ರಿ ಹತ್ತು ಗಂಟೆ ಒಳಗೆ ಮನೆ ಸೇರಿಕೊಳ್ಳಲು ಬೈಕ್ ಹತ್ತಿದ ವರದಿಗಾರ ತೆಪರೇಸಿಗೆ ಸ್ವಲ್ಪ ದೂರ ಹೋದ ನಂತರ ಹಿಂದುಗಡೆ ಬೈಕ್ ಯಾಕೋ ಭಾರವಾದಂತೆನಿಸಿತು. ಯಾರೋ ಹೆಗಲ ಮೇಲೆ ಕೈ ಇಟ್ಟಂತಾಗಿ ಹೆದರಿಕೆಯಾಯಿತು.

ಅಷ್ಟರಲ್ಲಿ 'ಹೆದರಬೇಡ, ನಾನು ಹುಣಸೆಮರದ ಬೇತಾಳ. ನನ್ನ ಕೆಲ ಪ್ರಶ್ನೆಗಳಿಗೆ ಉತ್ತರ ಬೇಕು. ಕೊಡುತ್ತೀಯ?' ಎಂದಿತು ಒಂದು ಧ್ವನಿ.

'ಸರಿ, ಏನದು ಕೇಳು' ಎಂದ ತೆಪರೇಸಿ, ಉಗುಳು ನುಂಗುತ್ತ.

'ನೀವು ಟೀವಿಯೋರ ಪ್ರಕಾರ ಕೊರೊನಾ ತಳಿಗಳು ಇನ್ನೂ ಎಷ್ಟಿವೆ? ಅವು ರಾತ್ರಿ ಮಾತ್ರ ಓಡಾಡ್ತವಾ? ಅಥ್ವಾ ವೀಕೆಂಡ್‌ನಲ್ಲಿ ಮಾತ್ರ ಹೊರಗೆ ಬರ್ತಾವ?'

'ಗೊತ್ತಿಲ್ಲ' ಎಂದ ತೆಪರೇಸಿ.

'ಇಷ್ಟು ದಿನ ಲಸಿಕೆ ಕೊಟ್ಟದ್ದು ಏನು ಭೇದಿ ನಿಲ್ಲೋಕಾ ಅಥ್ವಾ ಚರ್ಮ ಕಡಿತಕ್ಕಾ?'

'ಅಲ್ಲ ಅನ್ಸುತ್ತೆ, ಗೊತ್ತಿಲ್ಲ'.

'ಹೋಗ್ಲಿ ಬಿಡು, ರಾಜಕೀಯಕ್ಕೆ ಬರ್ತೀನಿ. ಮಂಡಿನೋವಿಗೂ ಮುಖ್ಯಮಂತ್ರಿ ಕುರ್ಚಿಗೂ ಏನಾದ್ರು ಸಂಬಂಧ ಇದೆಯಾ?'

'ಇರಬಹುದು, ಆದ್ರೆ ಗೊತ್ತಿಲ್ಲ'.

'ಕಾಂಗ್ರೆಸ್ ಪಾದಯಾತ್ರೆಗೂ ಬಿಜೆಪಿ ಕರ್ಫ್ಯೂಗೂ ಏನಾದ್ರು ಸಂಬಂಧ ಇದೆಯಾ?'

'ಗೊತ್ತಿಲ್ಲ, ಇರಬಹುದು ಇಲ್ಲದಿರಬಹುದು'.

'ಈಗ ಪಾದಯಾತ್ರೆ ಅಂದ್ರೆ ನೂರಾರು ಜನ ಸೇರಬೇಕು. ಇಬ್ರು ನಡೆದ್ರೂ ಅದು ಪಾದಯಾತ್ರೆನಾ?'

'ಗೊತ್ತಿಲ್ಲ, ಅದು ಅವರಿಷ್ಟ'.

'ನೀನು ಎಲ್ಲದಕ್ಕೂ ಹಿಂಗೆ ಗೊತ್ತಿಲ್ಲ, ಗೊತ್ತಿಲ್ಲ ಅಂದ್ರೆ ನಾನು ನಿನ್ನ ವಿರುದ್ಧವೇ ಪಾದಯಾತ್ರೆ ಮಾಡ್ಬೇಕಾಗುತ್ತೆ ಅಷ್ಟೆ' ಬೇತಾಳ ಎಚ್ಚರಿಸಿತು.

'ಮಾಡು, ಆದ್ರೆ ನಿಂಗೆ ಪಾದಗಳೇ ಇಲ್ಲವಲ್ಲ?' ತೆಪರೇಸಿ ನಕ್ಕ. ಬೇತಾಳ ಮರುಮಾತಾಡದೆ ಹಾರಿ ಹೋಗಿ ಹುಣಸೆಮರಕ್ಕೆ ನೇತುಹಾಕಿಕೊಂಡಿತು.

ಚರ್ಚೆ

ಯಾರ ಕನ್ನಡ ಯಾವುದು?

ಕೆಲವರ ಹಟಕ್ಕಾಗಿ ಭಾಷೆಯನ್ನೇ ತಿದ್ದಲು ಹೊರಡುವುದು ವಿತಂಡವಾದ

● ಪ್ರತಿಭಾ ನಂದಕುಮಾರ್

'ಎಲ್ಲರ ಕನ್ನಡ: ಸಾಧ್ಯತೆ, ಸವಾಲು' ಎಂಬ ಡಾ. ಟಿ.ಎನ್.ವಾಸುದೇವಮೂರ್ತಿ ಅವರ ಲೇಖನದ (ಪ್ರ.ವಾ., ಜ. 5) ಮುಂದುವರಿಕೆಯಾಗಿ ಒಂದು ಪ್ರತಿಕ್ರಿಯೆ. ಭಾಷೆಯ ವಿಷಯದಲ್ಲಿ, ಮುಂದುವರಿದ ಸಂಗತಿಗಳನ್ನು ಹಿಂದಕ್ಕೆ ತಳ್ಳಿ ಮತ್ತೆ ಪ್ರೋಟೋ-ದ್ರವಿಡಿಯನ್ ಕಾಲಕ್ಕೆ ತೆಗೆದುಕೊಂಡು ಹೋಗುವ ಯತ್ನ 'ಎಲ್ಲರ ಕನ್ನಡ' ಅಭಿಯಾನ. ಇದು ಯಾವುದೇ ರೀತಿಯಲ್ಲೂ ಭಾಷೆಗೆ ನೆರವಾಗುವ ಸಂಗತಿಯಲ್ಲ.

ಹತ್ತಾರು ಭಾಷೆಗಳಿಂದ ಎರವಲು ಪಡೆದ ಇಂಗ್ಲಿಷನ್ನು ಈವತ್ತು ಮತ್ತೆ ಮೊದಲಿನ ಸ್ವರೂಪಕ್ಕೆ ತೆಗೆದುಕೊಂಡು ಹೋಗುತ್ತೇವೆ ಅನ್ನುವುದು ಎಷ್ಟು ಮೂರ್ಖತನವೋ ಅಷ್ಟೇ ಅಸಂಬದ್ಧ ಈ ಪ್ರಯತ್ನ. ಏಕೆಂದರೆ ಬಳಸುವವರಿಗೆ ಆಯ್ಕೆಯ ಸ್ವಾತಂತ್ರ್ಯ ಈಗಾಗಲೇ ಇರುವಾಗ ಅದನ್ನು ಕಿತ್ತುಕೊಳ್ಳುವ ಹಟ ಯಾಕೆ? ಅಂದರೆ ಆಡುನುಡಿಯಲ್ಲೇ ಬರೆಯಲು ಇಷ್ಟ ಇರುವವರು ಅದನ್ನು ಈಗಾಗಲೇ ಬರೆಯುತ್ತಿದ್ದಾರೆ. ದೇವನೂರ ಮಹಾದೇವ ಅವರಿಗೆ 'ಕುಸುಮಬಾಲೆ'ಯನ್ನು ಆ ಶೈಲಿಯಲ್ಲಿ ಬರೆಯಬೇಡಿ ಎಂದು ಯಾರೂ ಹೇಳಲಿಲ್ಲ. ಕಥೆ, ಕಾದಂಬರಿಗಳಲ್ಲಿ ಸಂಭಾಷಣೆಗಳನ್ನು ಆಯಾ ಆಡುನುಡಿಯಲ್ಲೇ ಎಲ್ಲರೂ ಬರೆಯುತ್ತಿರುವುದು. ಯಾರೂ ಪಾತ್ರಕ್ಕೆ ಒಗ್ಗದ ಗ್ರಾಂಥಿಕ ಕನ್ನಡದಲ್ಲಿ ಸಂಭಾಷಣೆಯನ್ನು ಬರೆಯುವುದಿಲ್ಲ.

ವರ್ಣಮಾಲೆಯಲ್ಲಿ ಮಹಾಪ್ರಾಣಗಳು ಇರಲಿ, ಇಷ್ಟವಿಲ್ಲದವರು ಬಳಸಬೇಡಿ, ಅಷ್ಟೇ. ಕೀಬೋರ್ಡಿನಲ್ಲಿ ಮಹಾಪ್ರಾಣ ಬಿಟ್ಟು ಬರೆಯಲು ಅನುಕೂಲ ಇದೆಯಲ್ಲ. ಅದನ್ನೇ ತಿದ್ದಿಬಿಟ್ಟರೆ, ನಾನು ಮಹಾಪ್ರಾಣ ಬಳಸಬೇಕಿದ್ದರೆ ಏನು ಮಾಡುವುದು? ಹುಟ್ಟಿದಾಗಿನಿಂದ ನಾವು ಕಲಿತ ಕನ್ನಡವನ್ನು ಬಳಸದಂತೆ ಬೇರೆಯವರು ಒತ್ತಾಯ ಹೇರಿಕೆ ತರುವುದು ಸರಿಯೇ? ಯಾವತ್ತೂ 'ಐತೆ ಪೈತೆ' ಭಾಷೆ ಮಾತನಾಡದವರನ್ನು ಬಲವಂತವಾಗಿ ಹಾಗೆ ಮಾತನಾಡುವಂತೆ ಒತ್ತಾಯಿಸುವುದು ಮತಾಂತರದಷ್ಟೇ ಹೀನ. ಕೆಲವರ ಹಟಕ್ಕಾಗಿ ಭಾಷೆಯನ್ನೇ ತಿದ್ದಲು ಹೊರಡುವುದು ಸಂವಿಧಾನ ತಿದ್ದುವ ಮಾತಿನಷ್ಟೇ ವಿತಂಡವಾದ.

ಕುಂದಾಪ್ರ, ಹುಬ್ಬಳ್ಳಿ ಧಾರವಾಡದ ಕನ್ನಡ, ಬಿಜಾಪುರ ಕನ್ನಡ, ಬ್ಯಾರಿ ಕನ್ನಡ ಮುಂತಾದ ಹಲವು ಕನ್ನಡಗಳಿವೆ. ಹಾಗೆ ನೋಡಿದರೆ ಬಹುಭಾಷಿಕತೆಯನ್ನು ಹೊಡೆದು ಹಾಕಿ ಏಕಭಾಷೆಯ ಸೂತ್ರವನ್ನು ತರುವ ಪ್ರಯತ್ನ ಯಾವತ್ತೂ ಒಳ್ಳೆಯದಲ್ಲ. ಅದಕ್ಕೆ ಅಲ್ಲವೇ ನಾವು ಹಿಂದಿ ಹೇರಿಕೆಯನ್ನು ವಿರೋಧಿಸುತ್ತಿರುವುದು?

ಇದು, ಭಾಷಾ ವಿಜ್ಞಾನದ ದೃಷ್ಟಿಯಿಂದ ಪರಿಶೀಲಿಸಿದರೆ ಸಾಮಾಜಿಕ- ರಾಜಕೀಯ ಕಾರಣಗಳಿಂದ ಬಲವಂತವಾಗಿ ಭಾಷೆಯಲ್ಲಿ ಬದಲಾವಣೆ ತರುವ ವ್ಯರ್ಥ ಸಾಹಸ ಎನ್ನುವುದು ಗೊತ್ತಾಗುತ್ತದೆ. ಯಾವುದೇ ಭಾಷೆಯಲ್ಲಿ ಬದಲಾವಣೆ ಎನ್ನುವುದು ಕಾಲಕ್ರಮೇಣ ಆಗುತ್ತದೆ. ವಕಾರವು ಬಕಾರಕ್ಕೆ ತಿರುಗಲು, ಪಕಾರವು ಹಕಾರಕ್ಕೆ ಬದಲಾಗಲು ಸುಮಾರು ಇನ್ನೂರು ವರ್ಷಗಳು ಬೇಕಾಯಿತು. ಈಗ ವರ್ಣಮಾಲೆಯನ್ನೇ ತಿದ್ದಿಬಿಟ್ಟರೆ ನಮ್ಮ ಸಕಲ ಸಾಹಿತ್ಯ ರಾಶಿಯನ್ನು ಮತ್ತೆ ಈ ಹೊಸ 'ಭಾಷೆ'ಯಲ್ಲಿ ತಿದ್ದಿ ಬರೆಯಲಾಗುತ್ತದೆಯೇ? ಮುಂದಿನ ಪೀಳಿಗೆ ಕನ್ನಡ ಸಾಹಿತ್ಯವನ್ನು ಹೇಗೆ ಓದಬೇಕು? ಈಗ ಹಳಗನ್ನಡವನ್ನು ನಾವು ಹೊಸಗನ್ನಡಕ್ಕೆ ತಿದ್ದಿಕೊಂಡು ಓದುತ್ತೇವೆಯೇ? ಅರ್ಥಮಾಡಿಕೊಳ್ಳುವ ಸಲುವಾಗಿ ಅವನ್ನು 'ಸರಳ ಕನ್ನಡ'ದಲ್ಲಿ ಬರೆದು ಪ್ರಕಟಿಸುತ್ತೇವೆ. ಬೇಕಿದ್ದರೆ 'ಎಲ್ಲರ ಕನ್ನಡ' ಅಭಿಯಾನದವರು ಎಲ್ಲಾ ಸಾಹಿತ್ಯ ಕೃತಿಗಳನ್ನು 'ಅವರ' ಕನ್ನಡದಲ್ಲಿ ಬರೆದು ಓದಿಕೊಳ್ಳಲಿ.

ಡಿಜಿಟಲ್ ಯುಗದಲ್ಲಿ ಕನ್ನಡವೂ ಹೊಸ ಸವಾಲುಗಳನ್ನು ಎದುರಿಸಿ ಗೆದ್ದು ತಾಂತ್ರಿಕವಾಗಿ ಮುನ್ನುಗ್ಗುತ್ತಿರುವಾಗ, ವಿಶ್ವದ ಯಾವುದೇ ಮೂಲೆಯಲ್ಲಿದ್ದರೂ ಕ್ಷಣಾರ್ಧದಲ್ಲಿ ಆ್ಯಕ್ಸೆಸ್ ಮಾಡಿಕೊಳ್ಳುವ ಸಾಧ್ಯತೆಯನ್ನು ಪಡೆದುಕೊಂಡಿರುವಾಗ ಅದನ್ನು ಒಡೆದುಹಾಕಿ ಮತ್ತೆ ವರ್ಣಮಾಲೆಯನ್ನು 'ತಿದ್ದಲು' ಹೊರಟಿರುವುದು ನಿಜಕ್ಕೂ ಗಾಬರಿ ಉಂಟುಮಾಡುವ ಸಂಗತಿ.

ಜಗತ್ತಿನಾದ್ಯಂತ ಇಂಗ್ಲಿಷಿನಲ್ಲಿ ಇರುವಷ್ಟು ಡಯಲೆಕ್ಟ್‌ಗಳು ಕನ್ನಡದಲ್ಲಿ ಇಲ್ಲ. ಆದರೂ ಇಂಗ್ಲಿಷ್ ವರ್ಣಮಾಲೆಯನ್ನು ಯಾರಾದರೂ ತಿದ್ದಲು ಹೊರಟಿದ್ದರೆ ಅದಕ್ಕೆ ಎಂತೆಂತಹ ಪ್ರತಿಕ್ರಿಯೆಗಳು ಬರುತ್ತಿದ್ದವು ಊಹಿಸಿ. ಕನ್ನಡದ ವರ್ಣಮಾಲೆ ಸದ್ಯಕ್ಕೆ ಯಾವುದೇ ಆಡುನುಡಿಯನ್ನು ಹೇಗೆ ಉಚ್ಚರಿಸುತ್ತೇವೆಯೋ ಹಾಗೆಯೇ ಬರೆಯಲು ಸಾಧ್ಯವಾಗಿಸಿದೆ. ಅದನ್ನು ಬಿಟ್ಟುಕೊಟ್ಟು, ಅನವಶ್ಯಕ, ಒತ್ತಾಯಪೂರ್ವಕ ಬದಲಾವಣೆ ತರಲು ಯತ್ನಿಸುವುದು ಆಕ್ಷೇಪಾರ್ಹ.

ಈಗ ನಿಜವಾಗಿ ಭಾಷೆಗಳ ಮಿಶ್ರಣ ಸಿಕ್ಕಾಪಟ್ಟೆ ಹೆಚ್ಚಾಗಿದೆ. ಕೋಡ್ ಗ್ಲೈಡಿಂಗ್ ಅನ್ನುತ್ತಾರೆ ಅದನ್ನು. ಯಾವುದೇ ಮಡಿವಂತಿಕೆ ಇಲ್ಲದೇ ನಾವು ಸುಲಭವಾಗಿ ಬೇರೆ ಭಾಷೆಯನ್ನೂ ಕನ್ನಡದೊಳಗೆ ಮಿಶ್ರಮಾಡಿಬಿಡಬಹುದು. ಅದಕ್ಕೆ ಯಾರ ಅಪ್ಪಣೆಯೂ ಬೇಕಾಗಿಲ್ಲ. ಸದ್ಯದ ಮಾಧ್ಯಮದ ಭಾಷೆಯಾಗಲೀ ಚಲನಚಿತ್ರಗಳ ಹಾಡುಗಳ ಭಾಷೆಯಾಗಲೀ ಯಾರಲ್ಲೂ ಗೊಂದಲವನ್ನಾಗಲೀ ಅಸಹಿಷ್ಣುತೆಯನ್ನಾಗಲೀ ಉಂಟುಮಾಡಿಲ್ಲ. ಸುದೀಪ್ ಕನ್ನಡದ ಬಗ್ಗೆಯೇ ಹಾಡುತ್ತಾ 'ಜೀನಾ ಜೀನಾ ಯಹಾ ಮರ್ನಾ ಮರ್ನಾ ಯಹಾ, ಲೈಫು ಎಂಜಾಯ್ ಮಾಡು...' ಅಂದರೆ ಯಾರೂ ತಲೆ ಕೆಡಿಸಿಕೊಂಡಿಲ್ಲ.

ಉತ್ತರ ಕರ್ನಾಟಕದ ಜನರ ಭಾಷೆಗಳ ಚಿತ್ರಗಳನ್ನೇ ಮಾಡದೆ ಅವರ ಮೇಲೂ ಇದನ್ನೇ ಹೇರುತ್ತಿರುವಾಗ ಅದರ ಬಗ್ಗೆ ಚಿಂತಿಸದೇ ಅಲ್ಪಪ್ರಾಣ ಮಹಾಪ್ರಾಣದ ಬಳಕೆಯನ್ನೇ ಸಂಸ್ಕೃತಿಯ ವ್ಯಾಖ್ಯಾನ ಎಂದು ವಾದ ಮಾಡುತ್ತಾ ವರ್ಣಮಾಲೆಯನ್ನು ಬದಲಿಸುತ್ತೇವೆ ಅನ್ನುವುದು ಯಾಕೋ ನೆಗಡಿಗೆ ಮೂಗನ್ನೇ ಕತ್ತರಿಸುವ ಭಂಡತನವನ್ನು ನೆನಪಿಸುತ್ತಿದೆ.

ವಾಚಕರ ವಾಣಿ

ಜಲದುರ್ಗ ತಾಣ ಸಂರಕ್ಷಿಸಿ

ಮೊನ್ನೆ ಜಲದುರ್ಗಕ್ಕೆ ಹೋಗಿದ್ದೆ. ಜಲದುರ್ಗದ ಸುತ್ತ ಕೃಷ್ಣಾ ನದಿ ಆವರಿಸಿಕೊಂಡಿದೆ. ಏಳು ಸುತ್ತಿನ ಕೋಟೆಯನ್ನೂ ಹೊಂದಿದೆ. ದೇವಗಿರಿಯ ಯಾದವರು ಆಡಳಿತವನ್ನು ಆರಂಭಿಸಿದ ಈ ತಾಣದಲ್ಲಿ ನಿರ್ಮಿಸಲಾಗಿದ್ದ ಹತ್ತಾರು ಸ್ಮಾರಕಗಳು ಈಗ ಅವಸಾನದ ಅಂಚಿನಲ್ಲಿವೆ. ಅಲ್ಲಿನ ಅಪರೂಪದ ಕೋಟೆ, ದೇವಾಲಯಗಳು, ಶಾಸನಗಳು, ಶಿಲ್ಪಗಳು, ಬಾವಿಗಳು, ಸಮಾಧಿಗಳು, ಮಸೀದಿಗಳು, ತೊಟ್ಟಿಲು ಬುರುಜುಗಳು, ಕಾವಲು ಗೋಪುರಗಳೆಲ್ಲವೂ ಹಾಳಾಗುತ್ತಿರುವುದು ವಿಷಾದಕರ. ಈ ಬಗ್ಗೆ ಸಂಶೋಧಕರು, ಸಾಹಿತಿಗಳು, ಸಂಘ-ಸಂಸ್ಥೆಗಳು, ಇತಿಹಾಸ ಆಸಕ್ತರು ಧ್ವನಿ ಎತ್ತಬೇಕು. ಇವುಗಳ ಸಂರಕ್ಷಣೆಗೆ ಒತ್ತಡ ಹೇರಬೇಕು.

ಡಾ. ಶಿವರಾಜ ಯತಗಲ್, ಲಿಂಗಸುಗೂರು

ಸರ್ವಸಮ್ಮತ ಆಹಾರ ನೀಡಲಿ

ಮೊಟ್ಟೆಗೆ ಸಂಬಂಧಿಸಿದಂತೆ ಸಿ.ಮುತ್ತುರಾಯಪ್ಪ ಅವರ ವಾದವನ್ನು (ವಾ.ವಾ., ಜ. 6) ಒಪ್ಪಲಾಗದು. ನೀವು ಮೊಟ್ಟೆ ಸೇವಿಸುವುದು ನಿಮ್ಮ ಆಹಾರದ ಹಕ್ಕು ಎಂದು ಹೇಗೆ ಪ್ರತಿಪಾದಿಸುತ್ತೀರೋ ಹಾಗೇ ಮೊಟ್ಟೆ ತಿನ್ನದೇ ಇರುವುದು ನಮ್ಮ ಆಹಾರದ ಹಕ್ಕು. ತಿನ್ನಲು ಒಲ್ಲದ ಕುಟುಂಬಗಳ ಮಕ್ಕಳಿಗೆ ಅರಿವಿನ ಕೊರತೆ ಇರುವಾಗ, ಶಾಲೆಗಳಲ್ಲಿ ಮೊಟ್ಟೆ ನೀಡಿ ಅವರಿಗೆ ತಿನ್ನಲು ಪ್ರಚೋದನೆ ನೀಡುವುದು ಎಷ್ಟು ಸರಿ? ಅಲ್ಲದೆ ಶಿಕ್ಷಕರು ಕೊಟ್ಟರು ಅಥವಾ ಹೇಳಿದರು, ಸ್ನೇಹಿತರು ಹೇಳುತ್ತಾರೆ, ತಿನ್ನುತ್ತಾರೆ ಎಂದು ಮಕ್ಕಳು ತಿನ್ನುವುದು ಆ ಮಕ್ಕಳ ಕುಟುಂಬಗಳಿಗೆ ಮಾಡುವ ಮೋಸವಾಗಿದೆ. ಸಾಮೂಹಿಕ ಶಿಕ್ಷಣ ಪದ್ಧತಿಯಲ್ಲಿ ಮಕ್ಕಳಿಗೆ ಸರ್ವಸಮ್ಮತ ಆಹಾರವನ್ನು ನೀಡಲಿ.

ಶಾಂತಿನಾಥ ಕೆ. ಹೋತಪೇಟಿ, ಹುಬ್ಬಳ್ಳಿ

ಬೇಕಾಗಿರುವುದು ನವ ಬೆಂಗಳೂರಲ್ಲ

'ಇದ್ದ ಮಕ್ಕಳಿಗೆ ಹೊಟ್ಟೆಗಿಲ್ಲ... ಇನ್ನೊಂದು ಕೊಡು ಸದಾಶಿವ'– ಇದು ಕನ್ನಡದ ಹಳೆಯ ಮತ್ತು ಅರ್ಥಪೂರ್ಣ ಗಾದೆ. ಸಕಲ ಸೌಲಭ್ಯ ಇರುವ ನವ ಬೆಂಗಳೂರನ್ನು ನಿರ್ಮಿಸಲು ನೀಲನಕ್ಷೆ ಸಿದ್ಧಪಡಿಸಲಾಗುತ್ತಿದ್ದು, ವಿಶೇಷ ಅನುದಾನವನ್ನು ಸರ್ಕಾರ ಒದಗಿಸಲಿದೆ ಎನ್ನುವ ಮುಖ್ಯಮಂತ್ರಿಯವರ ಹೇಳಿಕೆ ಈ ಗಾದೆಯನ್ನು ಬೇಡವೆಂದರೂ ನೆನಪಿಸುತ್ತದೆ. ಬೆಂಗಳೂರಿಗೆ ಬೇಕಾಗಿರುವುದು ನಿರಂತರ ವಿದ್ಯುತ್ ಪೂರೈಕೆ, ಸ್ವಚ್ಛ ಗಟಾರ, ಹೂಳೆತ್ತಿದ– ಒತ್ತುವರಿ ಇಲ್ಲದ ರಾಜಕಾಲುವೆ, ಗುಂಡಿಮುಕ್ತ ರಸ್ತೆಗಳು, ಕಸ- ತ್ಯಾಜ್ಯರಹಿತ ಬಡಾವಣೆಗಳು, ಅಗೆತ ಇಲ್ಲದ ರಸ್ತೆಗಳು, ನಿರಂತರ ನೀರು ಪೂರೈಕೆ ವಿನಾ ಸಿಂಗಪುರವನ್ನು ಅನಾವರಣಗೊಳಿಸುವ ನವ ಬೆಂಗಳೂರಲ್ಲ.

ನವ ಬೆಂಗಳೂರು ಪರಿಕಲ್ಪನೆಯೇನೋ ಶ್ಲಾಘನೀಯವಾಗಿದೆ. ಅದರೆ ಅಕಸ್ಮಾತ್ ಅನುಷ್ಠಾನಗೊಂಡರೆ, ಅದು ವಲಸಿಗರ ತಾಣವಾಗುವುದೇ ವಿನಾ ಕನ್ನಡಿಗರಿಗೆ ಗಗನಕುಸುಮವಾಗುವ ಸಾಧ್ಯತೆಯೇ ಹೆಚ್ಚು. ಮೊದಲು ಬೆಂಗಳೂರು ಬದುಕಲು ನೆಮ್ಮದಿಯ ಸ್ಥಳವಾಗಲಿ, ನವ ಬೆಂಗಳೂರಿನ ಕನಸು ನಂತರದ ಗುರಿಯಾಗಲಿ.

ರಮಾನಂದ ಶರ್ಮಾ, ಬೆಂಗಳೂರು

ಎಳವೆಯಲ್ಲೇ ವಿಷಬೀಜ ಬಿತ್ತುತ್ತಿರುವುದೇಕೆ?

ಕಾಲೇಜು ವಿದ್ಯಾರ್ಥಿಗಳಲ್ಲೂ ಇಂದು ಕೋಮು ದ್ವೇಷದ ಕಿಡಿಯನ್ನು ಹೇಗೆ ಹೊತ್ತಿಸಲಾಗುತ್ತಿದೆ ಎಂಬುದಕ್ಕೆ ಇದೊಂದು ತಾಜಾ ಉದಾಹರಣೆ. ಚಿಕ್ಕಮಗಳೂರು ಜಿಲ್ಲೆ ಕೊಪ್ಪ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ತರಗತಿಗಳಿಗೆ ಮುಸ್ಲಿಂ ವಿದ್ಯಾರ್ಥಿನಿಯರು ಸ್ಕಾರ್ಫ್ ಧರಿಸಿ ಬರುವುದನ್ನು ವಿರೋಧಿಸಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಕಾರ್ಯಕರ್ತರು ಇತ್ತೀಚೆಗೆ ಕಾಲೇಜು ಆವರಣದಲ್ಲಿ ಕೇಸರಿ ಶಾಲು ಧರಿಸಿ ಪ್ರತಿಭಟನೆ ನಡೆಸಿದರು. ಹಿಂದೆಯೂ ಇದೇ ತರಹದ ಘಟನೆಗಳು ನಡೆದು ಪರಿಸ್ಥಿತಿ ತಾತ್ಕಾಲಿಕವಾಗಿ ಶಮನಗೊಂಡಿತ್ತು. ಕಾಲೇಜಿನಲ್ಲಿ ಈ ವಿಷಯಕ್ಕಾಗಿಯೇ ಆಗಾಗ್ಗೆ ಉದ್ವಿಗ್ನ ಪರಿಸ್ಥಿತಿ ಉಂಟಾಗುತ್ತಿದೆ.

ಚೆನ್ನಾಗಿ ಓದಿ, ಉತ್ತಮ ಸಂಸ್ಕಾರವಂತರಾಗಿ ಬಾಳಿ ಬದುಕಬೇಕಾಗಿರುವ ನಮ್ಮ ಯುವಪೀಳಿಗೆಯಲ್ಲಿ ನಾವು ಎಳೆವಯಸ್ಸಿನಲ್ಲಿಯೇ ಎಂಥ ವಿಷಬೀಜವನ್ನು ಬಿತ್ತುತ್ತಿದ್ದೇವೆ?! ಇದರಿಂದ ಮುಂದೆ ಎಂಥ ಭಾರತವನ್ನು ಕಟ್ಟಬೇಕೆಂದಿದ್ದೇವೆ? ನಮ್ಮ ವೈಯಕ್ತಿಕ ತೆವಲುಗಳಿಗಾಗಿ ಹಸುಳೆಗಳ ಬದುಕಿಗೆ ಕೊಳ್ಳಿ ಇಡುವ ಪ್ರಯತ್ನ ನಡೆಯುತ್ತಿದೆಯೇ? ಇವೆಲ್ಲಾ ಪ್ರಶ್ನೆಗಳಿಗೆ ನಾವು ಉತ್ತರ ಕಂಡುಕೊಳ್ಳಬೇಕಾಗಿದೆ. ನಮ್ಮ ರಾಜಕಾರಣಿಗಳು, ಪಕ್ಷಗಳು ಮತ್ತು ಸರ್ಕಾರಗಳಿಗೆ ಮುಂದೆ ಒಂದು ನಿರ್ಮಲ ಭಾರತವನ್ನು ಕಟ್ಟಿ, ಬಿಟ್ಟು ಹೋಗಬೇಕೆಂಬ ಪ್ರಾಮಾಣಿಕವಾದ ಇಚ್ಛಾಶಕ್ತಿ ಇದ್ದರೆ, ವಿವಿಧ ಪಕ್ಷಗಳ ವಿದ್ಯಾರ್ಥಿ ಘಟಕಗಳಿಗೆ ತಿಳಿಹೇಳಿ, ಅವುಗಳು ಲಕ್ಷ್ಮಣರೇಖೆ ದಾಟದಂತೆ ತಾಕೀತು ಮಾಡಬೇಕು.

ಚಾವಲ್ಮನೆ ಸುರೇಶ್ ನಾಯಕ್, ಹಾಲ್ಮತ್ತೂರ್, ಕೊಪ್ಪ

ಕಾಡು ಸಂರಕ್ಷಣೆ: ಬೇಕು ಮುನ್ನೆಚ್ಚರಿಕೆ

ಮಳೆಗಾಲ ಕಳೆದು ಮಾಗಿಯ ಕಾಲದಲ್ಲಿ ಋತುಗಳು ಬದಲಾಗುತ್ತಿವೆ. ಸಹಜವಾಗಿಯೇ ಗಿಡ ಮರಗಳ ಎಲೆಗಳು ಉದುರಿವೆ. ತೇವಾಂಶ ಕಡಿಮೆಯಾಗಿ ವಾತಾವರಣದಲ್ಲಿ ಒಣಹವೆ ಇದೆ. ಈ ಸಂದರ್ಭದಲ್ಲಿ ಕಾಡಿಗೆ ಕಿಚ್ಚು ಬೀಳುವ ಅಪಾಯ ಇರುತ್ತದೆ. ಇದರಿಂದ, ಸಸ್ಯಸಂಪತ್ತು ಹಾಗೂ ಕಾಡಿನಲ್ಲಿ ನೆಲೆಸಿದ ಜೀವಿಗಳಿಗೂ ಅಪಾಯ. ಭೂಮಾಫಿಯಾದವರ ಕಣ್ಣು ಕಾಡಿನ ಮೇಲಿದೆ. ಅಲ್ಲದೆ ಕಾಡಂಚಿನಲ್ಲಿ ನೆಲೆಸಿರುವವರ ಮೌಢ್ಯವೂ ಸ್ವಲ್ಪಮಟ್ಟಿಗೆ ಕಾರಣವಾಗಿದೆ.

ಕಳೆದ ವರ್ಷ ಕಾಡ್ಗಿಚ್ಚಿಗೆ ಲಕ್ಷಾಂತರ ಹೆಕ್ಟೇರ್ ಅರಣ್ಯ ನಾಶವಾಗಿದ್ದು, ಇದರ ಮರುಪೂರಣಕ್ಕೆ ಮುನ್ನೂರು ವರ್ಷಗಳೇ ಬೇಕಾಗುತ್ತದೆ ಎಂದು ಅಂದಾಜಿಸಲಾಗಿದೆ. ಇಂತಹ ಅಗ್ನಿ ಅವಘಡಗಳು ಸಂಭವಿಸದಂತೆ ನೋಡಿಕೊಳ್ಳಲು ಹಲವಾರು ಮುಂಜಾಗ್ರತಾ ಕ್ರಮಗಳನ್ನು ಅರಣ್ಯ ಇಲಾಖೆ ಹಾಗೂ ಪರಿಸರ ಸಂರಕ್ಷಣಾ ಸಂಘಟನೆಗಳು ವಹಿಸಬೇಕಾಗಿದೆ. ಸಂಬಂಧಿಸಿದವರು ಕಟ್ಟುನಿಟ್ಟಿನ ಕ್ರಮಗಳ ಮೂಲಕ ಕಿಚ್ಚಿನಿಂದ ಕಾಡನ್ನು ಸಂರಕ್ಷಿಸಲಿ. ಕಾಡು ಉಳಿದರೆ ನಾಡು ಉಳಿದೀತು.

ರುದ್ರೇಶ್ ಅದರಂಗಿ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಪ್ರಧಾನಿ ರಕ್ಷಣೆ ಎಸ್‌ಪಿಜಿ ಹೊಣೆ

• ಜಯಸಿಂಹ ಆರ್.
ಅಮೃತ್‌ಕಿರಣ್ ಬಿ. ಎಂ.

ದೇಶದ ಪ್ರಧಾನಿ, ಮಾಜಿ ಪ್ರಧಾನಿ ಮತ್ತು ಅವರ ಜತೆ ವಾಸಿಸುವ ಕುಟುಂಬದ ಸದಸ್ಯರ ರಕ್ಷಣೆಗಾಗಿ 1985ರಲ್ಲಿ ವಿಶೇಷ ರಕ್ಷಣಾ ದಳ ಅಥವಾ ಎಸ್‌ಪಿಜಿಯನ್ನು ಸ್ಥಾಪಿಸಲಾಯಿತು. ಕೇಂದ್ರ ಗೃಹ ಸಚಿವಾಲಯದ ಅಡಿ ಕಾರ್ಯನಿರ್ವಹಿಸುವ ಈ ದಳವು, ದೇಶದ ಅತ್ಯುನ್ನತ ಭದ್ರತಾ ತಂಡ ಎನಿಸಿದೆ.

ಗೃಹ ಸಚಿವಾಲಯದ ಅಧೀನದಲ್ಲಿ ಕಾರ್ಯನಿರ್ವಹಿಸುವ ಗಡಿ ಭದ್ರತಾ ಪಡೆ, ಕೇಂದ್ರೀಯ ಮೀಸಲು ಪೊಲೀಸ್ ಪಡೆ, ಕೇಂದ್ರೀಯ ಕೈಗಾರಿಕಾ ಭದ್ರತಾ ಪಡೆ, ಇಂಡೊ-ಟಿಬೆಟಿಯನ್ ಗಡಿ ಪೊಲೀಸ್ ಪಡೆಗಳಲ್ಲಿರುವ ಉತ್ಕೃಷ್ಟ ಸಾಮರ್ಥ್ಯದ ಯೋಧರನ್ನು ಆಯ್ಕೆಮಾಡಲಾಗುತ್ತದೆ. ಕಠಿಣ ತರಬೇತಿಯ ನಂತರ ಅವರನ್ನು ಎಸ್‌ಪಿಜಿ ಕರ್ತವ್ಯಕ್ಕೆ ನಿಯೋಜನೆ ಮಾಡಲಾಗುತ್ತದೆ.

ಎಸ್‌ಪಿಜಿ ಯೋಧರು ತಾವು ರಕ್ಷಣೆಯ ಜವಾಬ್ದಾರಿ ಹೊತ್ತ ವ್ಯಕ್ತಿಯ ರಕ್ಷಣೆಗಾಗಿ ದಿನದ 24 ಗಂಟೆಯೂ ಕಾರ್ಯನಿರ್ವಹಿಸಲು ಸಿದ್ಧರಿರಬೇಕು. ಈ ಕರ್ತವ್ಯಕ್ಕೆ ನಿಯೋಜಿತರಾದ ಯೋಧರು, ತಾವಾಗೇ ಕರ್ತವ್ಯದಿಂದ ಬಿಡುಗಡೆ ಪಡೆಯಲು ಅವಕಾಶವಿಲ್ಲ. ಎಸ್‌ಪಿಜಿ ಮಾತ್ರವೇ ಅವರನ್ನು ನಿಯೋಜನೆಯಿಂದ ಬಿಡುಗಡೆ ಮಾಡುವ ಅಧಿಕಾರ ಹೊಂದಿದೆ.

ಮಾಜಿ ಪ್ರಧಾನಿಗಳಿಗೂ ರಕ್ಷಣೆ ನೀಡುವ ಸಲುವಾಗಿ ಈ ಪಡೆಯನ್ನು ಸ್ಥಾಪಿಸಲಾಗಿತ್ತು. ಆದರೆ, 2019ರಲ್ಲಿ ಎಸ್‌ಪಿಜಿ ಕಾಯ್ದೆಗೆ ತಿದ್ದುಪಡಿ ತರಲಾಗಿದೆ. ಅದರ ಪ್ರಕಾರ, ಪ್ರಧಾನಿಯು ಅಧಿಕಾರದಿಂದ ಕೆಳಗಿಳಿದ ಬಳಿಕ ಒಂದು ವರ್ಷ ಮಾತ್ರವೇ ಅವರಿಗೆ ಎಸ್‌ಪಿಜಿ ರಕ್ಷಣೆ ದೊರೆಯಲಿದೆ. ಪ್ರಧಾನಿಯ ದೈನಂದಿನ ಚಟುವಟಿಕೆಗಳು, ಅಧಿಕೃತ ಪ್ರವಾಸ ಮತ್ತು ಖಾಸಗಿ ಪ್ರವಾಸ, ವಿದೇಶಿ ಪ್ರವಾಸಗಳಲ್ಲಿ ರಕ್ಷಣೆ ನೀಡುವ ಹೊಣೆ ಈ ದಳದ್ದೇ ಆಗಿದೆ.

ಪ್ರಧಾನಿಯ ಪ್ರವಾಸದ ಯೋಜನೆಯನ್ನು ಸಿದ್ಧಪಡಿಸುವ ಜವಾಬ್ದಾರಿ ಈ ಪಡೆಯದ್ದೇ ಆಗಿದೆ. ಆದರೆ ಅದು ಗುಪ್ತಚರ ಇಲಾಖೆಯ ಜತೆಗೆ ಚರ್ಚಿಸಿ ಈ ಯೋಜನೆಗಳನ್ನು ಅಂತಿಮಗೊಳಿಸಬೇಕಾಗುತ್ತದೆ. ಈ ಯೋಜನೆಯ ಅನ್ವಯ ರಾಜ್ಯ ಪೊಲೀಸ್ ಇಲಾಖೆಯು ಕಾರ್ಯನಿರ್ವಹಿಸುತ್ತದೆ.

ಚಿತ್ರಕೃಪೆ: ಎಸ್‌ಪಿಜಿ

ಭದ್ರತೆಗೆ ಅಚ್ಚುಕಟ್ಟಿನ ವ್ಯವಸ್ಥೆ

ಪ್ರಧಾನಿಗೆ ಭದ್ರತೆ ಒದಗಿಸಲು ಅಚ್ಚುಕಟ್ಟಾದ, ಸಮಗ್ರ ಹಾಗೂ ಬಹುಸ್ತರದ ವ್ಯವಸ್ಥೆಯನ್ನೂ ರೂಪಿಸಲಾಗಿರುತ್ತದೆ. ವಿಶೇಷ ರಕ್ಷಣಾ ದಳವು ಪ್ರಧಾನಿಯ ಭದ್ರತೆಯ ಜವಾಬ್ದಾರಿ ಹೊತ್ತಿರುತ್ತದೆ. ಎಸ್‌ಪಿಜಿ ನೇತೃತ್ವದ ಭದ್ರತಾ ವ್ಯವಸ್ಥೆಯ ಅಡಿಯಲ್ಲಿ ಕೇಂದ್ರೀಯ ಭದ್ರತಾ ಪಡೆಗಳು ಹಾಗೂ ಆಯಾ ರಾಜ್ಯಗಳ ಪೊಲೀಸ್ ಪಡೆಗಳನ್ನು ಪ್ರಧಾನಿ ಭದ್ರತೆಗೆ ನಿಯೋಜಿಸಲಾಗುತ್ತದೆ. ಭದ್ರತೆ ಕುರಿತ ವಿಸ್ತೃತ ಮಾರ್ಗ ಸೂಚಿಗಳನ್ನು ಎಸ್‌ಪಿಜಿಯ 'ಬ್ಲೂ ಬುಕ್' ಒಳಗೊಂಡಿರುತ್ತದೆ.

ಪ್ರಧಾನಿಯವರ ಅಧಿಕೃತ ಭೇಟಿಗೆ ಮೂರು ದಿನ ಮುನ್ನ, ಅವರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವ ಸ್ಥಳದಲ್ಲಿ ಭದ್ರತೆಯನ್ನು ಕಲ್ಪಿಸಲು ನಿಯೋಜಿಸಲಾಗುವ ಎಲ್ಲ ಅಧಿಕಾರಿಗಳು ಹಾಗೂ ಸಿಬ್ಬಂದಿ ಜೊತೆಗೆ ಎಸ್‌ಪಿಜಿ 'ಮುಂಗಡ ಭದ್ರತಾ ಸಂಪರ್ಕ' (ಎಎಸ್‌ಎಲ್) ಸಾಧಿಸುತ್ತದೆ. ಇದರಲ್ಲಿ ಎಸ್‌ಪಿಜಿ ಅಧಿಕಾರಿಗಳು, ರಾಜ್ಯದ ಗುಪ್ತಚರ ಸಂಸ್ಥೆಯ ಅಧಿಕಾರಿಗಳು, ರಾಜ್ಯದ ಪೊಲೀಸ್ ಅಧಿಕಾರಿಗಳು ಹಾಗೂ ಜಿಲ್ಲಾಧಿಕಾರಿ ಇರುತ್ತಾರೆ.

ಪ್ರಧಾನಿ ಭೇಟಿ ಕುರಿತ ಪ್ರತಿಯೊಂದು ವಿಚಾರವೂ ಈ ಅಧಿಕಾರಿಗಳ ನಡುವೆ ಚರ್ಚೆಗೊಳಪಡುತ್ತದೆ. ಅಧಿಕಾರಿಗಳ ಈ ಸಭೆ ಮುಗಿದ ಬಳಿಕ, ಭಾಗಿಯಾಗಿದ್ದ ಎಲ್ಲರೂ ಸಹಿ ಮಾಡಿರುವ ಎಎಸ್‌ಎಲ್ ವರದಿ ಸಿದ್ಧವಾಗುತ್ತದೆ. ಈ ವರದಿಯ ಆಧಾರದ ಮೇಲೆ ಅಧಿಕಾರಿಗಳನ್ನು ನಿಯೋಜನೆ ಮಾಡಲಾಗುತ್ತದೆ.

ಪ್ರಧಾನಿಯವರು ಹೇಗೆ (ವಾಯುಮಾರ್ಗ, ರಸ್ತೆ ಮಾರ್ಗ, ರೈಲ್ವೆ ಮಾರ್ಗ) ಆಗಮಿಸುತ್ತಾರೆ, ಅವರು ಆಗಮಿಸಿದ ಬಳಿಕ ಕಾರ್ಯಕ್ರಮ ಸ್ಥಳಕ್ಕೆ ಹೇಗೆ (ಹೆಲಿಕಾಪ್ಟರ್ ಅಥವಾ ರಸ್ತೆ ಮಾರ್ಗ) ತೆರಳುತ್ತಾರೆ ಎಂಬ ವಿಚಾರಗಳು ಸಭೆಯಲ್ಲಿ ಚರ್ಚೆಯಾಗುತ್ತವೆ. ಕೇಂದ್ರೀಯ ಗುಪ್ತಚರ ಇಲಾಖೆ ಹಾಗೂ ರಾಜ್ಯಗಳ ಹಾಗೂ ಸ್ಥಳೀಯ ಗುಪ್ತಚರ ಮಾಹಿತಿಗಳನ್ನು ಸಭೆಯಲ್ಲಿ ಪರಿಗಣನೆಗೆ ತೆಗೆದುಕೊಳ್ಳಲಾಗುತ್ತದೆ.

ಕಾರ್ಯಕ್ರಮ ಸ್ಥಳದ ಪ್ರವೇಶ ದ್ವಾರ, ನಿರ್ಗಮನ ದ್ವಾರ, ಕಾರ್ಯಕ್ರಮಕ್ಕೆ ಬರುವವರು, ಸ್ಥಳದಲ್ಲಿ ಮೆಟಲ್ ಡಿಟೆಕ್ಟರ್ ಅಳವಡಿಕೆ ಹಾಗೂ ವೇದಿಕೆಯ ಗಟ್ಟಿತನದ ಬಗ್ಗೆ ಸಮಗ್ರ ಚರ್ಚೆಯಾಗುತ್ತದೆ. ಕಾರ್ಯಕ್ರಮಗಳಲ್ಲಿ ವೇದಿಕೆಗಳು ಕುಸಿದ ಪ್ರಸಂಗಗಳು ನಡೆದಿವೆ. ಕಾರ್ಯಕ್ರಮ ಸ್ಥಳದ ಅಗ್ನಿ ಸುರಕ್ಷತೆ ಹಾಗೂ ಕಾರ್ಯಕ್ರಮ ನಡೆಯುವ ದಿನದ ಹವಾಮಾನ ವರದಿಯನ್ನೂ ಪರಿಶೀಲಿಸಲಾಗುತ್ತದೆ.

ಒಂದು ವೇಳೆ ಪ್ರಧಾನಿಯವರು ದೋಣಿಯಲ್ಲಿ ಪ್ರಯಾಣಿಸಬೇಕು ಎಂದಿದ್ದರೆ, ದೋಣಿಯ ಸುರಕ್ಷತೆ ಹಾಗೂ ಕಾರ್ಯಕ್ಷಮತೆಯನ್ನು ಪರೀಕ್ಷಿಸಲಾಗುತ್ತದೆ. ಪ್ರಧಾನಿ ಸಂಚರಿಸುವ ಜಾಗದಲ್ಲಿ ಪೊದೆಗಳು ಬೆಳೆದಿದ್ದಲ್ಲಿ, ಅದನ್ನು ಸವರಲು ಕ್ರಮ ತೆಗೆದುಕೊಳ್ಳಲಾಗುತ್ತದೆ. ರಸ್ತೆಗಳು ಕಿರಿದಾಗಿದ್ದರೆ, ಮಾರ್ಗದರ್ಶನ ನೀಡಲು ಅಲ್ಲಿ ಹೆಚ್ಚಿನ ಸಿಬ್ಬಂದಿಯನ್ನು ನಿಯೋಜಿಸಲಾಗುತ್ತದೆ.

ದಿಢೀರ್ ಬದಲಾದರೆ...?

ಕಾರ್ಯಕ್ರಮದಲ್ಲಿ ದಿಢೀರ್ ಬದಲಾವಣೆ ಉಂಟಾದರೆ, ಮುಂಚಿತವಾಗಿ ಅದಕ್ಕೂ ತಯಾರಿ ಮಾಡಲಾಗಿರುತ್ತದೆ. ಪ್ರಧಾನಿಯವರು ವಿಮಾನ ಅಥವಾ ಹೆಲಿಕಾಪ್ಟರ್ ಮೂಲಕ ಕಾರ್ಯಕ್ರಮ ಸ್ಥಳ ತಲುಪಲು ಹವಾಮಾನ ಅಡ್ಡಿಯಾದರೆ, ರಸ್ತೆ ಮಾರ್ಗವನ್ನು ಮೊದಲೇ ಆಯ್ಕೆ ಮಾಡಿಟ್ಟಿರಲಾಗುತ್ತದೆ. ರಸ್ತೆ ಮಾರ್ಗವು ಸುರಕ್ಷಿತವಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳಲಾಗುತ್ತದೆ. ಒಂದು ವೇಳೆ ಪ್ರಧಾನಿಯವರು ವಾಯುಮಾರ್ಗದಲ್ಲಿ ಸಂಚರಿಸಿದರೂ, ಪರ್ಯಾಯ ಎಂದು ಗುರುತಿಸಲಾಗಿರುವ ರಸ್ತೆ ಮಾರ್ಗದಲ್ಲಿ ಸಿಬ್ಬಂದಿಯನ್ನು ನಿಯೋಜಿಸಲಾಗುತ್ತದೆ. ಅಂದರೆ, ಕಾರ್ಯಕ್ರಮ ದಿಢೀರ್ ಬದಲಾದರೆ, ಕೊನೆಯ ಕ್ಷಣದಲ್ಲಿ ಎಲ್ಲ ಭದ್ರತಾ ಏರ್ಪಾಡು ಮಾಡಿಕೊಳ್ಳಲು ಕಷ್ಟವಾಗುತ್ತದೆ ಎಂಬ ಕಾರಣಕ್ಕೆ ಮೊದಲೇ ಸಿದ್ಧತೆ ಮಾಡಿಕೊಳ್ಳಲಾಗಿರುತ್ತದೆ.

ಹೆಲಿಕಾಪ್ಟರ್ ಹಾರಾಡಬೇಕಾದರೆ, 1,000 ಮೀಟರ್ ದೂರದ ದಾರಿಯು ಪೈಲಟ್‌ಗೆ ಕಾಣುವಂತಿರಬೇಕು. ಕೆಲವೊಮ್ಮೆ ಇದು ಸಾಧ್ಯವಾಗದಿದ್ದಾಗ, ಪರ್ಯಾಯವಾಗಿ ರಸ್ತೆ ಮಾರ್ಗದಲ್ಲಿ ಪ್ರಧಾನಿ ಸಂಚರಿಸಿದ ಉದಾಹರಣೆಗಳಿವೆ. ಚಳಿಗಾಲದ ಸಮಯದಲ್ಲಿ ಮಂಜು ಮುಸುಕುವುದರಿಂದ ಈ ರೀತಿಯ ವಿದ್ಯಮಾನಗಳು ಸಹಜವಾಗಿ ನಡೆಯುತ್ತವೆ. ಗೊತ್ತುಪಡಿಸಿದ ಮಾರ್ಗದಲ್ಲಿ ತೊಂದರೆಗಳಿವೆ ಎಂದು ಗೊತ್ತಾದರೆ, ಪ್ರವಾಸವನ್ನು ರದ್ದುಪಡಿಸಲಾಗುತ್ತದೆ.

ಭದ್ರತೆಗೆ ಇರುವ ಬೆದರಿಕೆಗಳ ಬಗ್ಗೆ ಮಾಹಿತಿ ನೀಡುವುದು ಕೇಂದ್ರೀಯ ಗುಪ್ತಚರ ಸಂಸ್ಥೆಗಳ ಜವಾಬ್ದಾರಿ. ರಾಜ್ಯ ಪೊಲೀಸರು ಸ್ಥಳೀಯವಾಗಿ ಭದ್ರತಾ ವ್ಯವಸ್ಥೆ ಕಲ್ಪಿಸಬೇಕು. ಎಸ್‌ಪಿಜಿ, ಅಂತಿಮವಾಗಿ ಪ್ರಧಾನಿ ಭದ್ರತೆ ಕುರಿತು ಅಂತಿಮ ತೀರ್ಮಾನ ತೆಗೆದುಕೊಳ್ಳುತ್ತದೆ. ಸ್ಥಳೀಯ ಪೊಲೀಸರು ಒಪ್ಪಿಗೆ ನೀಡುವವರೆಗೂ ಪ್ರಧಾನಿ ಸಂಚಾರಕ್ಕೆ ಎಸ್‌ಪಿಜಿ ಅನುಮತಿ ನೀಡುವುದಿಲ್ಲ. ಮೂಲಗಳ ಪ್ರಕಾರ, ರಾಜ್ಯ ಪೊಲೀಸರು ಸಂಭಾವ್ಯ ವಿಧ್ವಂಸಕ ಕೃತ್ಯ ತಡೆಯಲು ಬಿಗಿ ತಪಾಸಣೆಗಳನ್ನು ನಡೆಸಬೇಕು. ಪ್ರಧಾನಿ ಅವರ ವಾಹನ ಹಾಗೂ ಬೆಂಗಾವಲು ಪಡೆಯನ್ನು ರಾಜ್ಯ ಪೊಲೀಸರ ವಾಹನವು ಮುನ್ನಡೆಸಬೇಕು. ಆಯಾ ಜಿಲ್ಲೆಯ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ದರ್ಜೆಯ ಅಧಿಕಾರಿಯು ಜತೆಗಿರಬೇಕು. ರ‍್ಯಾಲಿ, ಸಮಾವೇಶ ಅಥವಾ ರೋಡ್ ಶೋ ವೇಳೆ ಜನರು ಪ್ರಧಾನಿಯನ್ನು ಸುತ್ತುವರಿಯುವ ಸಾಧ್ಯತೆಯಿರುತ್ತದೆ. ಈ ವೇಳೆ ಭದ್ರತಾ ಲೋಪ ಆಗದಂತೆ ಎಚ್ಚರಿಕೆ ವಹಿಸಲಾಗುತ್ತದೆ. ಎಸ್‌ಪಿ ದರ್ಜೆಯ, ಸಮವಸ್ತ್ರದಲ್ಲಿ ಇಲ್ಲದ ಸಿಬ್ಬಂದಿಯನ್ನು ಈ ವೇಳೆ ನಿಯೋಜಿಸಲಾಗುತ್ತದೆ. ಒಂದು ವೇಳೆ ಪ್ರಧಾನಿಯು ಶಿಷ್ಟಾಚಾರವನ್ನು ಬದಿಗೊತ್ತಿ ಜನರ ಹತ್ತಿರಕ್ಕೆ ಹೋಗಲು ಇಚ್ಛಿಸಬಹುದು. ಆದರೆ, ಅವರ ಭದ್ರತೆಗೆ ಅಪಾಯವಿದೆ ಎಂದು ಎಸ್‌ಪಿಜಿ ಪರಿಗಣಿಸಿದರೆ, ಪ್ರಧಾನಿ ಅವರನ್ನು ತಡೆಯಬಹುದು.

ಆಧಾರ: ಎಸ್‌ಪಿಜಿ ಕಾಯ್ದೆ 1988, ಎಸ್‌ಪಿಜಿ (ತಿದ್ದುಪಡಿ) ಕಾಯ್ದೆ– 1991, 1994, 1999, 2019

ಏನಿದು 'ಬ್ಲೂ ಬುಕ್'

ಬ್ಲೂ ಬುಕ್ ಎಂಬುದು ಗಣ್ಯರ (ವಿವಿಐಪಿ) ಭದ್ರತೆ ಕುರಿತ ಮಾರ್ಗಸೂಚಿಗಳ ಸಂಗ್ರಹ. ಪ್ರಧಾನಿ ಅವರ ಭದ್ರತೆಯನ್ನು ಹೇಗೆ ಕೈಗೊಳ್ಳಬೇಕು ಎಂಬ ನಿಯಮಗಳನ್ನು ಬ್ಲೂ ಬುಕ್‌ನಲ್ಲಿ ನಮೂದಿಸಲಾಗಿರುತ್ತದೆ. ಈ ನಿಯಮಗಳನ್ನು ಜಾರಿಗೊಳಿಸುವ ಹೊಣೆಯು, ಪ್ರಧಾನಿ ರಕ್ಷಣೆಯ ಜವಾಬ್ದಾರಿ ಹೊತ್ತಿರುವ ವಿಶೇಷ ಭದ್ರತಾ ದಳದ್ದಾಗಿರುತ್ತದೆ. ಯಾವ ಶಿಷ್ಟಾಚಾರಗಳನ್ನು ಪಾಲಿಸಬೇಕು, ಯಾವ ಭದ್ರತಾ ನಿಯಮಗಳನ್ನು ಪಾಲಿಸಬೇಕು ಎಂಬ ಸಮಗ್ರ ಮಾಹಿತಿ ಇದರಲ್ಲಿ ಅಡಕವಾಗಿರುತ್ತದೆ.

ಪ್ರಧಾನಿಯು ಸಭೆಯಲ್ಲಿ ಭಾಗವಹಿಸಿದರೆ, ರಸ್ತೆಯಲ್ಲಿ ಪ್ರಯಾಣಿಸಿದರೆ, ವಿಮಾನದಲ್ಲಿ ಪ್ರಯಾಣಿಸಿದರೆ, ಏನೇನು ಭದ್ರತೆ ಕೈಗೊಳ್ಳಬೇಕು, ಎಷ್ಟು ಸಿಬ್ಬಂದಿ ನಿಯೋಜಿಸಬೇಕು, ಯಾವ ವಾಹನಗಳನ್ನು ಬಳಸಬೇಕು ಎಂದು ಪ್ರತ್ಯೇಕ ಮಾರ್ಗಸೂಚಿಗಳನ್ನು ರಚಿಸಲಾಗಿರುತ್ತದೆ. ಈ ಮಾಹಿತಿಯ ಅನ್ವಯ ಎಸ್‌ಪಿಜಿ ಮಾತ್ರವಲ್ಲ, ರಾಜ್ಯ ಪೊಲೀಸರು ನಿಯಮಗಳನ್ನು ಪಾಲನೆ ಮಾಡಬೇಕು.

ಓಡಾಟಕ್ಕೆ ಅತ್ಯಂತ ವ್ಯವಸ್ಥಿತ 'ಕಾರ್‌ಕೇಡ್'

ಪ್ರಧಾನಿಯು ಬೇರೆ ರಾಜ್ಯಗಳಿಗೆ ಅಧಿಕೃತ ಮತ್ತು ಖಾಸಗಿ ಭೇಟಿ ನೀಡಿದಾಗ ಅವರ ವಾಹನದ ಬಳಗ (ಕಾರ್‌ಕೇಡ್) ಹೇಗಿರಬೇಕು ಎಂಬುದನ್ನು ಕೇಂದ್ರ ಗೃಹ ಸಚಿವಾಲಯವು ನಿಗದಿ ಮಾಡಿದೆ. ಇದಕ್ಕಾಗಿ ಗೃಹ ಸಚಿವಾಲಯವು, 'ಪ್ರವಾಸದ ವೇಳೆ ಪ್ರಧಾನಿಯ ರಕ್ಷಣೆಗಾಗಿ ನಿಯಮಗಳು ಮತ್ತು ನಿರ್ದೇಶನಗಳು' ಎಂಬ ನಿಯಮಾವಳಿಯನ್ನು ರಚಿಸಿದೆ. ಇದು ದೇಶದ ಎಲ್ಲಾ ರಾಜ್ಯಗಳಿಗೂ ಅನ್ವಯವಾಗುತ್ತದೆ. ಪ್ರಧಾನಿ ಒಬ್ಬರೇ ಭೇಟಿ ನೀಡಿದಾಗ ಅವರ ಕಾರ್‌ಕೇಡ್‌ನ ಒಟ್ಟು ವಾಹನಗಳ ಸಂಖ್ಯೆ ಎಂಟನ್ನು ಮೀರಬಾರದು ಎಂದು ಈ ನಿಯಮಗಳು ಹೇಳುತ್ತವೆ. ಆದರೆ ಪ್ರಧಾನಿಯ ಸಂಗಾತಿ, ವಿದೇಶಿ ಗಣ್ಯರು ಜತೆಗಿದ್ದಾಗ ವಾಹನಗಳ ಸಂಖ್ಯೆ ಹೆಚ್ಚಿಸಬಹುದು ಎಂದು ಈ ನಿಯಮಗಳಲ್ಲಿ ವಿವರಿಸಲಾಗಿದೆ

- ರಾಜ್ಯಗಳ ಪ್ರವಾಸದ ವೇಳೆ ಈ ಎಲ್ಲಾ ಕಾರುಗಳನ್ನು ರಾಜ್ಯ ಸರ್ಕಾರವೇ ಒದಗಿಸಬೇಕು
- ಈ ಎಲ್ಲಾ ವಾಹನಗಳ ಚಾಲಕರು ಕರ್ತವ್ಯ ಮುಗಿಯುವವರೆಗೆ ಕಾರಿನಿಂದ ಇಳಿಯಬಾರದು
- ಕಾರ್‌ಕೇಡ್ ಸಾಗಲಿರುವ ಮಾರ್ಗದಲ್ಲಿ ಸಾರ್ವಜನಿಕ ಸಂಚಾರವನ್ನು ಸಂಪೂರ್ಣ ಸ್ಥಗಿತಗೊಳಿಸಿದ ನಂತರವಷ್ಟೇ ಕಾರ್‌ಕೇಡ್ ಪ್ರಯಾಣ ಆರಂಭಿಸಬೇಕು
- ಟೇಲ್‌ಕಾರ್‌ನಿಂದ ಸಂದೇಶ ಬಂದ ನಂತರವಷ್ಟೇ ಸಾರ್ವಜನಿಕ ಸಂಚಾರಕ್ಕೆ ಅನುವು ಮಾಡಿಕೊಡಬಹುದು
- ಈ ಕಾರ್‌ಕೇಡ್‌ನಲ್ಲಿ ಹೆಚ್ಚುವರಿ ಫ್ಲ್ಯಾಗ್‌ಕಾರ್ ಇರಬೇಕು. ಮುಖ್ಯ ಫ್ಲ್ಯಾಗ್‌ಕಾರ್ ಕೆಟ್ಟು ನಿಂತಾಗ, ಅಪಘಾತವಾದಾಗ ಹೆಚ್ಚುವರಿ ಫ್ಲ್ಯಾಗ್‌ಕಾರ್ ಅನ್ನು ಬಳಸಲಾಗುತ್ತದೆ
- ಕಾರ್‌ಕೇಡ್‌ನಲ್ಲಿ ಎಷ್ಟು ಕಾರುಗಳು ಇರಬೇಕು, ಅವು ಯಾವ ಮಾರ್ಗದಲ್ಲಿ ಸಂಚರಿಸುತ್ತವೆ ಎಂಬುದನ್ನು ಎಸ್‌ಪಿಜಿ ಮತ್ತು ಗುಪ್ತಚರ ಇಲಾಖೆ ನಿರ್ಧರಿಸುತ್ತದೆ. ಈ ಎರಡೂ ಸಂಸ್ಥೆಗಳು ನೀಡುವ ನಿರ್ದೇಶನವನ್ನು ರಾಜ್ಯ ಪೊಲೀಸ್ ಇಲಾಖೆ ಅನುಷ್ಠಾನಕ್ಕೆ ತರುತ್ತದೆ

ವಾರ್ನಿಂಗ್/ ಪೈಲಟ್ ಕಾರ್: ಇದು ಕಾರ್‌ಕೇಡ್‌ನ ಮುಂಭಾಗದಲ್ಲಿ ಇರುತ್ತದೆ. ಕಾರ್‌ಕೇಡ್ ಬರುತ್ತಿರುವುದರ ಮುನ್ಸೂಚನೆಯಾಗಿ ಈ ಕಾರು ಸೈರನ್ ಮೊಳಗಿಸುತ್ತಾ ಹೋಗುತ್ತದೆ

ಟೆಕ್ನಿಕಲ್ ಕಾರ್: ಇದು ನೆಟ್‌ವರ್ಕ್ ಜಾಮರ್, ಮತ್ತಿತರ ತಾಂತ್ರಿಕ ಉಪಕರಣಗಳನ್ನು ಹೊಂದಿರುತ್ತದೆ

ರೈಡರ್ಸ್: ಇವು ಪ್ರಧಾನಿ ಸಾಗುವ ಕಾರಿನ ಮುಂಬದಿ, ಎಡಬದಿ, ಬಲಬದಿ ಮತ್ತು ಹಿಂಬದಿಯಲ್ಲಿ ಇರುತ್ತವೆ. ಪ್ರಧಾನಿ ಸಾಗುತ್ತಿರುವ ಫ್ಲ್ಯಾಗ್ ಕಾರ್‌ಗೆ ಎಲ್ಲಾ ಬದಿಯಿಂದಲೂ ಇವು ಬೆಂಗಾವಲು ನೀಡುತ್ತವೆ. ಇವುಗಳ ಸಂಖ್ಯೆ 2ರಿಂದ 6ರವರೆಗೂ ಇರುತ್ತವೆ

ಫ್ಲ್ಯಾಗ್ ಕಾರ್: ಇದು ಪ್ರಧಾನಿ ಸಾಗುವ ಕಾರು. ಇದನ್ನು ಸ್ಟೇಟ್ ಕಾರ್, ಫ್ಲ್ಯಾಗ್ ಕಾರ್ ಎಂದು ಕರೆಯಲಾಗುತ್ತದೆ. ವಿದೇಶಿ ಗಣ್ಯರ ಭೇಟಿಯ ಸಂದರ್ಭದಲ್ಲಿ, ಅವರೂ ಪ್ರಧಾನಿಯ ಜತೆಗೆ ಈ ಕಾರಿನಲ್ಲೇ ಸಾಗುವ ಸಾಧ್ಯತೆ ಇರುತ್ತದೆ

ಆಂಬುಲೆನ್ಸ್: ತುರ್ತು ಸಂದರ್ಭದಲ್ಲಿ ಪ್ರಧಾನಿಗೆ ಅಗತ್ಯ ಚಿಕಿತ್ಸೆ ನೀಡಲು ಬಳಸಲಾಗುತ್ತದೆ. ಇದು ಅತ್ಯಾಧುನಿಕ ವೈದ್ಯಕೀಯ ಸಲಕರಣೆಗಳನ್ನು ಹೊಂದಿರುತ್ತದೆ

ಟೇಲ್ ಕಾರ್: ಇದು ಕಾರ್‌ಕೇಡ್‌ನ ಅತ್ಯಂತ ಕೊನೆಯ ಕಾರ್ ಆಗಿರುತ್ತದೆ. ಕಾರ್‌ಕೇಡ್‌ನ ಎಲ್ಲಾ ವಾಹನಗಳು ಮುಂದೆ ಸಾಗಿವೆ ಎಂಬುದನ್ನು ಖಚಿತಪಡಿಸಿಕೊಂಡ ನಂತರವಷ್ಟೇ ಈ ಕಾರು ಮುಂದುವರಿಯಬೇಕು

ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 14

ರುದ್ರಗಾಯತ್ರಿಯು ಶಿವತತ್ತ್ವ ಸ್ವರೂಪ

ಈ ಮೊದಲೇ ಹೇಳಿದಂತೆ ಶಿವಪಾರಾಯಣಕ್ಕೂ ಮುನ್ನ ಮೊದಲಿಗೆ ಗಣಪತಿಯನ್ನು, ನಂತರ ಶಿವನನ್ನು ಪೂಜಿಸಬೇಕು. ಶಿವಪುರಾಣ ಪುಸ್ತಕ ಶಿವಸ್ವರೂಪವಾಗಿರುವುದರಿಂದ ಅದನ್ನು ಈಶ್ವರನನ್ನು ಪೂಜೆಮಾಡುವಂತೆ ಭಕ್ತಿಯಿಂದ ಪೂಜಿಸಬೇಕು. ಅನಂತರ ಪುರಾಣಿಕನನ್ನು ಸಹ ಅದೇ ಭಕ್ತಿ-ವಿನಯದಿಂದ ಪೂಜಿಸಬೇಕು. ಪುಸ್ತಕವನ್ನು ಇಡಲು ತಂದ ಹೊಸದಾದ ಶುಭ್ರಪ್ರದವಾದ ಆಸನವನ್ನೂ, ಬಿಗಿಯಾದ ಮನೋಹರವಾದ ಪುರಾಣಗ್ರಂಥವನ್ನು ಕಟ್ಟುವ ದಾರವನ್ನೂ ಸಹ ಪೂಜಿಸಬೇಕು. ಯಾರು ಪುರಾಣದ ಪುಸ್ತಕವನ್ನು ಇಡಲು ಹೊಸದಾದ ಬಟ್ಟೆಯನ್ನೂ ಮತ್ತು ಅದನ್ನು ಕಟ್ಟಲು ದಾರವನ್ನು ಕೊಡುವರೋ, ಅವರು ಪ್ರತಿ ಜನ್ಮದಲ್ಲೂ ಭೋಗಶಾಲಿಗಳಾಗಿ, ಜ್ಞಾನಸಂಪನ್ನರಾಗುವರು. ಪುಸ್ತಕದ ಪೂಜೆಯಾದ ನಂತರ, ಪುರಾಣಿಕನ ಪೂಜೆಯನ್ನು ಮಾಡಿ ಕಾಣಿಕೆ ಕೊಡಬೇಕು. ಹಾಗೇ, ಪುರಾಣಿಕನ ಸಹಾಯಕನಾಗಿರುವ ಪಂಡಿತನನ್ನು ಸಹ ಪೂಜಿಸಿ, ಗೌರವಕಾಣಿಕೆ ನೀಡಬೇಕು.

ಶಿವಪುರಾಣವನ್ನು ಪುಣ್ಯವಂತರೇ ಕೇಳಬೇಕು ಎಂಬ ನಿಯಮವಿಲ್ಲ. ಅತ್ಯಂತ ಪಾಪಿಯೂ ದರಿದ್ರನೂ ಕ್ಷಯರೋಗಿಯೂ ಧನವಿಲ್ಲದವನೂ ಮಕ್ಕಳಿಲ್ಲದವನೂ ಕೇಳಬಹುದು. ಎಲ್ಲಾ ಸ್ತ್ರೀಯರೂ ಪುರುಷರೂ ಪುರಾಣಶ್ರವಣ ವಿಧಿಯನ್ನನುಸರಿಸಿಯೇ ಶಿವಪುರಾಣ ಕೇಳಬೇಕು. ವಿಧಿವತ್ತಾಗಿ ಶಿವಪುರಾಣವನ್ನು ಕೇಳಿದ ನಂತರ ಕೊನೆಯಲ್ಲಿ ಶಿವಪುರಾಣ ಆಯೋಜಿಸಿದವರು ತಮಗೆ ಇಷ್ಟವಾದ ಉದ್ಯಾಪನೆಯನ್ನು ಮಾಡಬೇಕು. ಈ ಉದ್ಯಾಪನ ವಿಧಿಯು ಚತುರ್ದಶಿ ಉದ್ಯಾಪನೆಯ ವಿಧಿಯಂತೆಯೇ ಇರುವುದು. ಉದ್ಯಾಪನೆಯಿಂದ ಫಲ ಬಯಸುವ ಧನಿಕರು ತಮ್ಮ ಶಕ್ತಿ ಅನುಸಾರವಾಗಿ ಉದ್ಯಾಪನೆಯನ್ನ ಮಾಡಬಹುದು. ಧನವಿಲ್ಲದವರೂ, ಪರಮೇಶ್ವರನ ಭಕ್ತರೂ ಉದ್ಯಾಪನೆಯನ್ನು ಮಾಡದಿದ್ದರೂ ಬಾಧಕವಿಲ್ಲ. ಅವರು ಪುರಾಣವನ್ನು ಕೇಳುವುದರಿಂದಲೇ ಶುದ್ಧರಾಗಿ, ಫಲಾಪೇಕ್ಷೆರಹಿತರಾಗುವರು.

ಶಿವಪುರಾಣವನ್ನು ಕೇಳುವ ದಿನಗಳು ಅತ್ಯುತ್ತಮವಾದ ಪುಣ್ಯದಿನಗಳಾಗಿರುತ್ತವೆ. ಆ ದಿನಗಳನ್ನು ಕೋಟಿ ಯಜ್ಞಕ್ಕೆ ಸಮಾನವಾದ ಪುಣ್ಯದಿನಗಳೆಂದು ತಿಳಿಯಬೇಕು. ವಿಧಿ-ವಿಧಾನದಿಂದ ಶಿವಪುರಾಣವನ್ನು ಕೇಳುವ ದಿನಗಳಲ್ಲಿ, ದೀನರಿಗೆ ಅಲ್ಪವನ್ನಾದರೂ ದಾನಮಾಡಬೇಕು. ಹೀಗೆ ದಾನ ಮಾಡಿದವರಿಗೆ ನಾಶರಹಿತವಾದ ಫಲವು ಸಿಗುತ್ತೆ. ಶಿವಪುರಾಣ ಪಾರಾಯಣ ಮಾಡಿದ ನಂತರ, ಬಂದಿದ್ದವರೆಲ್ಲರೂ ಭಕ್ತಿಯಿಂದ ಶಿವನನ್ನು ಪೂಜೆ ಮಾಡಬೇಕು. ಶಿವಪುರಾಣ ಕೇಳಿದ ಮಾರನೇ ದಿನ ಶಿವಪಾರಾಯಣವನ್ನು ಆಯೋಜಿಸಿದವರು ಸಂಗೀತ-ನೃತ್ಯ ಉತ್ಸವ ಏರ್ಪಡಿಸಬೇಕು. ಆಯೋಜಕರು ವಿರಕ್ತನಾಗಿ, ಸಂಗೀತ-ನರ್ತನಾದಿಗಳಲ್ಲಿ ಆಸಕ್ತಿ ಇಲ್ಲದವರಾದರೆ, ಮಾರನೆಯ ದಿನ ಮಹೇಶ್ವರನು ಶ್ರೀರಾಮಚಂದ್ರನಿಗೆ ಹೇಳಿದ ಶಿವಗೀತೆಯನ್ನು ಪಠಿಸಬೇಕು. ಗೃಹಸ್ಥನಾದಲ್ಲಿ ಅನುಶುದ್ಧವಾದ ಹವಿಸ್ಸಿನಿಂದ ಕರ್ಮಶಾಂತಿಗೋಸ್ಕರವಾಗಿ ಹೋಮ ಮಾಡಬೇಕು. ರುದ್ರಗಾಯತ್ರಿಯು ಶಿವಪುರಾಣದ ತತ್ತ್ವಸ್ವರೂಪವಾದ್ದರಿಂದ, ರುದ್ರಸಂಹಿತೆಯ ಪ್ರತಿಯೊಂದು ಶ್ಲೋಕವನ್ನು ಹೇಳುತ್ತ ಹೋಮ ಮಾಡಬೇಕು. ಹೋಮ ಮಾಡುವಾಗ ಶಿವಪಂಚಾಕ್ಷರಿಯನ್ನು ಪಠಿಸಬೇಕು. ನ್ಯೂನಾಧಿಕದೋಷ ಪರಿಹಾರಾರ್ಥವಾಗಿ ಶಿವಸಹಸ್ರನಾಮವನ್ನು ಭಕ್ತಿಯಿಂದ ಓದಬೇಕು ಅಥವಾ ಓದಿಸಿ ಕೇಳಬೇಕು. ಈ ರೀತಿ ಶಿವಪುರಾಣ ಪಾರಾಯಣದ ವಿಧಿವಿಧಾನಗಳನ್ನು ಅನುಸರಿಸಿದರೆ, ಅವರೆಲ್ಲರ ಇಷ್ಟಾರ್ಥಗಳು ಸಫಲವಾಗುವುದು.

ಶಿವಪುರಾಣ ಕೇಳುವುದರಿಂದ ಸಿಗುವ ಅಧಿಕವಾದ ಪುಣ್ಯ ಮೂರು ಲೋಕದಲ್ಲಿ ಯಾವುದರಿಂದಲೂ ಸಿಗುವುದಿಲ್ಲ. ಶಿವಪುರಾಣದ ಪ್ರಭಾವದಿಂದ ಈಶ್ವರನ ಕೃಪೆಗೆ ಪಾತ್ರನಾಗಿ ಮೋಕ್ಷ ಸಿಗುವುದು. ಶಿವಪುರಾಣವನ್ನು ಕೇಳಿದವರೆಲ್ಲರಿಗೂ, ಭುಕ್ತಿಯನ್ನೂ ಮೋಕ್ಷವನ್ನೂ ಕೊಡುವ ಸಂಪೂರ್ಣ ಫಲವು ಬರುತ್ತದೆ. ಸಂಪದ್ಯುಕ್ತವಾದ ಶಿವಪುರಾಣವು ಪುರಾಣಗಳಲ್ಲೆಲ್ಲಾ ಶ್ರೇಷ್ಠವಾದುದು. ಇದು ಮಹೇಶ್ವರನಿಗೆ ಸಂತೋಷದಾಯಕವಾದುದು. ಇದನ್ನು ಕೇಳುವುದರಿಂದ ಸಂಸಾರವೆಂಬ ಬಂಧನ ನಾಶವಾಗಿ ಮೋಕ್ಷವು ಲಭಿಸುವುದು. ಮನುಷ್ಯಜನ್ಮದಲ್ಲಿ ಹುಟ್ಟಿ, ಪ್ರಪಂಚಕ್ಕೆ ಅಧಿಪತಿಯಾದ ಈಶ್ವರನನ್ನು ಯಾರು ಧ್ಯಾನಮಾಡುವರೋ, ಅವರ ಗುಣಗಳನ್ನು ಸಾಕ್ಷಾತ್ ಸರಸ್ವತಿಯೇ ವರ್ಣಿಸುವಳು. ಅಂಥವರೆಲ್ಲರೂ ಪ್ರಾಪಂಚಿಕ ಕಷ್ಟಗಳಿಂದ ಮುಕ್ತರಾಗುವರು ಎಂದು ಸುದೀರ್ಘವಾಗಿ ಶಿವಪುರಾಣದ ಮಹಿಮೆ, ಅದರ ಆಚಾರ-ವಿಚಾರಗಳನ್ನೆಲ್ಲ ಶೌನಕಮುನಿಗೆ ತಿಳಿಸಿದ ಸೂತಮುನಿ.

ಹೀಗೆ ಶ್ರೀಸ್ಕಾಂದಮಹಾಪುರಾಣದ ಸನತ್ಕುಮಾರ ಸಂಹಿತೆಯಲ್ಲಿ ಶಿವಪುರಾಣವನ್ನು ಹೇಗೆ ಹೇಳಬೇಕು? ಎಲ್ಲಿ ಕೇಳಬೇಕು? ಅದರ ವಿಧಿ-ವಿಧಾನ ಮತ್ತು ನಿಯಮಗಳನ್ನು ತಿಳಿಸಲಾಗಿದೆ. ಮುಂದೆ ವೇದವ್ಯಾಸರಿಗೆ ಸನತ್ಕುಮಾರದೇವ ಹೇಳಿದ ಮೂಲ ಶಿವಮಹಾಪುರಾಣ ಆರಂಭಗೊಳ್ಳುತ್ತದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಕುಂಭಮೇಳದ ಸಮಯದಲ್ಲಿ 400ಕ್ಕೂ ಹೆಚ್ಚು ಸಾಧುಗಳು ತಮ್ಮನ್ನು ತಾವು ಅಗ್ನಿದೇವನಿಗೆ ಸಮರ್ಪಿಸಿಕೊಂಡರು ಎಂದು ಹೇಳಲಾಗುವ ವಿಡಿಯೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಈ ವಿಡಿಯೊವನ್ನು ಬಿಬಿಸಿ ಸುದ್ದಿವಾಹಿನಿ ಚಿತ್ರೀಕರಿಸಿದೆ. ಉರಿಯುತ್ತಿರುವ ಅಗ್ನಿಜ್ವಾಲೆಯ ಮೇಲೆ ಸಾಧುವೊಬ್ಬರು ಮಲಗಿರುವ ದೃಶ್ಯ ಈ ವಿಡಿಯೊದಲ್ಲಿದೆ. ಕುಂಭಸ್ನಾನಕ್ಕೆ ಹೋಗುವ ಮುನ್ನ ಈ ಆಚರಣೆ ನಡೆಯಿತು ಎಂದು ಹೇಳಲಾಗಿದೆ. ಈ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಭಾರಿ ಚರ್ಚೆ ನಡೆಯುತ್ತಿದೆ. 'ಇದು ಸನಾತನ ಧರ್ಮದ ಶಕ್ತಿ' ಎಂದು ಉಲ್ಲೇಖಿಸಿ, ಹಲವರು ಈ ವಿಡಿಯೊವನ್ನು ಹಂಚಿಕೊಂಡಿದ್ದಾರೆ.

ಈ ವಿಡಿಯೊ, ಬಿಬಿಸಿ ವಾಹಿನಿಯ 'ಎ ಫ್ಯರ್ ಆಫ್ ಯೋಗಿ' ಎಂಬ ಸಾಕ್ಷ್ಯಚಿತ್ರಕ್ಕೆ ಸಂಬಂಧಿಸಿದ್ದು ಎಂದು ಲಾಜಿಕಲ್ ಇಂಡಿಯನ್ ಫ್ಯಾಕ್ಟ್ ಚೆಕ್ ವೇದಿಕೆ ವರದಿ ಮಾಡಿದೆ. ನಿರ್ದೇಶಕ ಮೈಕ್ ವಾಸನ್ ಅವರು 2007ರಲ್ಲಿ ಇದನ್ನು ತಯಾರಿಸಿದ್ದರು. ಸಾಧುವೊಬ್ಬರು ಬೆಂಕಿಯ ನಡುವೆಯೂ ಉಸಿರಾಟ ನಡೆಸುವ ಅನನ್ಯ ತಂತ್ರವನ್ನು ಪ್ರದರ್ಶಿಸಿದರು ಎಂದು ಚಿತ್ರದ ವಿವರಣೆಯಲ್ಲಿ ಉಲ್ಲೇಖಿಸಲಾಗಿದೆ. ಆದರೆ 400 ಸಾಧುಗಳು ತಮ್ಮನ್ನು ತಾವು ಅಗ್ನಿಗೆ ಸಮರ್ಪಿಸಿಕೊಳ್ಳುವ ಆಚರಣೆಯಲ್ಲಿ ತೊಡಗಿದ್ದರು ಎಂಬ ಉಲ್ಲೇಖವು ಈ ಚಿತ್ರದ ಎಲ್ಲಿಯೂ ದಾಖಲಾಗಿಲ್ಲ. ನೂರಾರು ಜನ ಸಾಧುಗಳು ಈ ಆಚರಣೆಯಲ್ಲಿ ತೊಡಗಿದ್ದರು ಎಂಬುದಾಗಿ ದಾರಿತಪ್ಪಿಸಲಾಗಿದೆ ಎಂದು ವೆಬ್‌ಸೈಟ್ ತಿಳಿಸಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಅಪ್ರಯತ್ನದ ಸ್ವಾತಂತ್ರ್ಯ

ಎಸಳಿನಡಿ ಗಿಡದ ಬಿಗಿ; ಮೇಲೆ ಗಾಳಿಯ ಸರಸ |
ಕುಸುಮದ ಕ್ಷೇಮವಾ ಬಿಗಿತ ಬಿಡುತೆಗಳಿಂ ||
ಕುಶಲ ಸೌರಭವ ನಿರ್ಯತ್ನ ಸ್ವತಂತ್ರದಿಂ |
ಪಸರಿಪಾ ನಯ ಸುಖವೊ – ಮಂಕುತಿಮ್ಮ
|| 536 ||

ಪದ-ಅರ್ಥ: ಎಸಳಿನಡಿ = ಎಸಳಿನ + ಅಡಿ, ಕ್ಷೇಮವಾ = ಕ್ಷೇಮ + ಅ, ಬಿಡುತೆಗಳಿಂ = ಬಿಡುತೆಗಳಿಂ(ಬಿಡುಗಡೆಗಳಿಂದ), ನಿರ್ಯತ್ನ = ಅಪ್ರಯತ್ನ, ಪಸರಿಪಾ = ಪಸರಿಪ(ಪಸರಿಸುವ) + ಆ.

ವಾಚ್ಯಾರ್ಥ: ಸಸಿಯ ಬುಡದಲ್ಲಿ ಬಿಗಿ ಇದೆ, ಮೇಲೆ ಗಾಳಿಯಿಂದ ಸರಸತೆ. ಈ ಬಿಗಿ ಮತ್ತು ಸಡಿಲತೆಗಳಿಂದಲೇ ಹೂವು ಕ್ಷೇಮ. ಹೂವು ಅಪ್ರಯತ್ನವಾಗಿ, ಸ್ವತಂತ್ರವಾಗಿ ಪರಿಮಳವನ್ನು ಹರಡಿಸುವ ನಯವೇ ಸುಖ.

ವಿವರಣೆ: ಇದೊಂದು ಸುಂದರವಾದ ಹೂವಿನ ಸಸಿಯ ಚಿತ್ರಣ. ಅದರ ಬೇರಿನ ಬಳಿ ಮಣ್ಣಿನ ಬಿಗಿ ಇದೆ. ಆದರೆ ಮೇಲೆ ಹೂವಿಗೆ ಹೊಯ್ದಾಡುವ ಸ್ವತಂತ್ರತೆ ಇದೆ. ಯಾವ ಪ್ರಯತ್ನವೂ ಇಲ್ಲದೆ, ಸ್ವತಂತ್ರವಾಗಿ ತನ್ನ ಪರಿಮಳವನ್ನು ಕುಶಲತೆಯಿಂದ, ಹರಡುವ ನಯ ಅದ್ಭುತವಾದದ್ದು. ಕೆಳಗೆ ಬಿಗಿ, ಮೇಲೆ ಬಿಡುವಿಕೆಯಿಂದಲೇ ಸಸಿ ಭದ್ರ. ತಿರುಗು ಮುರುಗಾಗಿದ್ದರೆ ಸಸಿ ಇರಬಹುದಾಗಿತ್ತೇ? ಬೇರು ಸಡಿಲವಾದರೆ ಸಸಿ ಬದುಕಲಾರದು. ಮೇಲೆ ಬಿಗಿಯಾದರೆ ಹೂವು ಮುದುರಿ ಹೋಗುತ್ತದೆ. ಬದುಕೂ ಹಾಗೆಯೇ, ಬೇರಿನಂತೆ ನಮ್ಮ ಸಂಸ್ಕೃತಿಯ ಬೇರುಗಳು ಗಟ್ಟಿಯಾಗಿರಬೇಕು ಮತ್ತು ಚಿಂತನೆಯಲ್ಲಿ ಸ್ವತಂತ್ರವಾದ, ಸ್ವಚ್ಛಂದತೆ ಇರಬೇಕು. ಆಗ ಸೃಜನಶೀಲತೆ ಹರಡುತ್ತದೆ.

ಇದು ಒಂದು ಕುಟುಂಬದ ಅಥವಾ ವ್ಯವಸ್ಥೆಯ ಚಿತ್ರಣವನ್ನು ಕೊಡುತ್ತದೆ. ವ್ಯವಸ್ಥೆಯಲ್ಲಿ ನಂಬಿಕೆ ಎನ್ನುವುದು ಬೇರಿದ್ದಂತೆ. ಅದು ಬಿಗಿಯಾಗಿದಷ್ಟೂ, ಬಲವಾಗಿದ್ದಷ್ಟೂ ವ್ಯವಸ್ಥೆ ಭದ್ರ. ಅಲ್ಲಿ ಒಬ್ಬರಲ್ಲಿ ಮತ್ತೊಬ್ಬರಿಗೆ ಬಲವಾದ ನಂಬಿಕೆ ಇರಬೇಕು. ಒಮ್ಮೆ ಸಂಶಯದ ಗಾಳಿ ಸುಳಿಯಿತೋ, ಕುಟುಂಬ ಅಥವಾ ಯಾವುದೇ ವ್ಯವಸ್ಥೆ ಎಂಬ ಸಸಿ ಕೆಳಗೆ ಬಿದ್ದು ಒಣಗಿ ಹೋಗುತ್ತದೆ. ಅಪನಂಬಿಕೆಯಿಂದ ಹಾಳಾದ ವ್ಯವಸ್ಥೆಗಳ ಉದಾಹರಣೆಗಳು ಕಣ್ಣ ಮುಂದಿವೆ.

ಪುಟ್ಟ ಎಸಳಿಗೆ ಮೇಲೆ ಗಾಳಿಯ ಸರಸವಿದೆ. ಅದೇ ಎಸಳಿ ಸೊಬಗು. ಇದರಂತೆ, ನಂಬಿಕೆಯ ಬೇರಿನ ಬಿಗಿ ಎಷ್ಟು ಮುಖ್ಯವೋ, ವ್ಯವಸ್ಥೆಯ ಸದಸ್ಯರ ಸ್ವತಂತ್ರತೆಯೂ ಅಷ್ಟೇ ಮುಖ್ಯ. ಅವರ ಸ್ವಾತಂತ್ರ್ಯದಲ್ಲಿ ಬಿಗಿ ಮಾಡುತ್ತ ಹೋದರೆ ವ್ಯವಸ್ಥೆಯ ಸೃಜನಶೀಲತೆ ಬತ್ತಿಹೋಗುತ್ತದೆ, ಏಕತಾನತೆ ಬಂದುಬಿಡುತ್ತದೆ. ಸ್ವಾತಂತ್ರ್ಯದ ಸೃಜನಶೀಲತೆ ಸರಸತೆಗೆ ಕಾರಣವಾಗುತ್ತದೆ. ಕಗ್ಗದ ಮಾತು, 'ನಿರ್ಯತ್ನ ಸ್ವತಂತ್ರದಿಂ' ಎನ್ನುವುದು ತುಂಬ ವಿಶೇಷವಾದದ್ದು. ಹೂವು ತನ್ನ ಸುವಾಸನೆಯನ್ನು ಪಸರಿಸಲು ಯಾವ ಪ್ರಯತ್ನವನ್ನೂ ಮಾಡುವುದಿಲ್ಲ. ಅದು ಅನಾಯಾಸವಾಗಿ ಆಗುವಂಥದ್ದು. ಒಬ್ಬ ವ್ಯಕ್ತಿಯೂ ಹಾಗೆ ಅನಾಯಾಸವಾಗಿ ತನ್ನ ಪ್ರತಿಭೆಯನ್ನು ಹರಡುವುದು ಅತ್ಯಂತ ಎತ್ತರದ ಸ್ಥಿತಿ. ಅದು ನಾಲ್ಕನೆಯ ಹಂತ. ಮನುಷ್ಯ ಮೊದಲು ಅರಿವಿಲ್ಲದೆ ಅಸಮರ್ಥನಾಗಿರುತ್ತಾನೆ. (unconsciously incompetent) ನಂತರ ಅವನಿಗೆ ತನಗೆ ಅಸಮರ್ಥತೆ ಇದೆಯೆಂಬ ಅರಿವಾಗುತ್ತದೆ. (consciously incompetent) ಮೂರನೆಯ ಹಂತದಲ್ಲಿ ಆತನಿಗೆ ಸಾಮರ್ಥ್ಯ ಬಂದು, ಸಾಮರ್ಥ್ಯತೆ ಇದೆಯೆಂಬ ಅರಿವೂ ಮೂಡುತ್ತದೆ. (consciously competent) ನಾಲ್ಕನೆಯ ಮತ್ತು ಕೊನೆಯ ಹಂತದಲ್ಲಿ ಮನುಷ್ಯ ತನಗೆ ಅರಿವಿಲ್ಲದೆ ಸಮರ್ಥಶಾಲಿಯಾಗುತ್ತಾನೆ (unconsciously competent). ಆ ಹಂತ ತಲುಪಿದಾಗ, ಯಾವ ಪ್ರಯತ್ನವಿಲ್ಲದೆ ವ್ಯಕ್ತಿತ್ವದ ಪ್ರಭಾವ ಹರಡುತ್ತದೆ. ಈ ಮಾತು ವ್ಯಕ್ತಿಗೆ, ವ್ಯವಸ್ಥೆಗೆ ಅನ್ವಯಿಸುವಂಥದ್ದು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ ಕಮ್ಮರಡಿ — ಶುಕ್ರವಾರ ಜನವರಿ 7, 2022

ಶ್ರೀಪ್ಲವನಾಮ ಸಂವತ್ಸರ ದಕ್ಷಿಣಾಯಣ–ಹೇಮಂತ ಋತು ಧನುರ್ಮಾಸದ 22 ನೇ ದಿನ ತಿಥಿ: (ಪೌಷ ಶುಕ್ಲ) ಪಂಚಮಿ ಗಂ. 11-11 ನಕ್ಷತ್ರ: ಪೂರ್ವಾಭಾದ್ರಾ ಗಂ. 30-20 ಯೋಗ: ವ್ಯತೀಪಾತ ಗಂ. 13-11, ಕರಣ: ಬಾಲವ ಗಂ. 11-11. ರಾಹುಕಾಲ : ಬೆಳಿಗ್ಗೆ 10:30 –12:00 ಸೂರ್ಯೋದಯ : 06-59 ಸೂರ್ಯಾಸ್ತ : 06-14 ಮುಸ್ಲಿಂ ದಿನಾಂಕ : 03 ಜುಮಾದುಸ್ಸಾನಿ ಅದೃಷ್ಟ ಸಂಖ್ಯೆ: 2, 10

ಮೇಷ: ಬಹುದಿನಗಳಿಂದ ಅಂದುಕೊಂಡಿದ್ದ ಕೆಲಸಗಳನ್ನು ಈ ದಿನ ಮಾಡಿ ಮುಗಿಸುವಿರಿ. ಹೊಸ ಹಾದಿಯಲ್ಲಿ ಹೆಜ್ಜೆ ಇಡಲು ಇಂದು ಸುಸಮಯ. ಜನರೊಂದಿಗೆ ಬೆರೆಯುವ ಅಭ್ಯಾಸವನ್ನು ಮಾಡಿಕೊಳ್ಳಿ.

ವೃಷಭ: ಆತ್ಮೀಯರೊಂದಿಗೆ ವ್ಯವಹಾರಗಳ ಕುರಿತು ಚರ್ಚೆಯನ್ನು ನಡೆಸಿ. ಕೆಲ ನಿರ್ಧಾರಗಳನ್ನು ಬದಲಾಯಿಸಿಕೊಳ್ಳುವಿರಿ. ಮೇಲಧಿಕಾರಿಗಳಿಂದ ನೀವು ಅಪೇಕ್ಷಿಸುವ ಸಹಕಾರಗಳು ದೊರೆಯಲಿದೆ.

ಮಿಥುನ: ಬಂಧುಗಳಲ್ಲಿನ ಮಾತಿನ ಚಕಮಕಿ ಮನಸ್ಸಿಗೆ ಕಿರಿಕಿರಿ. ಮರಮಟ್ಟು, ಕೃಷಿ, ಹೈನುಗಾರಿಕೆ ಇತ್ಯಾದಿ ವೃತ್ತಿಗಳಲ್ಲಿರುವವರಿಗೆ ನಿರೀಕ್ಷಿತ ವರಮಾನ ದೊರೆಯಲಿದೆ. ಅವಿವಾಹಿತರಿಗೆ ಮಾಂಗಲ್ಯ ಯೋಗ ಕೂಡಿ ಬಂದೀತು.

ಕರ್ಕಾಟಕ: ಮನರಂಜನಾ ಕಾರ್ಯಕ್ರಮಗಳಲ್ಲಿ ಭಾಗವಹಿಸುವಿರಿ. ತಂದೆ ತಾಯಿಯು ನಿಮ್ಮ ಕಷ್ಟಕಾರ್ಪಣ್ಯಗಳಿಗೆ ನೆರವಾಗಲಿದ್ದಾರೆ. ಸಂಯಮವರಿತು ಕೆಲಸ ಮಾಡುವುದು ಒಳ್ಳೆಯದು. ವಾಹನ ಖರೀದಿ ವಿಚಾರ ಬೇಡ.

ಸಿಂಹ: ಕಾಗದ ಪತ್ರಗಳ ಬರವಣಿಗೆಗಾರರಿಗೆ ಮತ್ತು ಕಂಪ್ಯೂಟರ್ ಕೆಲಸಗಾರರಿಗೆ ತೃಪ್ತಿಕರ ದಿನ. ಕಾರ್ಯರಂಗದಲ್ಲಿ ನಿಮ್ಮ ನಿರ್ಧಾರಗಳಿಗೆ ಹೆಚ್ಚಿನ ಪ್ರಾಮುಖ್ಯತೆ ದೊರೆಯಲಿದೆ. ಶ್ರೀ ವಿಷ್ಣುಸಹಸ್ರಮಾನ ಪಠಣೆ ಮಾಡಿ.

ಕನ್ಯಾ: ಬಂಧುವಿನ ಸಹಾಯದಿಂದಾಗಿ ಶತ್ರುಗಳ ಷಡ್ಯಂತ್ರದಿಂದ ತಪ್ಪಿಸಿಕೊಳ್ಳಬಹುದು ಅಥವಾ ಶತ್ರುಗಳ ವಿರುದ್ಧ ಜಯ ಸಾಧಿಸಬಹುದು. ರಾಜಕೀಯ ವಿಭಾಗದಲ್ಲಿ ಶ್ರಮರಹಿತ ಜಯಸಾಧನೆ ಮನಸ್ಸಿಗೆ ತೃಪ್ತಿತರುವುದು.

ತುಲಾ: ವ್ಯಾವಹಾರಿಕ ಪ್ರಯಾಣದಿಂದ ಆದಾಯದಲ್ಲಿ ಕೊಂಚ ವೃದ್ಧಿ. ವಿದ್ಯಾರ್ಥಿಗಳಿಗೆ ಕಠಿಣ ಸಾಧನೆ ಅಗತ್ಯ. ಮನರಂಜನೆ ಸಾಂಸ್ಕೃತಿಕ ಕಾರ್ಯಕ್ರಮಗಳಿಂದಾಗಿ ಮನಸ್ಸಿಗೆ ಸಂತೋಷ ಉಂಟಾಗುವುದು.

ವೃಶ್ಚಿಕ: ಸರ್ಕಾರಿ ನೌಕರರಿಗೆ ತಮ್ಮ ಉದ್ಯೋಗದಲ್ಲಿ ಜಿಗುಪ್ಸೆ ಬರುವಂತೆ ಆಗುವುದು. ಕೆಲಸದ ಹೊರೆ ಹೆಚ್ಚಾಗಿ ಮಡದಿ ಮಕ್ಕಳಿಂದ ಸಹಕಾರ ಯಾಚಿಸಬೇಕಾಗುವುದು. ರಕ್ತದೊತ್ತಡ ವ್ಯಾತ್ಯಾಸವಾಗುವ ಸಾಧ್ಯತೆ ಇದೆ ಎಚ್ಚರವಿರಿ.

ಧನು: ದಂತ ವೈದ್ಯರಿಗೆ ಮತ್ತು ಶಸ್ತ್ರ ಚಿಕಿತ್ಸಕರಿಗೆ ವೃತ್ತಿಯಲ್ಲಿ ಅತೀವವಾದ ಗಮನವಿರುವುದು ಮುಖ್ಯವಾಗುತ್ತದೆ. ವಾಣಿಜ್ಯ ಬೆಳೆಗಾರರಿಗೆ ಉತ್ತಮ ಬೆಲೆ ದೊರಕಲಿದೆ. ಸಾಲದ ಬಾಕಿ ಬಾಬ್ತು ಹಿಂದಿರುಗಿಸುವರು.

ಮಕರ: ಉದ್ಯೋಗದಲ್ಲಿ ಬದಲಾವಣೆಗೆ ಪೂರಕವಾದ ಸನ್ನಿವೇಶ ಕಂಡು ಬರುತ್ತದೆ. ವೆಂಕಟೇಶನ ಒಲುಮೆಯಿಂದ ಕಷ್ಟಗಳು ಪರಿಹಾರವಾಗುವುದು. ವಿದ್ಯುತ್ ಕಂಟ್ರಾಕ್ಟ್‌ದಾರರಿಗೆ ಸರ್ಕಾರಿ ಕಾಮಗಾರಿಗಳು ದೊರೆಯಲಿವೆ.

ಕುಂಭ: ಹಲವು ದಿನಗಳಿಂದ ಮನೆಯವರಲ್ಲಿ ಕಾಣಿಸಿಕೊಂಡಿದ್ದ ಇರಿಸು ಮುರಿಸುಗಳು ಕ್ರಮೇಣ ಸರಿಹೋಗಲಿದೆ. ಅನಿರೀಕ್ಷಿತ ಪ್ರಯಾಣಗಳು ಕೆಲ ಮುಖ್ಯವ್ಯಕ್ತಿಗಳ ಪರಿಚಯಕ್ಕೆ ಕಾರಣವಾಗಲಿದೆ.

ಮೀನ: ಸಹೋದ್ಯೋಗಿಗಳೊಡನೆ ಅನಾವಶ್ಯಕ ವಾದ-ವಿವಾದಗಳು ನಡೆಯದಂತೆ ವರ್ತಿಸಿ. ಆರ್ಥಿಕ ರಂಗದಲ್ಲಿ ನೂತನವಾಗಿ ಹೂಡಿಕೆ ಮಾಡುವುದು ಸದ್ಯಕ್ಕೆ ಉತ್ತಮವಲ್ಲ.

ಪದಬಂಧ 4831 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ವಿವರವಾಗಿ ಹೇಳುವಿಕೆ (4)
3.ಒಪ್ಪಂದದ ಪತ್ರ (4)
5.ಬಿಸಿಲಲ್ಲಿ ಡೊಗರು ಕಾಣುತ್ತಿದೆಯೇ? (2)
6.ಕಣ್ಣಿಗೆ ಗೋಚರಿಸುವುದು (4)
8.ದವಾಖಾನೆಯಲ್ಲಿ ಆದ ಚರ್ಚೆಯೇ ತಿರುವು ಮುರುವು! (2)
9.ಮಿಡಿಗೂ ಹಣ್ಣಿಗೂ ನಡುವಿನ ಸ್ಥಿತಿ (2)
10.ಸತ್ವರಹಿತವಾದುದು (4)
12.ಒಂದು ಸಲ ನುಂಗುವಷ್ಟು ಆಹಾರ (2)
15.ಕಬ್ಬಿನಲ್ಲಿ ಒಂದು ಜಾತಿ (4)
16.ಸುಗಂಧ ಲೇಪನವಿದು (4)

ಮೇಲಿಂದ ಕೆಳಕ್ಕೆ

1.ಇಂದಿಗೆ ಹಿಂದಿನ ದಿನ (2)
2.ತೆಳುವಾದ ಸೀರೆ (3)
3.ಈ ತರ ಕಾಣುತ್ತಿರುವ ಏರ್ಪಾಟು! (4)
4.ಹುಲ್ಲು ಮುಂತಾದವುಗಳ ರಾಶಿ (2)
5.ಡೊಗರು ಹತ್ತಿರವಿರುವ ಚಿನ್ನದ ಬಳೆ (4)
6.ಚೀನದಲ್ಲಿ ಕಾಣುತ್ತಿರುವುದೆಲ್ಲಾ ಹಳೆಯ ಕಾಲದ್ದು! (3)
7.ಇನ್ನೊಬ್ಬರ ಪರವಾಗಿ ವಾದಿಸುವುದು (4)
11.ಕೆಟ್ಟ ಅಭ್ಯಾಸ (4)
12.ಸುರಂಗದ ಹತ್ತಿರವಿರುವ ಸೆರೆಮನೆ (3)
13.ದುಸ್ತರದಲ್ಲಿನ ಮಡಿಕೆಯನ್ನು ಹುಡುಕಿ! (2)
14.ಮದುವೆಯಿಂದ ಸಂಬಂಧ ಬೆಳೆಸಿದವನು! (2)



4830ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಉಚ್ಛ್ವಾಸ 2.ಹಗರಣ 4.ಕಡುಕೋಪ 6.ಸಂತೋಷ 7.ಣಬಾ 9.ಶುಭದ 11.ವರ 13.ಸಿಂಬಳ 14.ನಳಪಾಕ 16.ತಾಕಲಾಟ 17.ಹಕ್ಕಳೆ
ಮೇಲಿಂದ ಕೆಳಕ್ಕೆ: 1.ಉಪಕರಣ 2.ಹಗ್ಗ 3.ರಜತೋತ್ಸವ 5.ಪರಶು 8.ಬಾಲಬಡುಕ 10.ದರ್ಶನ 12.ರಣಕಹಳೆ 15.ಹೂಟ

ಸುಡೊಕು 5217

	5			6	8	1		3
9		6					7	
	8		7			2		6
6		1		5		7		9
			8	9	6			
8				7		5		2
3		9		1			2	
			6		7	9		4
7		8		2			1	

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5216 ಸುಡೊಕು

1	5	9	3	2	7	6	8	4
4	6	7	1	8	9	3	5	2
3	8	2	6	4	5	9	1	7
2	9	3	5	1	4	7	6	8
6	7	4	9	3	8	5	2	1
5	1	8	7	6	2	4	9	3
8	2	5	4	9	3	1	7	6
7	3	1	2	5	6	8	4	9
9	4	6	8	7	1	2	3	5

ಬಹು ಮಾಧ್ಯಮ ಪ್ರಜಾವಾಣಿ LIVE
www.prajavani.net
Prajavani.net | Prajavani | Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ಪ್ರಜಾವಾಣಿ ಕನ್ನಡ ಧ್ವನಿ
ಪಾಡ್‌ಕಾಸ್ಟ್: ಪ್ರಚಲಿತ: ಬೆಳಿಗ್ಗೆ 9,
ಸಂಪಾದಕೀಯ: ಬೆಳಿಗ್ಗೆ 9.30,
ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8
ನಾಳೆ
ಮುಖಾಮುಖಿ
ಸೆಲೆಬ್ರಿಟಿ LIVE
75ರ ವಸಂತದಲ್ಲಿ
ರಮೇಶ್ ಭಟ್
ತೆರೆ– ಮರೆಯ ಭಾವ ಬದುಕು
ಬೆಳಿಗ್ಗೆ 11 ರಿಂದ

ಅನಿಲ ಸೋರಿಕೆಯಿಂದ 6 ಮಂದಿ ಸಾವು

ಅಹಮದಾಬಾದ್: ಗುಜರಾತ್‌ನ ಸೂರತ್‌ನಲ್ಲಿ ಗುರುವಾರ ಬೆಳಿಗ್ಗೆ ಟ್ಯಾಂಕರ್‌ವೊಂದರಿಂದ ಅನಿಲ ಸೋರಿಕೆಯಾಗಿ ಆರು ಮಂದಿ ಮೃತಪಟ್ಟಿದ್ದು, 22 ಮಂದಿ ಅಸ್ವಸ್ಥರಾಗಿದ್ದಾರೆ.

ಚುನಾವಣಾ ವೆಚ್ಚ ಮಿತಿ ಹೆಚ್ಚಳ

ನವದೆಹಲಿ (ಪಿಟಿಐ): ಅಭ್ಯರ್ಥಿಗಳ ಚುನಾವಣಾ ವೆಚ್ಚದ ಮಿತಿಯನ್ನು ಹೆಚ್ಚಿಸಲಾಗಿದೆ ಎಂದು ಚುನಾವಣಾ ಆಯೋಗ ಗುರುವಾರ ಹೇಳಿದೆ.

ಈ ಸಂಬಂಧ ಕಾನೂನು ಸಚಿವಾಲಯ ಹೊರಡಿಸಿರುವ ಅಧಿಸೂಚನೆಯನ್ನು ಉಲ್ಲೇಖಿಸಿ ಆಯೋಗ ಮಾಹಿತಿ ನೀಡಿದೆ.

ಲೋಕಸಭೆ ಚುನಾವಣೆಯ ಅಭ್ಯರ್ಥಿಗೆ ಈ ಮೊದಲು ನಿಗದಿಪಡಿಸಿದ್ದ ₹ 70 ಲಕ್ಷ ವೆಚ್ಚದ ಮಿತಿಯನ್ನು ₹ 95 ಲಕ್ಷಕ್ಕೆ ಹೆಚ್ಚಿಸಲಾಗಿದೆ. ವಿಧಾನಸಭೆ ಚುನಾವಣೆಯ ಅಭ್ಯರ್ಥಿಯ ವೆಚ್ಚದ ಮಿತಿಯನ್ನು ₹ 28 ಲಕ್ಷದಿಂದ ₹ 40 ಲಕ್ಷಕ್ಕೆ ಹೆಚ್ಚಿಸಲಾಗಿದೆ.

ಚುನಾವಣಾ ಸಮಿತಿ ಮಾಡಿದ್ದ ಶಿಫಾರಸಿನ ಅನ್ವಯ ಈ ಸಂಬಂಧ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಉತ್ತರ ಪ್ರದೇಶ ವಿಧಾನಸಭಾ ಚುನಾವಣೆ: ಬಿಜೆಪಿ– ಎಸ್‌ಪಿ ನಡುವೆ ನೇರ ಹಣಾಹಣಿ

ಪೂರ್ವಾಂಚಲ ಪ್ರದೇಶ: ಕಠಿಣ ಸ್ಪರ್ಧೆ

ಪ್ರಜಾವಾಣಿ ವಾರ್ತೆ

ಲಖನೌ: ಜಾತಿಯೇ ನಿರ್ಣಾಯಕ ಪಾತ್ರವಹಿಸುವ ಉತ್ತರ ಪ್ರದೇಶದ ಪೂರ್ವಾಂಚಲ ಪ್ರದೇಶದಲ್ಲಿ ಈ ಬಾರಿಯ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಮತ್ತು ಸಮಾಜವಾದಿ ಪಕ್ಷದ (ಎಸ್‌ಪಿ) ನಡುವೆ ಅತ್ಯಂತ ಕಠಿಣ ಸ್ಪರ್ಧೆ ಏರ್ಪಡುವ ಸೂಚನೆಗಳಿವೆ. ಎರಡೂ ಪಕ್ಷಗಳು ತಮ್ಮ ಬೆಂಬಲ ನೆಲೆಯನ್ನು ವಿಸ್ತರಿಸಿಕೊಳ್ಳಲು ಯತ್ನಿಸುತ್ತಿವೆ.

ಇಲ್ಲಿ ಒಟ್ಟು 164 ಸ್ಥಾನಗಳಿವೆ. 2017ರ ವಿಧಾನಸಭೆ ಚುನಾವಣೆಯಲ್ಲಿ, ಬಿಜೆಪಿ ತನ್ನ ಮೈತ್ರಿ ಪಕ್ಷಗಳಾದ ಅಪ್ನಾ ದಳ (ಎಡಿ) ಮತ್ತು ಸುಹೇಲ್‌ದೇವ್ ಭಾರತೀಯ ಸಮಾಜ ಪಾರ್ಟಿ (ಎಸ್‌ಬಿಎಸ್‌ಪಿ) ಜೊತೆ ಸೇರಿ 115 ಸ್ಥಾನಗಳನ್ನು ಗೆದ್ದಿತ್ತು. ಎಸ್‌ಪಿ 17 ಮತ್ತು ಬಿಎಸ್‌ಪಿ 14 ಸ್ಥಾನಗಳು ಮತ್ತು ಕಾಂಗ್ರೆಸ್ ಎರಡು ಸ್ಥಾನಗಳನ್ನು ಗೆದ್ದಿದ್ದವು. ಇತರರು 16 ಸೀಟುಗಳನ್ನು ಗೆದ್ದಿದ್ದರು.

ಆದರೆ ಈ ಬಾರಿ ಪರಿಸ್ಥಿತಿ ಸಾಕಷ್ಟು ಬದಲಾಗಿದೆ. 2017ರಲ್ಲಿ ಬಿಜೆಪಿಯ ಮಿತ್ರ ಪಕ್ಷವಾಗಿದ್ದ ಎಸ್‌ಬಿಎಸ್‌ಪಿ ಈ ಬಾರಿ ಎಸ್‌ಪಿ ಜೊತೆ ಕೈಜೋಡಿಸಿದೆ. ಈ ಪಕ್ಷವು ರಾಜ್‌ಭರ್ ಸಮುದಾಯದ ಬೆಂಬಲ ಹೊಂದಿದೆ. ವಾರಾಣಸಿ, ಆಜಂಗಡ, ಜೌನ್‌ಪುರ, ಮೌ, ಬಲ್ಲಿಯ ಮತ್ತು ಗಾಜಿಪುರ ಸೇರಿ ಪೂರ್ವಾಂಚಲ ಪ್ರದೇಶದ ಹಲವಾರು ಜಿಲ್ಲೆಗಳಲ್ಲಿ ಈ ಸಮುದಾಯದ ಮತದಾರರು ಶೇ 12 ರಿಂದ 23ರಷ್ಟಿದ್ದಾರೆ. ಅದೇ ರೀತಿ, ಜನವಾದಿ ಪಕ್ಷಕ್ಕೆ (ಸಮಾಜವಾದಿ) ನೋನಿಯ ಸಮುದಾಯದ ಬೆಂಬಲ ಇದೆ. ಈ ಪಕ್ಷವೂ ಈ ಬಾರಿ ಎಸ್‌ಪಿ ಜೊತೆ ಮೈತ್ರಿ ಮಾಡಿಕೊಂಡಿದೆ. 10ಕ್ಕೂ ಹೆಚ್ಚು ಸ್ಥಾನಗಳಲ್ಲಿ ಈ ಸಮುದಾಯ ತನ್ನ ಪ್ರಭಾವ ಹೊಂದಿದೆ. ತನ್ನ ಎಂದಿನ ಮತದಾರರಾದ ಯಾದವರು ಮತ್ತು ಮುಸ್ಲಿಮರ ಮತಗಳ ಜೊತೆಗೆ ರಾಜ್‌ಭರ್ ಮತ್ತು ನೋನಿಯ ಸಮುದಾಯಗಳ ಮತಗಳನ್ನು ತನ್ನತ್ತ ಸೆಳೆಯುವಲ್ಲಿ ಎಸ್‌ಪಿ ಸಫಲವಾದರೆ ಈ ಭಾಗದಲ್ಲಿ ಬಿಜೆಪಿಗೆ ಮತ ಗಳಿಸುವುದು ಕಷ್ಟವಾಗುತ್ತದೆ ಎಂದು ರಾಜಕೀಯ ವಿಶ್ಲೇಷಕರು ಹೇಳಿದ್ದಾರೆ.

ಬಿಜೆಪಿ ಮತ್ತೆ ಅಧಿಕಾರಕ್ಕೆ ಬರಬೇಕಿದ್ದರೆ, 2017ರ ವಿಧಾನಸಭೆ ಚುನಾವಣೆಯಲ್ಲಿ ಉತ್ತರ ಪ್ರದೇಶದ ಪೂರ್ವ ಭಾಗದಲ್ಲಿ ನೀಡಿದ್ದಂಥ ಪ್ರದರ್ಶನವನ್ನೇ ಈ ಬಾರಿಯೂ ಪುನರಾವರ್ತಿಸಬೇಕು. ಏಕೆಂದರೆ, ಪಶ್ಚಿಮ ಭಾಗದಲ್ಲಿ ಜಾಟ್ ಸಮುದಾಯದ ಅಸಹನೆಗೆ ಬಿಜೆಪಿ ಗುರಿಯಾಗಿದೆ. ಕೇಂದ್ರ ಸರ್ಕಾರದ ಮೂರು ಕೃಷಿ ಕಾನೂನುಗಳನ್ನು ವಿರೋಧಿಸಿ ಹೋರಾಟ ನಡೆಸಿದ ರೈತರಲ್ಲಿ ಈ ಭಾಗದ ಜನರೂ ಇದ್ದರು.

ಹಾಗಾಗಿ, ಪೂರ್ವಾಂಚಲ ಪ್ರದೇಶದಲ್ಲಿ ತನ್ನ ಹಿಡಿತ ಸಡಿಲವಾಗದಂತೆ ಬಿಜೆಪಿ ಶ್ರವಹಿಸುತ್ತಿದೆ. ಅದಕ್ಕಾಗಿ, ಸಾರ್ವಜನಿಕ ಸಭೆಗಳಲ್ಲಿ ಹಿಂದುತ್ವ ಕಾರ್ಯಸೂಚಿಗೆ ಹೆಚ್ಚಿನ ಒತ್ತು ನೀಡುತ್ತಿದೆ. ಜೊತೆಗೆ, ಹೊಸದಾಗಿ ನಿರ್ಮಿಸಲಾಗಿರುವ ಎಕ್ಸ್‌ಪ್ರೆಸ್‌ವೇಯನ್ನೂ ಚುನಾವಣಾ ಪ್ರಚಾರಕ್ಕಾಗಿ ಬಳಸುತ್ತಿದೆ. ಹಿಂದೂ ಪುಣ್ಯಕ್ಷೇತ್ರಗಳಾದ ಅಯೋಧ್ಯೆ, ಪ್ರಯಾಗ್‌ರಾಜ್, ಮಿರ್ಜಾಪುರ ಮತ್ತು ವಾರಾಣಸಿಯಲ್ಲಿ ಅಭಿವೃದ್ಧಿ ಆಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ, ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ತಮ್ಮ ಭಾಷಣಗಳಲ್ಲಿ ಹೇಳುತ್ತಿದ್ದಾರೆ.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ
ಪರಸ್ಪರ ಅಂತರ ಕಾಯ್ದುಕೊಳ್ಳಿ

ಪ್ರಜಾ ಮತ
ಜನತಂತ್ರದ ಹಬ್ಬ 2022

ಆರೋಗ್ಯ ಕಾರ್ಯದರ್ಶಿ ಜತೆ ಆಯೋಗದ ಚರ್ಚೆ

ನವದೆಹಲಿ (ಪಿಟಿಐ): ಐದು ರಾಜ್ಯಗಳ ವಿಧಾನಸಭೆ ಚುನಾವಣೆಗಳ ಹಿನ್ನೆಲೆಯಲ್ಲಿ ಚುನಾವಣಾ ಆಯೋಗವು ಕೋವಿಡ್ ಪರಿಸ್ಥಿತಿ ಕುರಿತು ಕೇಂದ್ರ ಆರೋಗ್ಯ ಕಾರ್ಯದರ್ಶಿ ಮತ್ತು ಆರೋಗ್ಯ ತಜ್ಞರ ಜೊತೆ ಗುರುವಾರ ಪರಿಶೀಲನಾ ಸಭೆ ನಡೆಸಿತು.

ಈ ವೇಳೆ, ಮತದಾನದ ವೇಳೆ ತೆಗೆದುಕೊಳ್ಳಬಹುದಾದ ಸುರಕ್ಷತಾ ಕ್ರಮಗಳ ಬಗ್ಗೆ ಚುನಾವಣಾ ಆಯೋಗ ಮಾಹಿತಿ ಪಡೆದಿದೆ. ಜೊತೆಗೆ, ಚುನಾವಣೆ ನಡೆಯುವ ಐದೂ ರಾಜ್ಯಗಳಲ್ಲಿ ಅರ್ಹರಿಗೆ ಲಸಿಕೆ ನೀಡಬೇಕಿರುವ ಅಗತ್ಯದ ಕುರಿತು ಒತ್ತಿ ಹೇಳಿದೆ.

ಈ ಸಭೆಯಲ್ಲಿ ಆರೋಗ್ಯ ಕಾರ್ಯದರ್ಶಿ ರಾಜೇಶ್ ಭೂಷಣ್ ಅವರ ಜೊತೆ ಏಮ್ಸ್ ನಿರ್ದೇಶಕರಾದ ರಣದೀಪ್ ಗುಲೇರಿಯ ಮತ್ತು ಐಸಿಎಂಆರ್ ಮಹಾ ನಿರ್ದೇಶಕ ಬಲರಾಮ್ ಭಾರ್ಗವ ಅವರೂ ಪಾಲ್ಗೊಂಡಿದ್ದರು ಎಂದು ಮೂಲಗಳು ತಿಳಿಸಿವೆ.

ಕೋವಿಡ್ ಪರಿಸ್ಥಿತಿ ಕುರಿತು ಚುನಾವಣಾ ಆಯೋಗ ಸಂಪೂರ್ಣ ಪರಿಶೀಲನೆ ನಡೆಸಿದೆ. ಚುನಾವಣಾ ಪ್ರಚಾರ ಮತ್ತು ಮತದಾನದ ವೇಳೆ ಸುರಕ್ಷತಾ ಕ್ರಮಗಳನ್ನು ತೆಗೆದುಕೊಳ್ಳುವ ಕುರಿತು ಆರೋಗ್ಯ ಕ್ಷೇತ್ರದ ತಜ್ಞರಿಂದಲೂ ಸಲಹೆಗಳನ್ನು ಆಯೋಗವು ಪಡೆದಿದೆ ಎಂದು ಹೇಳಲಾಗಿದೆ.

ಕೇಂದ್ರ ಗೃಹ ಕಾರ್ಯದರ್ಶಿ ಅಜಯ್ ಕುಮಾರ್ ಭಲ್ಲಾ ಅವರ ಜೊತೆ ಚರ್ಚೆ ಪ್ರತ್ಯೇಕ ಸಭೆ ನಡೆಸಿದ ಆಯೋಗವು, ಚುನಾವಣೆ ನಡೆಯಲಿರುವ ಐದೂ ರಾಜ್ಯಗಳಲ್ಲಿನ ಕಾನೂನು ಮತ್ತು ಸುವ್ಯವಸ್ಥೆಯ ಮಾಹಿತಿ ಪಡೆಯಿತು.

ಚುನಾವಣೆ ನಡೆಯಲಿರುವ ಐದೂ ರಾಜ್ಯಗಳಲ್ಲಿ ಲಸಿಕಾ ಅಭಿಯಾನವನ್ನು ಚುರುಕುಗೊಳಿಸುವಂತೆ ಡಿ.27ರಂದು ನಡೆದ ಸಭೆಯಲ್ಲಿ ಚುನಾವಣಾ ಆಯೋಗವು ರಾಜೇಶ್ ಭೂಷಣ್ ಅವರಿಗೆ ಹೇಳಿತ್ತು.

‘ವರ್ಚುವಲ್ ರ‍್ಯಾಲಿ, ಆನ್‌ಲೈನ್ ಮತದಾನ ಸಾಧ್ಯವೇ?’

ನೈನಿತಾಲ್ (ಪಿಟಿಐ): ಉತ್ತರಾಖಂಡ ವಿಧಾನಸಭೆ ಚುನಾವಣೆಯ ರ‍್ಯಾಲಿಗಳನ್ನು ವರ್ಚುವಲ್ ಆಗಿ ನಡೆಸಲು ಮತ್ತು ಮತದಾನವನ್ನು ಆನ್‌ಲೈನ್ ಮೂಲಕ ನಡೆಸಲು ಸಾಧ್ಯವೇ ಎಂದು ಉತ್ತರಾಖಂಡ ಹೈಕೋರ್ಟ್ ಚುನಾವಣಾ ಆಯೋಗವನ್ನು ಕೇಳಿದೆ.

ಕೋವಿಡ್ ಪ್ರಕರಣ ಏರಿಕೆ ಕಂಡುಬರುತ್ತಿರುವ ಕಾರಣ ವಿಧಾನಸಭೆ ಚುನಾವಣೆಯನ್ನು ಮುಂದೂಡುವಂತೆ ಸಲ್ಲಿಸಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆ ವೇಳೆ, ಮುಖ್ಯ ನ್ಯಾಯಮೂರ್ತಿ ಸಂಜಯ್ ಕುಮಾರ್ ಮಿಶ್ರಾ ಮತ್ತು ನ್ಯಾಯಮೂರ್ತಿ ಎನ್.ಎಸ್. ಧನಿಕ್ ಅವರಿದ್ದ ಪೀಠವು ಆಯೋಗಕ್ಕೆ ಈ ಕುರಿತು ಪ್ರಶ್ನಿಸಿದೆ.

ಚುನಾವಣಾ ರ‍್ಯಾಲಿಗಳಿಗೆ ಪರ್ಯಾಯ ಕಂಡುಕೊಳ್ಳುವ ಅಥವಾ ರದ್ದುಗೊಳಿಸುವಂತೆ ಕೋರಿ ಸಲ್ಲಿಸಲಾಗಿದ್ದ ಅರ್ಜಿ ಕೋರ್ಟ್‌ನಲ್ಲಿ ಬಾಕಿ ಇರುವಂತೆಯೇ ಉತ್ತರಾಖಂಡದಲ್ಲಿ ಚುನಾವಣಾ ರ‍್ಯಾಲಿಗಳನ್ನು ನಡೆಸಲಾಗುತ್ತಿದೆ ಎಂದು ಈ ಅರ್ಜಿಯಲ್ಲಿ ಹೇಳಲಾಗಿದೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.



ವಿಧಾನ ಪರಿಷತ್‌ಗೆ ಸ್ಥಳೀಯ ಸಂಸ್ಥೆಗಳಿಂದ ನೂತನವಾಗಿ ಆಯ್ಕೆಯಾದ ಸದಸ್ಯರಿಗೆ ಗುರುವಾರ ಪ್ರಮಾಣವಚನ ಸಮಾರಂಭ ನಡೆಯಿತು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಇದ್ದರು –ಪ್ರಜಾವಾಣಿ ಚಿತ್ರ

ವಿಧಾನ ಪರಿಷತ್ ನೂತನ ಸದಸ್ಯರ ಪ್ರಮಾಣ ವಚನ

‘ಶಕ್ತಿ ಕೇಂದ್ರ’ದಲ್ಲೇ ನಿಯಮ ಉಲ್ಲಂಘನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವ ಕಾರಣಕ್ಕೆ ಕಠಿಣ ಮಾರ್ಗಸೂಚಿ ಹೊರಡಿಸಿರುವ ಬೆನ್ನಲ್ಲೆ, ಆಡಳಿತ ಶಕ್ತಿ ಕೇಂದ್ರ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಆ ಎಲ್ಲ ನಿಯಮಗಳು ಉಲ್ಲಂಘನೆಯಾದವು. ಅದೂ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ವಿಧಾನ ಪರಿಷತ್ ಸಭಾಪತಿ ಬಸವರಾಜ ಬೊಮ್ಮಾಯಿ ಸಮ್ಮುಖದಲ್ಲಿ!

ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್‌ಗೆ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಆಯ್ಕೆಯಾದ ನೂತನ 25 ಸದಸ್ಯರಿಗೆ ಗುರುವಾರ ಪ್ರಮಾಣ ವಚನ ಸ್ವೀಕಾರ ಕಾರ್ಯಕ್ರಮ ಆಯೋಜಿಸಲಾಗಿತ್ತು. ಸಮಾರಂಭಕ್ಕೆ ಅನಿರೀಕ್ಷಿತ ಸಂಖ್ಯೆಯಲ್ಲಿ ನೂತನ ಸದಸ್ಯರ ಬೆಂಬಲಿಗರು, ಅಭಿಮಾನಿಗಳು, ಕುಟುಂಬದವರು ಬಂದಿದ್ದರು. ಅವರನ್ನು ನಿಯಂತ್ರಿಸಲು ಪೊಲೀಸರು ಹರಸಾಹಸಪಟ್ಟರು. ಎಲ್ಲರೂ ಸಭಾಂಗಣದ ಒಳಗೆ ನುಗ್ಗಿದ್ದರಿಂದ ಭದ್ರತಾ ಸಿಬ್ಬಂದಿ ಅಸಹಾಯಕರಾದರು.

ಅಂತರ ಮರೆತು, ಮಾಸ್ಕ್ ಇಲ್ಲದೆ ನೂತನ ಸದಸ್ಯರಿಗೆ ಶುಭ ಕೋರಲು ಅವರ ಅಭಿಮಾನಿಗಳು ಧಾವಿಸಿದ್ದರಿಂದ ನೂಕುನುಗ್ಗಲು ಉಂಟಾಯಿತು. ಮುಖ್ಯಮಂತ್ರಿ ಮತ್ತು ಸಭಾಪತಿ ಜೊತೆ ಫೋಟೊ ತೆಗೆಸಿಕೊಳ್ಳಲು ಸದಸ್ಯರು, ಅವರ ಕುಟುಂಬದವರು ಅಕ್ಷರಶಃ ಮುಗಿಬಿದ್ದರು. ವಿಧಾನಸೌಧ, ವಿಕಾಸೌಧಕ್ಕೆ ಸಾರ್ವಜನಿಕರ ಪ್ರವೇಶ ನಿರ್ಬಂಧ ವಿಧಿಸಿದ್ದರೂ ಸಚಿವರ ಕಚೇರಿಗಳು ಮತ್ತು ಕಾರಿಡಾರ್‌ಗಳಲ್ಲಿ ಜನರ ದಂಡು ಕಾಣಿಸಿತು. ಮಾಸ್ಕ್ ಧರಿಸುವಂತೆ ಉದ್ಘೋಷಕರು ನಿರಂತರವಾಗಿ ಕರೆ ಕೊಡುತ್ತಿದ್ದರೂ ಅಲ್ಲಿದ್ದವರು ಆ ಸಂದೇಶ ಕಿವಿ ಮೇಲೆ ಹಾಕಿಕೊಂಡಂತೆ ಕಾಣಿಸಲಿಲ್ಲ. ಇದು ಇನ್ನಷ್ಟು ನಿಯಮ ಉಲ್ಲಂಘನೆಗೂ ಕಾರಣವಾಯಿತು.

20 ಸದಸ್ಯರಿಂದ ಪ್ರಮಾಣ ವಚನ: ವಿಧಾನಪರಿಷತ್‌ಗೆ ಆಯ್ಕೆಯಾದ 25 ಸದಸ್ಯರ ಪೈಕಿ 20 ಮಂದಿ ಪ್ರಮಾಣ ವಚನ ಸ್ವೀಕರಿಸಿದರು. ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಸಂಸದ ಪ್ರತಾಪ್ ಸಿಂಹ ಸೇರಿ ಹಲವು ನಾಯಕರು ಪಾಲ್ಗೊಂಡು ನೂತನ ಸದಸ್ಯರಿಗೆ ಶುಭಕೋರಿದರು. ನೂತನ ಸದಸ್ಯರಾದ ಬಿ.ಜಿ. ಪಾಟೀಲ, ಸಲೀಂ ಅಹ್ಮದ್, ಲಖನ್ ಜಾರಕಿಹೊಳಿ, ಗಣಪತಿ ಉಳ್ವೇಕರ್, ಎಂ.ಕೆ. ಪ್ರಾಣೇಶ್ ದೇವರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದರೆ, ಪ್ರದೀಪ ಶೆಟ್ಟರ್, ಕೆ.ಎಸ್. ನವೀನ್, ಡಿ.ಎಸ್. ಅರುಣ್, ದಿನೇಶ್ ಗೂಳಿಗೌಡ, ಎಚ್.ಎಸ್. ಗೋಪಿನಾಥ್ ಮತ್ತು ಡಾ.ಡಿ. ತಿಮ್ಮಯ್ಯ ಅವರು ಭಗವಂತನ ಹೆಸರಿನಲ್ಲಿ ಪ್ರಮಾಣವಚನ ಸ್ವೀಕರಿಸಿದರು.

ವಿ.ಎಸ್.ಆಚಾರ್ಯ ಹೆಸರಲ್ಲಿ ಕೋಟ ಪ್ರಮಾಣ: ಚನ್ನರಾಜ ಹಟ್ಟಿಹೊಳಿ ಅವರು ವೀರಭದ್ರೇಶ್ವರ ಮತ್ತು ಬಸವೇಶ್ವರ, ಶರಣಗೌಡ ಪಾಟೀಲ ಬಯ್ಯಾಪುರ ಭಗವಂತ ಮತ್ತು ತಂದೆ-ತಾಯಿ, ಕೋಟ ಶ್ರೀನಿವಾಸ ಪೂಜಾರಿ ಅವರು ಭಗವಂತ ಮತ್ತು ವಿ.ಎಸ್. ಆಚಾರ್ಯ, ರಾಘವೇಂದ್ರ ರಾಜಣ್ಣ ಅವರು ಭಗವಂತ ಮತ್ತು ರೈತರು ಹಾಗೂ ಸಿ.ಎನ್. ಮಂಜೇಗೌಡ ತಾಯಿ ಚಾಮುಂಡೇಶ್ವರಿ ಹೆಸರಿನಲ್ಲಿ ಪ್ರಮಾಣವಚನ ಸ್ವೀಕರಿಸಿದ್ದು ವಿಶೇಷವಾಗಿತ್ತು. ಸುಜಾ ಕುಶಾಲಪ್ಪ ಕೊಡಗು ಧಿರಿಸಿನಲ್ಲಿ ಬಂದಿದ್ದರು. ಮೇಕೆದಾಟು ಜಟಾಪಟಿ ಸಂದರ್ಭದಲ್ಲಿಯೇ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ಡಿ.ಕೆ. ಶಿವಕುಮಾರ್ ಹಸ್ತಲಾಘವ ಮಾಡಿದ್ದು, ರಾಮನಗರ ಪ್ರಕರಣದಲ್ಲಿ ಎದೆಯುಬ್ಬಿಸಿ ನುಗ್ಗಿದ್ದ ಪರಿಷತ್ ನೂತನ ಸದಸ್ಯ ರವಿ ಅವರನ್ನುಮುಖ್ಯಮಂತ್ರಿ ಕಿಚಾಯಿಸಿದ ಪ್ರಸಂಗವೂ ನಡೆಯಿತು.

ಸೂರಜ್ ರೇವಣ್ಣ ಗೈರು: ಐವರು ಸದಸ್ಯರು ಪ್ರಮಾಣವಚನ ಸ್ವೀಕಾರ ಸಮಾರಂಭಕ್ಕೆ ಗೈರಾಗಿದ್ದರು. ಈ ಪೈಕಿ, ಜೆಡಿಎಸ್ ಶಾಸಕ ಎಚ್.ಡಿ.ರೇವಣ್ಣ ಅವರ ಸೂಚನೆ ಮೇರೆಗೆ ಅವರ ಪುತ್ರ ಸೂರಜ್ ಪ್ರಮಾಣ ವಚನ ಕಾರ್ಯಕ್ರಮದಿಂದ ದೂರ ಉಳಿದರೆಂದು ತಿಳಿದುಬಂದಿದೆ. ಒಳ್ಳೆಯ ದಿನ ಪ್ರಮಾಣ ವಚನ ಸ್ವೀಕರಿಸಬೇಕೆಂಬ ಸಲಹೆಯಂತೆ, ಮುಂದಿನ ವಾರ ಪ್ರಮಾಣ ವಚನ ಸ್ವೀಕರಿಸುವರೆಂದು ಜೆಡಿಎಸ್ ಮೂಲಗಳು ತಿಳಿಸಿವೆ.

‘ನಮಗೆ ಮಾತ್ರ ಕಾನೂನು ಅನ್ವಯವೇ?’

ಬೆಂಗಳೂರು: ‘ವಿಧಾನಸೌಧದಲ್ಲಿ ಗುರುವಾರ ನಡೆದ ವಿಧಾನಪರಿಷತ್ ನೂತನ ಸದಸ್ಯರ ಪ್ರಮಾಣವಚನ ಕಾರ್ಯಕ್ರಮದಲ್ಲಿ ಎಷ್ಟು ಸಾವಿರ ಜನ ಇದ್ದರು’ ಎಂದು ಡಿ.ಕೆ.ಶಿವಕುಮಾರ್ ಪ್ರಶ್ನಿಸಿದ್ದಾರೆ.

‘ಡಿ.ಕೆ.ಶಿವಕುಮಾರ್ ಅವರ ನಾಟಕದ ಹೇಳಿಕೆಗಳಿಗೆ ನಾನು ಪ್ರತಿಕ್ರಿಯೆ ನೀಡುವುದಿಲ್ಲ’ ಎಂಬ ಮುಖ್ಯಮಂತ್ರಿ ಹೇಳಿಕೆಗೆ ಸುದ್ದಿಗೋಷ್ಠಿಯಲ್ಲಿ ಅವರು, ’ಪ್ರಮಾಣವಚನ ನೀಡುವುದೇ ಆಗಿದ್ದರೆ, 25 ನೂತನ ಸದಸ್ಯರನ್ನು ಕರೆದು, ಅಂತರ ಕಾಪಾಡಿಕೊಂಡು, ಅವರ ಕುಟುಂಬದವರಿಗೆ ಗ್ಯಾಲರಿಯಲ್ಲಿ ಅವಕಾಶ ಮಾಡಿಕೊಟ್ಟು ಪ್ರಮಾಣವಚನ ನೀಡಬೇಕಿತ್ತು‘ ಎಂದರು.

’ವಿಧಾನಸೌಧದಲ್ಲಿ ಕಾನೂನು ಅನ್ವಯವಾಗುವುದಿಲ್ಲವೇ? ಕಾರ್ಯಕ್ರಮದಲ್ಲಿ ಭಾಗವಹಿಸಲು ಸಚಿವರಿಗೆ ಏಕೆ ಅನುಮತಿ ಕೊಟ್ಟಿರಿ? ಅವರ ವಿರುದ್ಧ ಏಕೆ ಪ್ರಕರಣ ದಾಖಲಿಸಿಲ್ಲ? ನಮಗೆ ಮಾತ್ರ ಕಾನೂನು ಅನ್ವಯವೇ?’ ಎಂದೂ ಕೇಳಿದರು.

ಸಂಕ್ಷಿಪ್ತ ಸುದ್ದಿ

ಪ್ರಚೋದನಕಾರಿ ಭಾಷಣ; 200 ಮಂದಿ ವಿರುದ್ಧ ಪ್ರಕರಣ

ಕಣ್ಣೂರು (ಕೇರಳ): ಹಿಂದೂ ಐಕ್ಯ ವೇದಿ ಸಂಘಟನೆ ಇಲ್ಲಿ ಆಯೋಜಿಸಿದ್ದ ಪ್ರತಿಭಟನಾ ರ‍್ಯಾಲಿಯೊಂದರಲ್ಲಿ ಪ್ರಚೋದನಕಾರಿ ಭಾಷಣ ಮತ್ತು ಘೋಷಣೆಗಳನ್ನು ಕೂಗಿದ ಆರೋಪದಡಿ ಸಂಘ ಪರಿವಾರದ ಪ್ರಮುಖ ನಾಯಕ ವಲ್ಸಾನ್ ತಿಲಂಕೆರಿ ಸೇರಿದಂತೆ 200 ಕಾರ್ಯಕರ್ತರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

‘ಕೇರಳದಲ್ಲಿರುವ ‘ಉಗ್ರಗಾಮಿ ಶಕ್ತಿಗಳ’ ವಿರುದ್ಧ ಕ್ರಮಕೈಗೊಳ್ಳಬೇಕೆಂದು ಒತ್ತಾಯಿಸಿ ಬುಧವಾರ ಹಿಂದೂ ಐಕ್ಯ ವೇದಿ ಸಂಘಟನೆಯು ಪ್ರತಿಭಟನಾ ರ‍್ಯಾಲಿಯನ್ನು ಆಯೋಜಿಸಿತ್ತು. ಜಿಲ್ಲೆಯ ಬ್ಯಾಂಕ್ ರೋಡ್‌ನಿಂದ ಕ್ರೀಡಾಂಗಣವೊಂದರ ತನಕ ಮೆರವಣಿಗೆಯನ್ನು ನಡೆಸಲಾಗಿತ್ತು. ತಿಲಂಕೆರಿ ಈ ಸಂಘಟನೆಯ ಕಾರ್ಯಾಧ್ಯಕ್ಷರಾಗಿದ್ದಾರೆ’ ಎಂದು ಪೊಲೀಸರು ತಿಳಿಸಿದರು.

ಶ್ರೀನಗರ: ವಿಮಾನ ಹಾರಾಟ ಪುನರಾರಂಭ

ಶ್ರೀನಗರ: ಕಣಿವೆಯಾದ್ಯಂತ ಹಿಮ ಹಾಗೂ ಮಳೆ ಬಿಡುವು ಕೊಟ್ಟ ಹಿನ್ನೆಲೆಯಲ್ಲಿ ಜಮ್ಮು ಮತ್ತು ಕಾಶ್ಮೀರದ ಬೇಸಿಗೆ ರಾಜಧಾನಿ ಶ್ರೀನಗರದಲ್ಲಿ ಗುರುವಾರ ವಿಮಾನಗಳ ಕಾರ್ಯಾಚರಣೆ ಪುನರಾರಂಭಗೊಂಡಿತು.

‘ದಟ್ಟನೆಯ ಮಂಜಿನಿಂದ ಕೂಡಿದ ವಾತಾವರಣದಿಂದಾಗಿ ಬೆಳಗಿನ ಅವಧಿಯ ಬಹುತೇಕ ವಿಮಾನಗಳು ವಿಳಂಬವಾಗಿ ಹಾರಾಟ ನಡೆಸಿದವು. ಮತ್ತೆ ಕೆಲ ವಿಮಾನಗಳ ಹಾರಾಟ ರದ್ದುಗೊಂಡವು’ ಎಂದು ಶ್ರೀನಗರ ವಿಮಾನ ನಿಲ್ದಾಣದ ಅಧಿಕಾರಿಯೊಬ್ಬರು ತಿಳಿಸಿದರು.

ಹೊಸ ವರ್ಷದ ಸಂಭ್ರಮಾಚರಣೆಗೆ ಬಂದಿದ್ದ ನೂರಾರು ಪ್ರವಾಸಿಗರು ವಿಮಾನ ಹಾರಾಟ ಸ್ಥಗಿತದಿಂದ ತಮ್ಮ ಸ್ವಸ್ಥಾನಗಳಿಗೆ ಮರಳಲು ಸಾಧ್ಯವಾಗದೇ ಕಳೆದ ಎರಡು ದಿನಗಳಿಂದ ಕಣಿವೆಯಲ್ಲಿ ಸಿಲುಕಿಕೊಂಡಿದ್ದರು.

ಶಬರಿಮಲೆ ದೇಗುಲಕ್ಕೆ 18,001 ತುಪ್ಪದ ತೆಂಗಿನಕಾಯಿ ಕೊಡುಗೆ



ತಿರುವನಂತಪುರಂ: ಶಬರಿಮಲೆ ಅಯ್ಯಪ್ಪ ದೇವಸ್ಥಾನದ ಭಕ್ತರಾದ, ಬೆಂಗಳೂರು ಮೂಲದ ಮಲಯಾಳಿ ಉದ್ಯಮಿಯು 18,001 ತುಪ್ಪದ ತೆಂಗಿನಕಾಯಿಯನ್ನು ಕೊಡುಗೆಯಾಗಿ ನೀಡಿದ್ದಾರೆ. ಇದು, ಈವರೆಗೆ ನೀಡಿದ ಅಧಿಕ ಸಂಖ್ಯೆಯ ಕೊಡುಗೆಯಾಗಿದೆ. ಇದಕ್ಕಾಗಿ ₹ 18 ಲಕ್ಷ ಶುಲ್ಕ ಪಾವತಿಸಿದ್ದಾರೆ.

ದೇವಸ್ಥಾನದ ಪ್ರಮುಖ ಹರಕೆಗಳಲ್ಲಿ ತುಪ್ಪದ ತೆಂಗಿನಕಾಯಿ ಒಂದು. ಇದಕ್ಕಾಗಿ, 2,280 ಕೆ.ಜಿ. ತುಪ್ಪ ಮತ್ತು 7.5 ಟನ್ ತೆಂಗಿನಕಾಯಿ ಬೇಕು. 10 ಮಂದಿ ಅರ್ಚಕರು ಎರಡು ದಿನದಲ್ಲಿ ತೆಂಗಿನಕಾಯಿಗಳಿಗೆ ತುಪ್ಪ ತುಂಬಿದ್ದು, ಟ್ರ್ಯಾಕ್ಟರ್‌ನಲ್ಲಿ ದೇಗುಲಕ್ಕೆ ಸಾಗಿಸಲಾಗಿದೆ.

ಕೊಡುಗೆ ನೀಡಿದ ಸಂದರ್ಭದಲ್ಲಿ ಭಕ್ತರು ಹಾಜರಿರಲಿಲ್ಲ. ಆದರೆ, ಅವರ ಸಂಬಂಧಿಕರು ಮತ್ತು ಗೆಳೆಯರು ಹಾಜರಿದ್ದರು.

ಇಡಬ್ಲ್ಯುಎಸ್ ಮೀಸಲು: ಇಂದು ‘ಸುಪ್ರೀಂ’ ತೀರ್ಪು

ನವದೆಹಲಿ: ನೀಟ್–ಪಿಜಿ ಪ್ರವೇಶದಲ್ಲಿ ಇಡಬ್ಲ್ಯುಎಸ್ ವರ್ಗದ ಮೀಸಲು ಕೋಟಾಗೆ ಸಂಬಂಧಿಸಿದ ಅರ್ಜಿಗೆ ಸಂಬಂಧಿಸಿ ವಿಚಾರಣೆ ಪೂರ್ಣಗೊಳಿಸಿರುವ ಸುಪ್ರೀಂಕೋರ್ಟ್ ಶುಕ್ರವಾರ (ಜ.7) ತೀರ್ಪು ಪ್ರಕಟಿಸಲಿದೆ.

ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್ ಹಾಗೂ ಎ.ಎಸ್. ಬೋಪಣ್ಣ ಅವರನ್ನು ಒಳಗೊಂಡ ನ್ಯಾಯಪೀಠ ಗುರುವಾರ ಅರ್ಜಿ ವಿಚಾರಣೆ ನಡೆಸಿ, ‘ರಾಷ್ಟ್ರದ ಹಿತಾಸಕ್ತಿಯನ್ನು ಗಮನಿಸಿದಾಗ, ನೀಟ್–ಪಿಜಿ ಪ್ರವೇಶಕ್ಕೆ ಕೌನ್ಸೆಲಿಂಗ್ ಆರಂಭವಾಗಬೇಕು ಎಂಬ ಪರಿಸ್ಥಿತಿಯಲ್ಲಿ ನಾವಿದ್ದೇವೆ’ ಎಂದು ಹೇಳಿದರು. ‘ಇಡಬ್ಲ್ಯುಎಸ್ ಕೋಟಾದಡಿ ಅರ್ಹತೆ ಪಡೆದಿರುವ ಅಭ್ಯರ್ಥಿಗಳು ನೋಂದಾಯಿಸಿಕೊಂಡಿದ್ದು, ಪ್ರವೇಶಕ್ಕಾಗಿ ಎಲ್ಲ ಸರ್ಕಾರಿ ಕಾಲೇಜುಗಳಲ್ಲಿ ಸೀಟುಗಳ ಸಂಖ್ಯೆ ಹೆಚ್ಚಿಸಲಾಗಿದೆ. ಈ ವರ್ಗದವರಿಗೆ ಮೀಸಲಾತಿ ನೀಡಿರುವುದು ಸಾಮಾನ್ಯ ವರ್ಗದ ವಿದ್ಯಾರ್ಥಿಗಳನ್ನು ಅವಕಾಶದಿಂದ ವಂಚಿತರನ್ನಾಗಿ ಮಾಡುವುದಿಲ್ಲ’ ಎಂದು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ತಿಳಿಸಿದರು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ
General

★ಮನೆಯಿಂದಲೇ ಮೇಣದಬತ್ತಿ★ ತಯಾರಿಸಿ ನಮಗೆ ಮರಳಿಸಿ, ಪ್ರತಿದಿನ 500 ರಿಂದ 1000 ಸಂಪಾದಿಸಿ. ತರಬೇತಿಗಾಗಿ: ಬೆಂಗಳೂರು. 8792252077, ಶಿವಮೊಗ್ಗ. 9008013895

ಬೇಕಾಗಿದ್ದಾರೆ:ಚಿಕ್ಕಮಂಗಳೂರಿನ ಪ್ರಖ್ಯಾತ ರೆಸಾರ್ಟ್ ಗೆ ಆಲ್ ರೌಂಡ್ ಕುಕ್, ಕಿಚನ್ ಹೆಲ್ಪರ್ಸ್, ಸರ್ವಿಸ್ ಬಾಯ್ಸ್, ಮೆಂಟೆನೆನ್ಸ್ ಗೆ ಜನ ಬೇಕಾಗಿದ್ದಾರೆ.ಊಟ ವಸತಿಯೊಂದಿಗೆ ಉತ್ತಮವೇತನ ನೀಡಲಾಗುವುದು. ಸಂಪರ್ಕಿಸಿ:9370999855

ಕರ್ನಾಟಕದಾದ್ಯಂತ ಹೆಸರಾಂತ ಕಂಪನಿ ಹಾಗೂ ಆಫೀಸ್ ಕೆಲಸಕ್ಕೆ ಯುವಕ/ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ Salary+ OT. 17,800/- 68,000/- 17,800/-'>. 8884666597, 8884666594.

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8139955155 8139988588

ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟರ್ಸ್, ಹೊಂಡ ಆನ್‌ಲೈನ್ ಕಂಪನಿಗಳಿಗೆ 10ನೇ, ಪಿಯುಸಿ, ಡಿಗ್ರಿ, ಡಿಪ್ಲೊಮಾದವರು 16,600-62000/- (ಮನೆಯಲ್ಲಿಯೇ ಕೆಲಸ) ವಸತಿಯೂಟದೊಂದಿಗೆ 8123884588, 8123884788

ತಕ್ಷಣ ಬೇಕಾಗಿದ್ದಾರೆ ಕರ್ನಾಟಕದ ಎಲ್ಲಾಜಿಲ್ಲೆಗಳಲ್ಲಿನ ಕಂಪನಿಗಳಿಗೆ ಆಫೀಸ್‌ಗಳಿಗೆ 7th,SSLC,PUC, ಡಿಗ್ರಿಯಾದವರಿಗೆ, (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟದೊಂದಿಗೆ ESI/PF ನೊಂದಿಗೆ 16,800-32000/- 9742260055, 9538133533

Part-Time Jobs

ಕನ್ನಡ ಮತ್ತುಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

Wanted

ತಕ್ಷಣ_ಬೇಕಾಗಿದ್ದಾರೆ 7TH, 10th, PUC, Diploma, any Degree, ITI, Pass/ Fail ಉಚಿತ ಊಟ+ವಸತಿ. ಸಂಬಳ 16,000-60,000. ಫೋ 9886639846, 7624918246.

WEEKEND CORNER
ದಾವಣಗೆರೆಯ ಎಸ್. ನಿಜಲಿಂಗಪ್ಪ ಬಡಾವಣೆಯಲ್ಲಿ ಮಾರಾಟ
ಕಾಂಚೀಪುರಂ ಎ.ಜಿ. ಬಾಬು ಸಾಹ್ ರೇಷ್ಮೆ ಸೀರೆ ವ್ಯಾಪಾರಿಗಳು
ಸಂಕ್ರಾಂತಿ ಹಬ್ಬದ ಮಾರಾಟ
ಶ್ರೀ ಗುರು ಶಿವಯೋಗಿ ಬಕ್ಕೇಶ್ವರ ಮಹಾಸ್ವಾಮಿ ಕಲ್ಯಾಣ ಮಂಟಪ ಸಮಿತಿ
ಎಸ್. ನಿಜಲಿಂಗಪ್ಪ ಬಡಾವಣೆ, ರಿಂಗ್ ರೋಡ್ ಸರ್ಕಲ್ ಹತ್ತಿರ, ದಾವಣಗೆರೆ–577004.
ಮೊ. : 6385697571
ದಿನಾಂಕ: 5,6,7,8 & 9 ನೇ ಜನವರಿ 2022
ಕೊನೆಯ ದಿನ ಸಂಜೆ 5.00 ಗಂಟೆಗೆ ಮುಕ್ತಾಯ
ಬೆಳಿಗ್ಗೆ 11.00 ರಿಂದ ರಾತ್ರಿ 7.00 ರವರೆಗೆ
ಯಾವುದೇ ವಿನಿಮಯವಿಲ್ಲ, ಹಿಂತಿರಿಗಿಸುವುದಿಲ್ಲ
ಮಾಸ್ಕ್ ಕಡ್ಡಾಯ
ಮಕ್ಕಳಿಗೆ ಹಾಗೂ 60 ವರ್ಷಕ್ಕಿಂತ ಮೇಲ್ಪಟ್ಟ ವ್ಯಕ್ತಿಗಳಿಗೆ ಪ್ರವೇಶವಿಲ್ಲ
ಒಂದು ಬಾರಿಗೆ 50 ಜನರಿಗೆ ಮಾತ್ರ ಪ್ರವೇಶ
ಕೈಚೀಲ ಮತ್ತು ಸಾಮಾನುಗಳನ್ನು ಒಳಗೆ ಅನುಮತಿಸಲಾಗುವುದಿಲ್ಲ
ನಮ್ಮ ಚಾನೆಲ್ ಅನ್ನು ಸಬ್‌ಸ್ಕ್ರೈಬ್ ಮಾಡಿ
ಎ.ಜಿ. ಬಾಬು ಸಾಹ್ YouTube
ಹೊಸ ಮಾರಾಟ ಮತ್ತು ಮಾಹಿತಿಗಾಗಿ
ಬೆಲ್ ಐಕಾನ್ ಅನ್ನು ಒತ್ತಲು ಮರೆಯದಿರಿ

ವ್ಯಾಪಾರ
Business Offers
Business For Sale

ಹಾಲಿ ಪ್ರಾವಿಷನ್ ಸ್ಟೋರ್ ಮಾರಾಟಕ್ಕಿದೆ. ಬೆಂಗಳೂರಿನ ಶ್ರೀ ರಾಮಾಂಜನೇಯ ಮುಖ್ಯರಸ್ತೆ, ಹನುಮಂತನಗರ, ಬೆಲೆ ರೂ. 3,20,000. ಸಂಪರ್ಕಿಸಿ : 9008151027

ಶಿಕ್ಷಣ
Training

ರಂಗಾಸಕ್ತರಿಗಾಗಿ ಅಭಿನಯ, ನೇಪಥ್ಯ, ರಂಗಪ್ರಯೋಗ, ಪ್ರದರ್ಶನ ಹಾಗು ಕಿರುಚಿತ್ರ ಅಭಿನಯ, ಕುರಿತಾದ ವರ್ಷದ ಕಾರ್ಯಾಗಾರ ಉಚಿತವಾಗಿ ಏರ್ಪಡಿಸಿದೆ ಸಂಪರ್ಕಿಸಿ 9845662329

ಭವಿಷ್ಯ
Astrology

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೇಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ. 7022443071

★ನಂ.1 ಸ್ತ್ರೀಪುರುಷ★ ವಶೀಕರಣ ಸ್ಪೆಷಲಿಸ್ಟ್.ನಿಮ್ಮ ಯಾವುದೇ ಸಮಸ್ಯೆಗಳಿದ್ದರು ಶ್ರೀಕ್ಷೇತ್ರದಿಂದ.ಪಂಡಿತ್. ದೇವೇಂದ್ರಭಟ್ ಅವರಿಂದ ನೇರಪರಿಹಾರ ಒಮ್ಮೆ ಕರೆಮಾಡಿ,ನಿಮ್ಮ ಜೀವನ ಬದಲಾಯಿಸಿಕೊಳ್ಳಿ. 9845919804

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

ವಶೀಕರಣ ಸ್ಪೆಷಲಿಸ್ಟ್ ಪ್ರೀತಿ, ಸ್ತ್ರೀ ವಶೀಕರಣ, ದಾಂಪತ್ಯ, ಕುಟುಂಬ ಕಲಹ, ಯಾವುದೇ ಗುಪ್ತ ಸಮಸ್ಯೆಗಳಿಗೆ ಖಚಿತಪರಿಹಾರ 9902157331, A.R.Ganachari

ಸಮಾಜಸೇವೆ
Old Age Home

ಸೇವಾ ಮನೋಭಾವವುಳ್ಳ ಯುವಕ, ಯುವತಿಯರು ಹಾಗೂ ದಂಪತಿಗಳು ಬೆಂಗಳೂರಿನಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ, ಉಚಿತ ಊಟ ವಸತಿಯೊಂದಿಗೆ ಉತ್ತಮ ಸಂಬಳ, ತರಬೇತಿ ನೀಡಲಾಗುವುದು ಸಂಪರ್ಕಿಸಿ: 9900371597, 9739320897, 9916551457, 9916544057, 9620761222

ಪ್ರವಾಸ
Travel

10.02.2022/ 10.03.2022- 11/15 ದಿನಗಳು ಕಾಶಿಯತ್ರ, ದೆಹಲಿ, ಆಗ್ರ, ಅಲಹಾಬದ್, ಗಯಾ, ಅಯೋಧ್ಯ, ಹರಿದ್ವರ, ಇತ್ಯಾದಿ.ಜನವರಿ, ಫೆಬ್ರವರಿ, ಮಾರ್ಚನಲ್ಲಿ ಅಂಡಮಾನ್ ಹವಳದ್ವೀಪ Royal Package- 'ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್' 9845560219/ 9739847429.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

DH DECCAN HERALD | ಪ್ರಜಾವಾಣಿ
BOOK YOUR CLASSIFIEDS ONLINE
5 EASY STEP
5 Easy steps to book your ads
LOG INTO WWW.DHCLASSIFIEDS.COM
CHOOSE THE CATEGORY
CHOOSE THE AD DATES
COMPOSE THE MATTER
CONFIRM AND PAY
TO BOOK YOUR CLASSIFIEDS ADS ONLINE
JOB | LOST | REAL ESTATE | NAME CHANGE | EDU | HEALTH
MATRI | AUTO | ASTRO | NOTICE | TRAVEL
condition apply*
WWW.DHCLASSIFIEDS.COM
For more information Contact:
9880856233 | 9731810277 | 9901641752 | 9845114560 | 9886213331
Email: dhclassifieds@deccanherald.co.in

ವಾಂಡರರ್ಸ್‌ನಲ್ಲಿ ಭಾರತ ತಂಡಕ್ಕೆ ಮೊದಲ ಸೋಲು: ಸರಣಿಯಲ್ಲಿ 1–1ರ ಸಮಬಲ

ಡೀನ್ ಚೆಂದದ ಆಟಕ್ಕೆ ಒಲಿದ ಜಯ

ಜೋಹಾನ್ಸ್‌ಬರ್ಗ್: ಇಲ್ಲಿಯ ವಾಂಡರರ್ಸ್ ಕ್ರೀಡಾಂಗಣದಲ್ಲಿ ಭಾರತ ತಂಡವು ಇದೇ ಮೊದಲ ಬಾರಿ ಟೆಸ್ಟ್ ಪಂದ್ಯದಲ್ಲಿ ಸೋಲನುಭವಿಸಿತು.

ನಾಯಕನಿಗೆ ತಕ್ಕ ಆಟವಾಡಿದ ಡೀನ್ ಎಲ್ಗರ್ (ಅಜೇಯ 96; 188ಎಸೆತ, 4X10) ಆತಿಥೇಯ ದಕ್ಷಿಣ ಆಫ್ರಿಕಾ ತಂಡಕ್ಕೆ ಎರಡನೇ ಟೆಸ್ಟ್‌ನಲ್ಲಿ 7 ವಿಕೆಟ್‌ಗಳಿಂದ ಗೆಲುವಿನ ಕಾಣಿಕೆ ನೀಡಿದರು. ಇದರೊಂದಿಗೆ ಮೂರು ಪಂದ್ಯಗಳ ಸರಣಿಯಲ್ಲಿ 1-1 ರ ಸಮಬಲ ಸಾಧನೆಗೆ ಕಾರಣರಾದರು.

ದಕ್ಷಿಣ ಆಫ್ರಿಕಾದಲ್ಲಿ ಮೊದಲ ಬಾರಿ ಸರಣಿ ಗೆಲ್ಲುವ ಕನಸು ಕಾಣುತ್ತಿರುವ ಭಾರತ ತಂಡವು ಇದೇ 11ರಿಂದ ಕೇಪ್‌ಟೌನ್‌ನಲ್ಲಿ ಆರಂಭವಾಗಲಿರುವ ಪಂದ್ಯದಲ್ಲಿ ಜಯಿಸಬೇಕಾಗಿದೆ.

ಬುಧವಾರ ಸಂಜೆ 240 ರನ್‌ಗಳ ಗುರಿಯನ್ನು ಬೆನ್ನಟ್ಟಿದ್ದ ದಕ್ಷಿಣ ಆಫ್ರಿಕಾ ತಂಡವು ದಿನದಾಟದ ಮುಕ್ತಾಯಕ್ಕೆ 2 ವಿಕೆಟ್‌ಗಳಿಗೆ 118 ರನ್ ಗಳಿಸಿತ್ತು. ಗುರುವಾರ ಬೆಳಿಗ್ಗೆಯಿಂದ ಸುರಿದ ಮಳೆಯಿಂದಾಗಿ ಮಧ್ಯಾಹ್ನ ಆಟ ಆರಂಭವಾಯಿತು.

ಮಧ್ಯಾಹ್ನ ಆರಂಭವಾದ ನಂತರ ಭಾರತದ ಬೌಲರ್‌ಗಳನ್ನು ದಿಟ್ಟತನದಿಂದ ಎದುರಿಸಿದ ಎಲ್ಗರ್ ಗೆ ನಾಲ್ಕು ರನ್‌ಗಳಿಂದ ಶತಕ ಕೈತಪ್ಪಿತು. ಆದರೆ, ತಮ್ಮ ತಂಡವನ್ನು ಗೆಲುವಿನ ದಡ ಸೇರಿಸಿದರು. ಆತಿಥೇಯ ಬಳಗವು 67.4 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 243 ರನ್ ಗಳಿಸಿತು. ನಾಲ್ಕನೇ ದಿನದಾಟದಲ್ಲಿ ಭಾರತಕ್ಕೆ ಲಭಿಸಿದ್ದು ಒಂದು ವಿಕೆಟ್ ಮಾತ್ರ.

ಡೀನ್ ಜೊತೆಗೆ ಮೂರನೇ ವಿಕೆಟ್‌ಗೆ 82 ರನ್ ಸೇರಿಸಿದ್ದ ರಸಿ ವ್ಯಾನ್ ಡರ್ ಡಸೆ (40 ರನ್) ವಿಕೆಟ್ ಅನ್ನು ಮೊಹಮ್ಮದ್ ಶಮಿ ಗಳಿಸಿದರು.

ಆದರೆ ಡೀನ್ ಜೊತೆಗೂಡಿದ ಭರವಸೆಯ ಆಟಗಾರ ತೆಂಬಾ ಬವುಮಾ (ಅಜೇಯ 23; 45ಎ) ತಂಡವನ್ನು ಸುರಕ್ಷಿತವಾಗಿ ಗೆಲುವಿನತ್ತ ಮುನ್ನಡೆಸಿದರು. ದಕ್ಷಿಣ ಆಫ್ರಿಕಾ ತಂಡವು ಮೊದಲ ಇನಿಂಗ್ಸ್‌ನಲ್ಲಿ ಅಲ್ಪ ಮೊತ್ತದ ಮುನ್ನಡೆ ಗಳಿಸಲೂ ಬವುಮಾ ಅವರ ಅರ್ಧಶತಕ ನೆರವಾಗಿತ್ತು.

ಮೊದಲ ಇನಿಂಗ್ಸ್‌ನಲ್ಲಿ ಏಳು ವಿಕೆಟ್ ಗಳಿಸಿದ್ದ ಭಾರತದ ಮಧ್ಯಮವೇಗಿ ಶಾರ್ದೂಲ್ ಠಾಕೂರ್ ಅವರಿಗೆ ಈ ಇನಿಂಗ್ಸ್‌ನಲ್ಲಿ ಕೇವಲ ಒಂದು ವಿಕೆಟ್ ಮಾತ್ರ ಲಭಿಸಿತು.

ವಾಂಡರರ್ಸ್‌ನಲ್ಲಿ ಭಾರತಕ್ಕೆ ಇದು ಆರನೇ ಪಂದ್ಯ. ಇದಕ್ಕೂ ಮುನ್ನ ಇಲ್ಲಿ ಭಾರತ ತಂಡವು ಎರಡು ಗೆಲುವು ಮತ್ತು ಮೂರು ಪಂದ್ಯಗಳಲ್ಲಿ ಡ್ರಾ ಸಾಧಿಸಿತ್ತು.

ವಿರಾಟ್ ಕೊಹ್ಲಿ ಬೆನ್ನುನೋವಿನಿಂದಾಗಿ ಕಣಕ್ಕಿಳಿದಿರಲಿಲ್ಲ. ಅವರ ಬದಲಿಗೆ ಕೆ.ಎಲ್. ರಾಹುಲ್ ತಂಡವನ್ನು ಮುನ್ನಡೆಸಿದರು. ಭಾರತ ತಂಡವು ಮೊದಲ ಇನಿಂಗ್ಸ್‌ನಲ್ಲಿ ಸಾಧಾರಣ ಮೊತ್ತಕ್ಕೆ ಆಲೌಟ್ ಆಗಿತ್ತು.

ಸರಣಿಯ ಮೊದಲ ಪಂದ್ಯವನ್ನು ಭಾರತ ತಂಡವು ಜಯಿಸಿತ್ತು. ಸೆಂಚುರಿಯನ್ ಕ್ರೀಡಾಂಗಣದಲ್ಲಿ ಗೆದ್ದ ಏಷ್ಯಾದ ಮೊದಲ ತಂಡವೆಂಬ ಹೆಗ್ಗಳಿಕೆಗೆ ಪಾತ್ರವಾಗಿತ್ತು.

ಅರ್ಧಶತಕ ಪೂರೈಸಿದ ಸಂಭ್ರಮದಲ್ಲಿ ಡೀನ್ ಎಲ್ಗರ್ –ರಾಯಿಟರ್ಸ್ ಚಿತ್ರ

ಸ್ಕೋರ್ ಕಾರ್ಡ್

ಭಾರತ ಮೊದಲ ಇನಿಂಗ್ಸ್ 202 (63.1 ಓವರ್)
ದಕ್ಷಿಣ ಆಫ್ರಿಕಾ ಮೊದಲ ಇನಿಂಗ್ಸ್ 229 (79.4 ಓವರ್)
ಭಾರತ ಎರಡನೇ ಇನಿಂಗ್ಸ್ 266 (60.1 ಓವರ್)
ದಕ್ಷಿಣ ಆಫ್ರಿಕಾ ಎರಡನೇ ಇನಿಂಗ್ಸ್ 3ಕ್ಕೆ 243 (67.4 ಓವರ್)
(ಬುಧವಾರ 40 ಓವರ್‌ಗಳಲ್ಲಿ 2ಕ್ಕೆ 118)
ಎಲ್ಗರ್ ಔಟಾಗದೆ 96 (188 ಎ, 4X10), ಡಸೆ ಸಿ ಪೂಜಾರ ಬಿ ಶಮಿ 40 (92 ಎ, 4X5), ತೆಂಬ ಔಟಾಗದೆ 23 (45 ಎ, 4X3)
ಇತರೆ (ಲೆಗ್‌ಬೈ 8, ನೋಬಾಲ್ 1, ವೈಡ್ 16) 25
ವಿಕೆಟ್ ಪತನ: 3-175 (ರಸಿ ವ್ಯಾನ್ ಡಸೆ, 53.6)
ಬೌಲಿಂಗ್: ಜಸ್‌ಪ್ರೀತ್ ಬೂಮ್ರಾ 17–2–70–0, ಮೊಹಮ್ಮದ್ ಶಮಿ 17–3–55–1, ಶಾರ್ದೂಲ್ ಠಾಕೂರ್ 16–2–47–1, ಮೊಹಮ್ಮದ್ ಸಿರಾಜ್ 6–0–37–0, ರವಿಚಂದ್ರನ್ ಅಶ್ವಿನ್ 11.4–2–26–1

ಖ್ವಾಜಾ ಶತಕದ ಸೊಬಗು

ಆ್ಯಷಸ್ ಟೆಸ್ಟ್: ಉತ್ತಮ ಮೊತ್ತ ಪೇರಿಸಿದ ಆಸ್ಟ್ರೇಲಿಯಾ

ಸಿಡ್ನಿ: ಎರಡು ವರ್ಷಗಳ ನಂತರ ಮೊದಲ ಬಾರಿ ಕ್ರೀಸ್‌ಗೆ ಇಳಿದ ಉಸ್ಮಾನ್ ಖ್ವಾಜಾ ಮೋಹಕ ಶತಕ ಗಳಿಸಿ ಮಿಂಚಿದರು. ಅವರ ಅಮೋಘ ಆಟದ ನೆರವಿನಿಂದ ಆಸ್ಟ್ರೇಲಿಯಾ ತಂಡ ಆ್ಯಷಸ್ ಕ್ರಿಕೆಟ್ ಸರಣಿಯ ನಾಲ್ಕನೇ ಟೆಸ್ಟ್‌ನಲ್ಲಿ ಉತ್ತಮ ಮೊತ್ತ ಕಲೆ ಹಾಕಿತು.

ಆಸ್ಟ್ರೇಲಿಯಾ 8 ವಿಕೆಟ್‌ಗಳಿಗೆ 416 ರನ್ ಗಳಿಸಿ ಮೊದಲ ಇನಿಂಗ್ಸ್‌ನಲ್ಲಿ ಡಿಕ್ಲೇರ್ ಮಾಡಿಕೊಂಡಿತು. ಎರಡನೇ ದಿನದಾಟದ ಮುಕ್ತಾಯದ ವೇಳೆ ಪ್ರವಾಸಿ ಇಂಗ್ಲೆಂಡ್ ತಂಡ ವಿಕೆಟ್ ಕಳೆದುಕೊಳ್ಳದೆ 13 ರನ್ ಗಳಿಸಿದೆ.

ಪಾಕಿಸ್ತಾನ ಮೂಲದ ಉಸ್ಮಾನ್ ಖ್ವಾಜಾ ಅವರು ಕೋವಿಡ್ ಸೋಂಕಿಗೆ ಒಳಗಾಗಿ ಕ್ವಾರಂಟೈನ್‌ನಲ್ಲಿರುವ ಟ್ರಾವಿಸ್ ಹೆಡ್ ಬದಲಿಗೆ ತಂಡದಲ್ಲಿ ಸ್ಥಾನ ಗಳಿಸಿದ್ದಾರೆ. ಮೊದಲ ದಿನದಾಟದಲ್ಲಿ ಎರಡು ವಿಕೆಟ್ ಕಳೆದುಕೊಂಡು ತಂಡ ಸಂಕಷ್ಟದಲ್ಲಿದ್ದಾಗ ಕ್ರೀಸ್‌ಗೆ ಬಂದ ಅವರು ಗುರುವಾರ ಸೊಗಸಾದ ಬ್ಯಾಟಿಂಗ್ ಮಾಡಿದರು. 260 ಎಸೆತಗಳಲ್ಲಿ 13 ಬೌಂಡರಿಗಳೊಂದಿಗೆ 137 ರನ್ ಗಳಿಸಿದ ಅವರು ಉತ್ತಮ ಜೊತೆಯಾಟಗಳಲ್ಲಿ ಭಾಗಿಯಾದರು.

ಇನಿಂಗ್ಸ್ ಡಿಕ್ಲೇರ್ ಮಾಡುವುದಕ್ಕೂ ಮುನ್ನ ಸ್ಟುವರ್ಟ್ ಬ್ರಾಡ್ ಎಸೆತವನ್ನು ನೇಥನ್ ಲಯನ್ ಮಿಡ್‌ವಿಕೆಟ್ ಮೇಲಿಂದ ಸಿಕ್ಸರ್‌ಗೆ ಎತ್ತಿದರು. ಮಿಚೆಲ್ ಸ್ಟಾರ್ಕ್ 34ರನ್‌ಗಳೊಂದಿಗೆ ಅಜೇಯರಾಗಿ ಉಳಿದರು.

28 ರನ್ ಗಳಿಸಿದ್ದಾಗ ನಾಯಕ ಜೋ ರೂಟ್ ಅವರಿಂದ ಜೀವದಾನ ಪಡೆದಿದ್ದ ಖ್ವಾಜಾ ಪುನರಾಗಮನವನ್ನು ಸಂಭ್ರಮಿಸಿದರು. ಸ್ಟುವರ್ಟ್ ಬ್ರಾಡ್‌ಗೆ ಐದನೇ ವಿಕೆಟ್ ರೂಪದಲ್ಲಿ ಬಲಿಯಾದ ಅವರು ಕ್ರೀಸ್‌ನಲ್ಲಿದ್ದಷ್ಟು ಕಾಲ ಸುಂದರ ಹೊಡೆತಗಳ ಮೂಲಕ ರಂಜಿಸಿದರು. ಇದು ಅವರ ಒಂಬತ್ತನೇ ಟೆಸ್ಟ್ ಶತಕವಾಗಿದೆ. ಸಿಡ್ನಿಯಲ್ಲಿ, ಇಂಗ್ಲೆಂಡ್ ವಿರುದ್ಧ ನಾಲ್ಕು ವರ್ಷಗಳ ಹಿಂದೆ 171 ರನ್ ಗಳಿಸಿದ ನಂತರ ಖ್ವಾಜಾ ಬ್ಯಾಟಿನಿಂದ ಶತಕ ಹೊಮ್ಮಿರಲಿಲ್ಲ.

ಚಹಾ ವಿರಾಮಕ್ಕೆ ಸ್ವಲ್ಪ ಮುನ್ನ ಸ್ಪಿನ್ನರ್ ಜ್ಯಾಕ್ ಲೀಚ್ ಅವರ ಎಸೆತವನ್ನು ಬ್ಯಾಕ್‌ವರ್ಡ್ ಸ್ಕ್ವೇರ್‌ಲೆಗ್ ಕಡೆಗೆ ಅಟ್ಟಿ ಮೂರು ರನ್ ಗಳಿಸುವ ಮೂಲಕ ಈ ಎಡಗೈ ಬ್ಯಾಟರ್ ಮೂರಂಕಿ ಪೂರೈಸಿದರು.

ಸ್ಟೀವನ್ ಸ್ಮಿತ್ (67; 141 ಎಸೆತ, 5 ಬೌಂಡರಿ) ಭರ್ಜರಿ ಅರ್ಧಶತಕ ಸಿಡಿಸಿ ಮಿಂಚಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಆಸ್ಟ್ರೇಲಿಯಾ: 134 ಓವರ್‌ಗಳಲ್ಲಿ 8ಕ್ಕೆ 416 ಡಿಕ್ಲೇರ್ (ಸ್ಟೀವನ್ ಸ್ಮಿತ್ 67, ಉಸ್ಮಾನ್ ಖ್ವಾಜಾ 137, ಪ್ಯಾಟ್ ಕಮಿನ್ಸ್ 24, ಮಿಚೆಲ್ ಸ್ಟಾರ್ಕ್ ಔಟಾಗದೆ 34, ನೇಥನ್ ಲಯನ್ ಔಟಾಗದೆ 16; ಜೇಮ್ಸ್ ಆ್ಯಂಡರ್ಸನ್ 54ಕ್ಕೆ1, ಸ್ಟುವರ್ಟ್ ಬ್ರಾಡ್ 101ಕ್ಕೆ5, ಮಾರ್ಕ್ ವುಡ್ 76ಕ್ಕೆ1, ಜೋ ರೂಟ್ 36ಕ್ಕೆ1); ಇಂಗ್ಲೆಂಡ್: 5 ಓವರ್‌ಗಳಲ್ಲಿ ವಿಕೆಟ್ ಕಳೆದುಕೊಳ್ಳದೆ 13 (ಹಸೀಬ್ ಹಮೀದ್ ಬ್ಯಾಟಿಂಗ್ 2, ಜ್ಯಾಕ್ ಕ್ರಾವ್ಲಿ ಬ್ಯಾಟಿಂಗ್ 2).

ಶತಕ ಗಳಿಸಿ ಸಂಭ್ರಮಿಸಿದ ಉಸ್ಮಾನ್ ಖ್ವಾಜಾ –ಎಎಫ್‌ಪಿ ಚಿತ್ರ

ಬುಲ್ಸ್‌ಗೆ ಜಯ ತಂದುಕೊಟ್ಟ ಪವನ್

ಪ್ರೊ ಕಬಡ್ಡಿ ಲೀಗ್: ಸಮಬಲದ ಹೋರಾಟ ಪ್ರದರ್ಶಿಸಿದ ಪಟ್ನಾ ಪೈರೇಟ್ಸ್– ತಮಿಳ್ ತಲೈವಾಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೇಡಿಂಗ್ ಚತುರ ಪವನ್ ಶೆರಾವತ್ ಮತ್ತೊಮ್ಮೆ ಕಬಡ್ಡಿ ಅಂಗಣದಲ್ಲಿ ಮಿಂಚು ಹರಿಸಿದರು. ಅವರ ಅಮೋಘ 'ಸೂಪರ್ ಟೆನ್' ಸಾಧನೆಯ ಬಲದಿಂದ ಬೆಂಗಳೂರು ಬುಲ್ಸ್ ಪ್ರೊ ಕಬಡ್ಡಿ ಲೀಗ್‌ನ ಎಂಟನೇ ಆವೃತ್ತಿಯಲ್ಲಿ ಮತ್ತೊಮ್ಮೆ ಗೆಲುವು ಸಾಧಿಸಿತು.

ವೈಟ್‌ಫೀಲ್ಡ್‌ನ ಹೋಟೆಲ್ ಶೆರಟಾನ್ ಗ್ರ್ಯಾಂಡ್‌ನಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ಗುರುವಾರ ಬೆಂಗಳೂರು ತಂಡ ಜೈಪುರ್ ಪಿಂಕ್ ಪ್ಯಾಂಥರ್ಸ್ ವಿರುದ್ಧ 38–31ರ ಜಯ ಸಾಧಿಸಿತು. 13 ಟಚ್ ಪಾಯಿಂಟ್ ಸೇರಿದಂತೆ ಪವನ್ 18 ಪಾಯಿಂಟ್ ಗಳಿಸಿದರು. ಜೈಪುರ ತಂಡದ ಪರ ಅರ್ಜುನ್ ದೇಶ್ವಾಲ್ ಏಕಾಂಗಿ ಹೋರಾಟ ನಡೆಸಿ 13 ಪಾಯಿಂಟ್ ಕಲೆ ಹಾಕಿದರು.

ಪೈರೇಟ್ಸ್–ತಲೈವಾಸ್ ಸಮಬಲದ ಹೋರಾಟ: ಸಮಬಲದ ಹೋರಾಟ ಕಂಡ ಮೊದಲ ಪಂದ್ಯದಲ್ಲಿ ಪಟ್ನಾ ಪೈರೇಟ್ಸ್ ಮತ್ತು ತಮಿಳ್ ತಲೈವಾಸ್ ತಂಡಗಳು 30-30ರ ಟೈ ಸಾಧಿಸಿದವು. ಮೊದಲಾರ್ಧದ ಮುಕ್ತಾಯಕ್ಕೆ ಪಟ್ನಾ ಆರು ಪಾಯಿಂಟ್‌ಗಳ ಮುನ್ನಡೆ ಸಾಧಿಸಿತ್ತು. ಆದರೆ ದ್ವಿತೀಯಾರ್ಧದಲ್ಲಿ ತಿರುಗೇಟು ನೀಡಿದ ತಮಿಳ್ ತಲೈವಾಸ್ ಪಂದ್ಯವನ್ನು ಸಮಗೊಳಿಸುವಲ್ಲಿ ಯಶಸ್ವಿಯಾಯಿತು.

ಪಟ್ನಾ ಪರವಾಗಿ ಮೋನು ಗೋಯತ್ 5 ಟಚ್ ಪಾಯಿಂಟ್ಸ್ ಮತ್ತು 3 ಬೋನಸ್ ಪಾಯಿಂಟ್ ಗಳಿಸಿದರೆ ತಲೈವಾಸ್‌ಗಾಗಿ ಅಜಿಂಕ್ಯ ಪವಾರ್ 'ಸೂಪರ್ ಟೆನ್' ಸಾಧನೆ ಮಾಡಿದರು. 9 ಟಚ್ ಪಾಯಿಂಟ್ಸ್ ಮತ್ತು 3 ಬೋನಸ್ ಪಾಯಿಂಟ್ಸ್ ಸೇರಿದಂತೆ ಅವರು 12 ಪಾಯಿಂಟ್ ಕಲೆ ಹಾಕಿದರು.

ಅತುಲ್ ಎಂ.ಎಸ್ 6 ಪಾಯಿಂಟ್ ಗಳಿಸಿ ಅಜಿಂಕ್ಯ ಅವರಿಗೆ ಉತ್ತಮ ಸಹಕಾರ ನೀಡಿದರು. ಸುರ್ಜೀತ್ ಸಿಂಗ್ 4 ಪಾಯಿಂಟ್ ಕಲೆ ಹಾಕಿದರು. ಸಂಘಟಿತ ಆಟ ಪ್ರದರ್ಶಿಸಿದ ಪಟ್ನಾ ಪರವಾಗಿ ಪ್ರಶಾಂತ್ ಕುಮಾರ್ 7 ಮತ್ತು ಗುಮಾನ್ ಸಿಂಗ್ 4 ಪಾಯಿಂಟ್ ಗಳಿಸಿದರು.

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್ಸ್
ಬೆಂಗಳೂರು ಬುಲ್ಸ್	7	5	1	1	28
ದಬಾಂಗ್ ಡೆಲ್ಲಿ	6	4	-	2	26
ಪಟ್ನಾ ಪೈರೇಟ್ಸ್	6	4	1	1	24
ತಮಿಳ್ ತಲೈವಾಸ್	7	2	1	4	22
ಯು ಮುಂಬಾ	6	2	1	3	20
ಬೆಂಗಾಲ್ ವಾರಿಯರ್ಸ್	6	3	3	-	16
ಹರಿಯಾಣ ಸ್ಟೀಲರ್ಸ್	6	2	3	1	15
ಗುಜರಾತ್ ಜೈಂಟ್ಸ್	6	1	3	2	14
ಯುಪಿ ಯೋಧಾ	6	1	3	2	14
ಜೈಪುರ್ ಪಿಂಕ್ ಪ್ಯಾಂಥರ್ಸ್	6	2	4	-	13
ತೆಲುಗು ಟೈಟನ್ಸ್	6	-	4	2	10
ಪುಣೇರಿ ಪಲ್ಟನ್	6	2	4	-	10

(ಗುರುವಾರದ ಪಂದ್ಯಗಳ ಅಂತ್ಯಕ್ಕೆ)

ತಮಿಳ್ ತಲೈವಾಸ್‌ನ ಅಜಿಂಕ್ಯ ಪವಾರ್ ಎದುರಾಳಿ ಆವರಣದಲ್ಲಿ ಪಾಯಿಂಟ್ ಗಳಿಸಲು ಪ್ರಯತ್ನಿಸಿದರು

ಇಂದಿನ ಪಂದ್ಯ (ರಾತ್ರಿ)
ಬೆಂಗಾಲ್ ವಾರಿಯರ್ಸ್ Vs ಹರಿಯಾಣ ಸ್ಟೀಲರ್ಸ್ 7.30
ಜೈಪುರ್ ಪಿಂಕ್ ಪ್ಯಾಂಥರ್ಸ್ – ಪುಣೇರಿ ಪಲ್ಟನ್ 8.30
ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಟೆನಿಸ್: ಸೆಮಿಗೆ ಸಾನಿಯಾ

ಅಡಿಲೇಡ್(ಪಿಟಿಐ): ಭಾರತದ ಸಾನಿಯಾ ಮಿರ್ಜಾ ಮತ್ತು ಉಕ್ರೇನ್‌ನ ನಾದಿಯಾ ಕಿಚೆನಾಕ್ ಜೋಡಿಯು ಡಬ್ಲ್ಯುಟಿಎ ಅಡಿಲೇಡ್ ಇಂಟರ್‌ನ್ಯಾಷನಲ್ 1 ಟೂರ್ನಿಯಲ್ಲಿ ಡಬಲ್ಸ್ ಸೆಮಿಫೈನಲ್ ಪ್ರವೇಶಿಸಿದೆ.

ಗುರುವಾರ ನಡೆದ ಪಂದ್ಯದಲ್ಲಿ ಸಾನಿಯಾ ಜೋಡಿಯು 6-0, 1-6, 10-5ರಿಂದ ಅಮೆರಿಕದ ಶೆಲ್ಬಿ ರೋಜರ್ಸ್ ಮತ್ತು ಬ್ರಿಟನ್‌ನ ಹೀಥರ್ ವಾಟ್ಸನ್ ಜೋಡಿಯ ವಿರುದ್ಧ ಪ್ರಯಾಸದ ಜಯ ದಾಖಲಿಸಿತು. 55 ನಿಮಿಷಗಳ ಹೋರಾಟದಲ್ಲಿ ಸಾನಿಯಾ ಜೋಡಿಯು ಮೇಲುಗೈ ಸಾಧಿಸಿತು.

ನಾಲ್ಕರ ಘಟ್ಟದಲ್ಲಿ ಸಾನಿಯಾ–ನಾದಿಯಾ ಜೋಡಿಯು ಆಸ್ಟ್ರೇಲಿಯಾದ ಆಷ್ಲೆ ಬಾರ್ಟಿ ಮತ್ತು ಸ್ಟಾರ್ಮ್ ಸ್ಯಾಂಡರ್ಸ್ ಜೋಡಿಯನ್ನು ಎದುರಿಸಲಿದೆ.

ಈ ಟೂರ್ನಿಯ ಮೊದಲ ಸುತ್ತಿನಲ್ಲಿ ಸಾನಿಯಾ ಜೋಡಿಯು 1-6, 6-3, 10-8ರಿಂದ ಗ್ಯಾಬ್ರಿಯ್ ದಬ್ರೊವಸ್ಕಿ ಮತ್ತು ಗಿಲಿಯಾನಾ ಒಲ್ಮ್ಸ್ ಅವರನ್ನು ಮಣಿಸಿತ್ತು.

ಇದೇ 17ರಿಂದ ಮೆಲ್ಬರ್ನ್‌ನಲ್ಲಿ ಆರಂಭವಾಗಲಿರುವ ಆಸ್ಟ್ರೇಲಿಯಾ ಓಪನ್ ಟೂರ್ನಿಯ ಪೂರ್ವಭಾವಿಯಾಗಿ ಡಬ್ಲ್ಯುಟಿಎ ಟೂರ್ನಿಯು ನಡೆಯುತ್ತಿದೆ.



ಸಾನಿಯಾ ಮಿರ್ಜಾ

ನೆಟ್‌ಫ್ಲಿಕ್ಸ್‌ನಲ್ಲಿ ಬಿಡುಗಡೆಯಾಗಲಿರುವ 'ಚಕ್‌ದಾ ಎಕ್ಸ್‌ಪ್ರೆಸ್' ಸಿನಿಮಾ

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕಿ ಜೂಲನ್ ಗೋಸ್ವಾಮಿ ಜೀವನದ ಕುರಿತ 'ಚಕ್‌ದಾ ಎಕ್ಸ್‌ಪ್ರೆಸ್' ಸಿನಿಮಾ ನೆಟ್‌ಫ್ಲಿಕ್ಸ್‌ನಲ್ಲಿ ಬಿಡುಗಡೆಯಾಗಲಿದೆ.

ಅನುಷ್ಕಾ ಶರ್ಮಾ ಅವರು ಈ ಚಿತ್ರದಲ್ಲಿ ಜೂಲನ್ ಅವರ ಪಾತ್ರ ನಿರ್ವಹಿಸಿದ್ದಾರೆ. ವಿಶ್ವ ಕ್ರಿಕೆಟ್ ಇತಿಹಾಸದಲ್ಲಿ ಪ್ರಮುಖ ಮಹಿಳಾ ವೇಗಿಗಳಲ್ಲಿ ಒಬ್ಬರಾದ ಜೂಲನ್ ಅವರ ಜೀವನ ಪಯಣ ಚಿತ್ರದ ಕಥಾಹಂದರವಾಗಿದೆ. ಕ್ರಿಕೆಟ್ ಆಡಬೇಕೆಂಬ ತಮ್ಮ ಕನಸು ನನಸಾಗಿಸಿಕೊಳ್ಳಲು ಹಲವು ಅಡೆತಡೆಗಳನ್ನು ದಾಟಿದ ಕಥನವನ್ನು ಇದು ಒಳಗೊಂಡಿದೆ.

ಅನುಷ್ಕಾ ಶರ್ಮಾ ಮತ್ತು ಆಕೆಯ ಸಹೋದರ ಕರ್ಣೇಶ್ ಶರ್ಮಾ ಅವರ ಕ್ಲೀನ್ ಸ್ಲೇಟ್ ಫಿಲ್ಮ್ಸ್ ನಿರ್ಮಿಸಿದ 'ಚಕ್‌ದಾ ಎಕ್ಸ್‌ಪ್ರೆಸ್' ಅನ್ನು ಪ್ರೊಸಿತ್ ರಾಯ್ ನಿರ್ದೇಶಿಸಿದ್ದಾರೆ.

ಐಎಸ್‌ಎಲ್ ಟೂರ್ನಿ: ಜೆಎಫ್‌ಸಿಗೆ ರೋಚಕ ಗೆಲುವು

ಬ್ಯಾಂಬೊಲಿಮ್: ಇಶಾನ್ ಪಂಡಿತ ಅವರು ಜೆಮ್ಷೆಡ್‌ಪುರ್ ಎಫ್‌ಸಿಗೆ ಜಯದ ಕಾಣಿಕೆ ನೀಡಿದರು. ಗುರುವಾರ ರಾತ್ರಿ ಇಲ್ಲಿ ನಡೆದ ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯ ರೋಚಕ ಹಣಾಹಣಿಯಲ್ಲಿ ಜೆಮ್ಷೆಡ್‌ಪುರ 3–2ರಲ್ಲಿ ನಾರ್ತ್ ಈಸ್ಟ್ ಯುನೈಟೆಡ್ ತಂಡವನ್ನು ಮಣಿಸಿತು.

4ನೇ ನಿಮಿಷದಲ್ಲೇ ನಾರ್ತ್ ಈಸ್ಟ್ ಯುನೈಟೆಡ್ ತಂಡ ಮುನ್ನಡೆ ಸಾಧಿಸಿ ಸಂಭ್ರಮಿಸಿತು. ಚೆಂಡನ್ನು ಗುರಿ ಮುಟ್ಟಿಸಿದ ದೇಶಾನ್ ಬ್ರೌನ್ ಅವರು ಖುಷಿಯಲ್ಲಿ ನಲಿದಾಡಿದರು. 44ನೇ ನಿಮಿಷದಲ್ಲಿ ಜೋರ್ಡಾನ್ ಮರೆ ಅವರು ಜಾದೂ ಮಾಡಿದರು.

ಈ ಆವೃತ್ತಿಯಲ್ಲಿ ಅಮೋಘ ಫಾರ್ಮ್‌ನಲ್ಲಿರುವ ಗ್ರೆಗ್ ಸ್ಟೀವರ್ಟ್ ಅವರು ಫ್ರೀ ಕಿಕ್‌ನಲ್ಲಿ ನಿಖರವಾಗಿ ನೀಡಿದ ಚೆಂಡನ್ನು ಹೆಡ್ ಮಾಡಿ ಜೋರ್ಡಾನ್ ಸಮಬಲದ ಗೋಲು ಗಳಿಸಿದರು. 56ನೇ ನಿಮಿಷದಲ್ಲಿ ಬೋರಿಸ್ ಸಿಂಗ್ ಗೋಲು ಗಳಿಸಿದರು. 90ನೇ ನಿಮಿಷದಲ್ಲಿ ಬ್ರೌನ್ ಎರಡನೇ ಗೋಲು ಗಳಿಸಿ ಸಮಬಲ ಗಳಿಸಿಕೊಟ್ಟರೆ ಇಶಾನ್ ಪಂಡಿತ ಚೆಂಡನ್ನು ಬಲೆಯೊಳಗೆ ಸೇರಿಸಿ ಜೆಮ್ಷೆಡ್‌ಪುರಕ್ಕೆ ಜಯ ತಂದುಕೊಟ್ಟರು.

ನಿಧನ ವಾರ್ತೆ

ಯು.ಪಿ.ಪುರಾಣಿಕ್

ಬೆಂಗಳೂರು: ಬ್ಯಾಂಕಿಂಗ್ ತಜ್ಞ ಯು.ಪಿ. ಪುರಾಣಿಕ್ (81) ಅವರು ಗುರುವಾರ ನಿಧನರಾದರು. ಚಿಕ್ಕಲಸಂದ್ರದ ಸಾರ್ವಭೌಮನಗರದಲ್ಲಿ ನೆಲೆಸಿದ್ದ ಅವರಿಗೆ ಇಬ್ಬರು ಪುತ್ರರು ಹಾಗೂ ಪುತ್ರಿ ಇದ್ದಾರೆ.

ಬನಶಂಕರಿಯ ಚಿತಾಗಾರದಲ್ಲಿ ಶುಕ್ರವಾರ ಬೆಳಿಗ್ಗೆ 11 ಗಂಟೆಗೆ ಮೃತರ ಅಂತ್ಯಕ್ರಿಯೆ ನೆರವೇರಿಸಲಾಗುತ್ತದೆ ಎಂದು ಕುಟುಂಬದವರು ತಿಳಿಸಿದ್ದಾರೆ.

'ಪ್ರಜಾವಾಣಿ'ಯಲ್ಲಿ ಪ್ರಕಟವಾಗುತ್ತಿದ್ದ 'ಪ್ರಶ್ನೋತ್ತರ' ಅಂಕಣದ ಮೂಲಕ ಅವರು ಹಣಕಾಸಿಗೆ ಸಂಬಂಧಿಸಿದ ಜನಸಾಮಾನ್ಯರ ಪ್ರಶ್ನೆಗಳಿಗೆ ಪರಿಹಾರ ಸೂಚಿಸುತ್ತಿದ್ದರು.

ಬೈಂದೂರು ತಾಲ್ಲೂಕಿನ ಉಪ್ಪುಂದ ಗ್ರಾಮದಲ್ಲಿ ಜನಿಸಿದ್ದ ಅವರು ಬ್ಯಾಂಕಿಂಗ್ ಕ್ಷೇತ್ರದಲ್ಲಿ ಸುಮಾರು 33 ವರ್ಷ ಸೇವೆ ಸಲ್ಲಿಸಿದ್ದರು. ಬೆಂಗಳೂರಿನಲ್ಲಿ ಸಿಂಡಿಕೇಟ್ ಬ್ಯಾಂಕ್‌ನ ವಿಭಾಗೀಯ ವ್ಯವಸ್ಥಾಪಕರಾಗಿ ನಿವೃತ್ತರಾಗಿದ್ದರು. ಬೆಂಗಳೂರು ಸಿಟಿ ಕೋ ಆಪರೇಟಿವ್ ಬ್ಯಾಂಕ್‌ನ (ಬಿಸಿಸಿಬಿ) ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ್ದರು. ಯಾರಿಗೆ ಬೇಡ ದುಡ್ಡು, ವಿಶ್ವಗುರು ಶ್ರೀ ರಾಘವೇಂದ್ರರು, ಹಣಕಾಸು ಹಿತೈಷಿ ಪುಸ್ತಕಗಳನ್ನು ಅವರು ಬರೆದಿದ್ದಾರೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,925
ಇಂದಿನ ಅಂತ್ಯ	17,746
▼	179
ದಿನದ ಕನಿಷ್ಠ	17,655

ವಿನಿಮಯ ದರ

$ ಡಾಲರ್	74.42
£ ಪೌಂಡ್	100.64
€ ಯುರೊ	84.15
¥ ಯೆನ್ (100ಕ್ಕೆ)	64

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹480
12 ಮೊಟ್ಟೆಗೆ	₹65
ಮೈಸೂರು	
100 ಮೊಟ್ಟೆಗೆ	₹475

ಚಿನ್ನದ ಬೆಲೆ ₹ 284, ಬೆಳ್ಳಿ ₹ 1,292 ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಗುರುವಾರ ಚಿನ್ನ ಬೆಳ್ಳಿ ದರ ಇಳಿಕೆ ಕಂಡಿದೆ.

ಚಿನ್ನದ ಬೆಲೆಯು 10 ಗ್ರಾಂಗೆ ₹284ರಷ್ಟು ಇಳಿಕೆ ಆಗಿದ್ದು, ₹ 46,700ರಂತೆ ಮಾರಾಟವಾಗಿದೆ.

ಬೆಳ್ಳಿ ಬೆಲೆಯು ಕೆ.ಜಿ.ಗೆ ₹ 1,292ರಂತೆ ಇಳಿಕೆ ಆಗಿ ₹ 59,590ಕ್ಕೆ ತಲುಪಿದೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಆಗಿರುವ ಬೆಲೆ ಇಳಿಕೆಯು ದೇಶಿ ಮಾರುಕಟ್ಟೆಯಲ್ಲಿಯೂ ಪ್ರತಿಫಲಿಸಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ತಿಳಿಸಿದೆ.

ನಾಲ್ವರು ಮಾಜಿ ಸಿಎಂಗಳಿಗೆ ನೀಡಿದ್ದ ಎಸ್‌ಎಸ್‌ಜಿ ಭದ್ರತೆ ವಾಪಸ್

ಪ್ರಜಾವಾಣಿ ವಾರ್ತೆ

ಶ್ರೀನಗರ: ಜಮ್ಮು ಮತ್ತು ಕಾಶ್ಮೀರದ ನಾಲ್ವರು ಮಾಜಿ ಮುಖ್ಯಮಂತ್ರಿಗಳು ಹಾಗೂ ಅವರ ಕುಟುಂಬದ 15 ಮಂದಿಗೆ ನೀಡಿದ್ದ ವಿಶೇಷ ಭದ್ರತೆ(ಎಸ್‌ಎಸ್‌ಜಿ) ಯನ್ನು ಜಮ್ಮು ಕಾಶ್ಮೀರದ ಸರ್ಕಾರವು ವಾಪಸ್ ಪಡೆದಿದೆ.

ಮಾಜಿ ಮುಖ್ಯಮಂತ್ರಿಗಳಾದ ಎನ್‌ಸಿ ಪಕ್ಷದ ಫಾರೂಕ್ ಅಬ್ದುಲ್ಲಾ, ಅವರ ಪುತ್ರ ಒಮರ್ ಅಬ್ದುಲ್ಲಾ, ಪಿಡಿಪಿಯ ಮೆಹಬೂಬಾ ಮುಫ್ತಿ, ಕಾಂಗ್ರೆಸ್‌ನ ಗುಲಾಂ ನಬಿ ಅಜಾದ್ ಅವರಿಗೆ ನೀಡಿದ್ದ ಎಸ್‌ಎಸ್‌ಜಿ ಭದ್ರತೆಯನ್ನು 2021ರ ಜುಲೈ 18 ಹಾಗೂ ಸೆ.21ರಂದು ನಡೆದ ಭದ್ರತಾ ಸಮನ್ವಯ ಸಮಿತಿಯ ತೀರ್ಮಾನದಂತೆ ವಾಪಸ್ ತೆಗೆದುಕೊಳ್ಳಲಾಗಿದೆ ಎಂದು ಮೂಲಗಳು ತಿಳಿಸಿವೆ.

ಈ ಸಂಬಂಧ ಕೇಂದ್ರ ಗೃಹ ಇಲಾಖೆಯು ಎಡಿಜಿಪಿ (ಭದ್ರತೆ) ಪತ್ರ ಬರೆದಿದ್ದು, ಎಸ್‌ಎಸ್‌ಜಿ ಸಿಬ್ಬಂದಿಯನ್ನು ಕಡಿತಗೊಳಿಸುವ ತಮ್ಮ ಪ್ರಸ್ತಾವವನ್ನು ಕೇಂದ್ರ ಗೃಹ ಇಲಾಖೆ ಒಪ್ಪಿಕೊಂಡಿದೆ. ಎಷ್ಟು ಸಾಧ್ಯವೊ ಅಷ್ಟು ಕಡಿಮೆ ಮಾಡಿ. ಇದರ ನಿರ್ವಹಣೆಗೆ ಒಬ್ಬ ಡಿಎಸ್‌ಪಿಯನ್ನು ನೇಮಿಸಿ ಎಂದು ನಿರ್ದೇಶನ ನೀಡಿದೆ. ಎಸ್‌ಎಸ್‌ಜಿಯಲ್ಲಿದ್ದ ಸಿಬ್ಬಂದಿಯನ್ನು ಬೇರೆ ಬೇರೆ ವಿಭಾಗಕ್ಕೆ ನೇಮಿಸುವಂತೆ ಸೂಚಿಸಿದೆ.

2020ರ ಮಾರ್ಚ್ 31ರಂದು ಜಮ್ಮು ಕಾಶ್ಮೀರ ವಿಶೇಷ ಭದ್ರತಾ ಪಡೆ – 2000 ಕಾಯ್ದೆಗೆ ತಿದ್ದುಪಡಿ ತರಲಾಗಿದ್ದು, ಈ ಕಾಯ್ದೆ ಅನ್ವಯ ಹಾಲಿ ಮುಖ್ಯಮಂತ್ರಿಗೆ ಮಾತ್ರ ಎಸ್‌ಎಸ್‌ಜಿ ಭದ್ರತೆ ಸಿಗಲಿದೆ.

ಮುಂಬೈ ಧಾರಣೆ

ಶೇಂಗಾ

6-1-2022

ಜಾವಾ 70/80(ಹೊಸ)	10500-10550
ಜಾವಾ 80/90(ಹೊಸ)	10400-10450
ದಪ್ಪ ಮಧ್ಯಪ್ರದೇಶ(ಹೊಸ)	9850-9900
ದಪ್ಪ ಗುಜರಾತ್(ಹೊಸ)	8950-9000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1320 (1320)
ಒಂದು ವಾರದ ಡೆಲಿವರಿ	1315 (1315)
ಸೋಯಾ ಕಚ್ಚಾ	1145 (1120)
ಪಾಮ್ ವಾರದ ಡೆಲಿವರಿ	1160 (1163)
ಸೂರ್ಯಕಾಂತಿ ಎಣ್ಣೆ ಕಚ್ಚಾ	1180 (1180)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ	47,500 (48,100)
ಬೆಳ್ಳಿ ಕೆ.ಜಿ	60,400 (61,950)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	450-500
ನಡುಗೋಲು	550-600
ರಾಶಿ	650-700
ರಾಶಿ ಉತ್ತಮ	800-850
ಜರಡಿ	900-950
ಹೆರಕಿದ್ದು	1100-1200
ಹಸಿರು ಸಾಧಾರಣ	750-800
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1300-1450
ಕಾಳು ಮೆಣಸು	490
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-53000
ಹೊನ್ನಾಳಿ	
ರಾಶಿ	47400-47400
ಕಾರ್ಕಳ	
ಹೊಸತು	40000-45000
ಹಳತು	46000-53000
ಕುಮಟಾ	
ಚಿಪ್ಪು	23501-41248
ಕೋಕ	28848-28089
ಹಳೆಚಾಲಿ	48059-49669
ಹೊಸಚಾಲಿ	35669-41288
ಪುತ್ತೂರು	
ಕೋಕ	11000-26000
ಹೊಸತು	27500-45000
ಸಿದ್ದಾಪುರ	
ಬಿಳಿಗೋಟು	22299-32699
ಚಾಲಿ	46589-48299
ಕೋಕ	26989-34112
ಹೊಸಚಾಲಿ	30699-39098
ರಾಶಿ	46099-48509
ತಟ್ಟಿಬೆಟ್ಟೆ	44099-44899
ಶಿರಸಿ	
ಬೆಟ್ಟೆ	37699-46299
ಬಿಳಿಗೋಟು	24009-40499
ಚಾಲಿ	46599-49399
ರಾಶಿ	46299-48208
ಸಿದ್ದಾಪುರ	
ಬಿಳಿಗೋಟು	22299-32699
ಚಾಲಿ	46589-48299
ಕೋಕ	26989-34112
ಹೊಸಚಾಲಿ	30699-39098
ಕೆಂಪುಗೋಟು	32889-33789
ರಾಶಿ	46099-48509
ತಟ್ಟಿಬೆಟ್ಟೆ	44099-44899
ರಾಮನಗರ ರೇಷ್ಮೆ	
ಮಿಶ್ರತಳಿ	344-608
ದ್ವಿತಳಿ	444-800

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15400	15500	15500	231.95 ಸೆಂಟ್ಸ್
ಎಸಿ	7055	6900	6750	
ಆರ್‌ಪಿ	6500	6800	7000	ಲಂಡನ್
ಆರ್‌ಸಿ	3875	4100	3900	2321 ಡಾಲರ್ಸ್

ಕಂಪನಿ ಮುನ್ನಡೆಸುವಂತಾಗಿ: ಸಿಎಸ್‌ಗಳಿಗೆ ಬೊಮ್ಮಾಯಿ ಕರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಂಪನಿಗಳಿಗೆ ಸಲಹೆ ನೀಡುವುದಷ್ಟೇ ಅಲ್ಲದೆ, ಕಂಪನಿಯನ್ನು ಮುನ್ನಡೆಸುವಂತಹ ಕೆಲಸವನ್ನು ಕಂಪನಿ ಸೆಕ್ರೆಟರಿಗಳು (ಸಿ.ಎಸ್.) ಮಾಡಬೇಕು. ಯಾವುದೇ ಪ್ರಮುಖ ನಿರ್ಧಾರಗಳಲ್ಲಿ ಕಂಪನಿ ಸೆಕ್ರೆಟರಿಗಳ ಪಾತ್ರ ಮುಖ್ಯವಾಗಿರಬೇಕು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಬೆಂಗಳೂರಿನ ಅರಮನೆ ಮೈದಾನದಲ್ಲಿ ಗುರುವಾರ ನಡೆದ ಕಂಪನಿ ಸೆಕ್ರೆಟರಿಗಳ 49ನೇ ರಾಷ್ಟ್ರೀಯ ಸಮಾವೇಶದಲ್ಲಿ ಮಾತನಾಡಿದ ಅವರು, 'ಕಂಪನಿ ಸೆಕ್ರೆಟರಿಗಳು ದೇಶದ ಆರ್ಥಿಕ ನೀತಿ ರೂಪಿಸುವಲ್ಲಿ ಭಾಗವಹಿಸುವಿಕೆಯ ಅಗತ್ಯ ಇದೆ' ಎಂದರು.

ಸಂಘಟಿತ ಮತ್ತು ಅಸಂಘಟಿತ ವಲಯಗಳನ್ನು ಒಗ್ಗೂಡಿಸಲು ಕಂಪನಿ ಸೆಕ್ರೆಟರಿಗಳು ಪ್ರಮುಖ ಪಾತ್ರವಹಿಸಬೇಕು ಎಂದು ಆನ್‌ಲೈನ್ ಮೂಲಕ ಕಾರ್ಯಕ್ರಮದಲ್ಲಿ ಮಾತನಾಡಿದ ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಸ್ಮೃತಿ ಇರಾನಿ ಅವರು ಕರೆ ನೀಡಿದರು.

'ಎರಡು ದಶಕಗಳ ನಂತರ ಬೆಂಗಳೂರಿನಲ್ಲಿ ಇಂತಹ ಉತ್ತಮ ಸಮಾವೇಶ ನಡೆಯುತ್ತಿದೆ. ತಾಂತ್ರಿಕ ವಿಚಾರಗೋಷ್ಠಿಗಳು ಹೊಸ ಅವಕಾಶಗಳನ್ನು ಸೃಷ್ಟಿಸಲು ನೆರವಾಗಲಿವೆ' ಎಂದು ಇನ್‌ಸ್ಟಿಟ್ಯೂಟ್ ಆಫ್ ಕಂಪನಿ ಸೆಕ್ರೆಟರೀಸ್ ಆಫ್ ಇಂಡಿಯಾ (ಐಸಿಎಸ್‌ಐ) ಅಧ್ಯಕ್ಷ ಸಿ.ಎಸ್. ನಾಗೇಂದ್ರ ಡಿ. ರಾವ್ ತಿಳಿಸಿದರು.

ಭಾರತೀಯ ಸ್ಟೇಟ್ ಬ್ಯಾಂಕ್‌ನ ಸಂಶೋಧನಾ ವರದಿ

13.5 ಲಕ್ಷ ಉದ್ದಿಮೆಗಳಿಗೆ ನೆರವಾದ ಸಾಲ ಖಾತರಿ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು 2020ರಲ್ಲಿ ಆರಂಭಿಸಿದ ತುರ್ತು ಸಾಲ ಖಾತರಿ ಯೋಜನೆಯು (ಇಸಿಎಲ್‌ಜಿಎಸ್) 13.5 ಲಕ್ಷ ಉದ್ದಿಮೆಗಳು ದಿವಾಳಿ ಆಗದಂತೆ ತಡೆದಿದೆ ಎಂದು ಭಾರತೀಯ ಸ್ಟೇಟ್ ಬ್ಯಾಂಕ್‌ನ (ಎಸ್‌ಬಿಐ) ಸಂಶೋಧನಾ ವರದಿಯೊಂದು ಹೇಳಿದೆ.

ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ (ಎಂಎಸ್‌ಎಂಇ) ಉದ್ದಿಮೆಗಳಿಗೆ ನೆರವು ನೀಡುವ ಉದ್ದೇಶದಿಂದ ಆರಂಭಿಸಲಾದ ಈ ಯೋಜನೆಯು ಇಷ್ಟು ಉದ್ದಿಮೆಗಳನ್ನು ಕಾಪಾಡಿರುವುದರ ಪರಿಣಾಮವಾಗಿ ಒಟ್ಟು 1.5 ಕೋಟಿ ಉದ್ಯೋಗಗಳನ್ನು ರಕ್ಷಿಸಿದಂತೆ ಆಗಿದೆ ಎಂದೂ ಈ ವರದಿಯು ಹೇಳಿದೆ.

ಈ ಯೋಜನೆಯು ₹ 20 ಲಕ್ಷ ಕೋಟಿ ಮೊತ್ತದ ಆತ್ಮನಿರ್ಭರ ಭಾರತ ಯೋಜನೆಯ ಒಂದು ಭಾಗ. ಕೋವಿಡ್–19 ಹರಡುವುದನ್ನು ತಡೆಯುವ ಉದ್ದೇಶದಿಂದ ಜಾರಿಗೆ ತಂದ ಲಾಕ್‌ಡೌನ್‌ನ ಕೆಟ್ಟ ಪರಿಣಾಮಗಳನ್ನು ನಿಭಾಯಿಸುವ ಉದ್ದೇಶದಿಂದ ಸಾಲ ಖಾತರಿ ಯೋಜನೆಯನ್ನು ಪ್ರಕಟಿಸಲಾಯಿತು.

'ಒಟ್ಟು ₹ 1.8 ಲಕ್ಷ ಕೋಟಿ ಮೊತ್ತದ ಸಾಲಗಳು ಎನ್‌ಪಿಎ ಆಗಿ ವರ್ಗೀಕರಣ ಆಗುವುದನ್ನು ಈ ಯೋಜನೆಯು ತಪ್ಪಿಸಿದೆ ಎಂದು ವರದಿಯು ಹೇಳಿದೆ. ಇಷ್ಟು ಸಾಲವು ಎನ್‌ಪಿಎ ಆಗಿ ಪರಿವರ್ತನೆ ಆಗಿದ್ದಿದ್ದರೆ 1.5 ಕೋಟಿ ಕಾರ್ಮಿಕರು ಕೆಲಸ ಕಳೆದುಕೊಳ್ಳಬೇಕಾಗುತ್ತಿತ್ತು. ಹಾಗಾಗಿ, ಸಾಲ ಖಾತರಿ ಯೋಜನೆಯು ಒಟ್ಟು ಆರು ಕೋಟಿ ಜನರ (ಒಬ್ಬ ಕಾರ್ಮಿಕ ತನ್ನನ್ನೂ ಸೇರಿದಂತೆ ನಾಲ್ಕು ಜನರನ್ನು ಸಲಹುತ್ತಾನೆ ಎಂದು ಭಾವಿಸಲಾಗಿದೆ) ಜೀವನೋಪಾಯವನ್ನು ಕಾಪಾಡಿದೆ ಎಂದು ಅದು ಹೇಳಿದೆ.

ಸಾಲ ಖಾತರಿ ಯೋಜನೆಯ ಅತಿಹೆಚ್ಚಿನ ಪ್ರಯೋಜನವನ್ನು ಗುಜರಾತ್ ರಾಜ್ಯ ಪಡೆದುಕೊಂಡಿದೆ. ಪ್ರಯೋಜನ ಪಡೆದಿರುವ ರಾಜ್ಯಗಳ ಸಾಲಿನಲ್ಲಿ ಮಹಾರಾಷ್ಟ್ರ, ತಮಿಳುನಾಡು ಮತ್ತು ಉತ್ತರ ಪ್ರದೇಶ ನಂತರದ ಸ್ಥಾನಗಳಲ್ಲಿ ಇವೆ.

ಮುಖ್ಯಾಂಶಗಳು
- 1.5 ಕೋಟಿ ಉದ್ಯೋಗಗಳ ರಕ್ಷಣೆ
- ಯೋಜನೆಯ ಅತಿ ಹೆಚ್ಚಿನ ಪ್ರಯೋಜನ ಪಡೆದುಕೊಂಡ ಗುಜರಾತ್
- ಎನ್‌ಪಿಎ ಆಗುವುದು ತಪ್ಪಿದ ₹ 1.8 ಲಕ್ಷ ಕೋಟಿ ಮೊತ್ತದ ಸಾಲ

ಸೆನ್ಸೆಕ್ಸ್ 621 ಅಂಶ ಇಳಿಕೆ

ಮುಂಬೈ (ಪಿಟಿಐ): ನಾಲ್ಕು ದಿನಗಳಿಂದ ಏರುಗತಿಯಲ್ಲಿ ಸಾಗಿದ್ದ ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್, ಗುರುವಾರದ ವಹಿವಾಟಿನಲ್ಲಿ 621 ಅಂಶ ಇಳಿಕೆ ದಾಖಲಿಸಿತು. ಅಮೆರಿಕದ ಕೇಂದ್ರೀಯ ಬ್ಯಾಂಕ್ ಬಡ್ಡಿ ದರವನ್ನು ನಿರೀಕ್ಷೆಗಿಂತ ಮೊದಲೇ ಹೆಚ್ಚಿಸಲಿದೆ ಎಂದು ಸುದ್ದಿಯು ಸೂಚ್ಯಂಕದ ಇಳಿಕೆಗೆ ಒಂದು ಕಾರಣವಾಯಿತು.

ದಿನದ ಅಂತ್ಯಕ್ಕೆ ಸೆನ್ಸೆಕ್ಸ್ 59,601 ಅಂಶಗಳಲ್ಲಿ ವಹಿವಾಟು ಕೊನೆಗೊಳಿಸಿತು. ಅದೇ ರೀತಿ, ರಾಷ್ಟ್ರೀಯ ಷೇರುಪೇಟೆ ಸಂವೇದಿ ಸೂಚ್ಯಂಕ ನಿಫ್ಟಿ 179 ಅಂಶ ಇಳಿಕೆ ಕಂಡು 17,745 ಅಂಶಗಳಲ್ಲಿ ವಹಿವಾಟು ಕೊನೆಗೊಳಿಸಿತು.

'ಹೂಡಿಕೆದಾರರು ಕೋವಿಡ್ ಪ್ರಕರಣಗಳು ತೀವ್ರವಾಗಿ ಹೆಚ್ಚಳ ಆಗುತ್ತಿರುವುದನ್ನು, ಕೋವಿಡ್ ಹರಡುವುದನ್ನು ತಡೆಯಲು ನಿರ್ಬಂಧಗಳನ್ನು ಜಾರಿಗೆ ತರುತ್ತಿರುವುದನ್ನು ಗಮನಿಸುತ್ತ ಇದ್ದಾರೆ. ಮುಂದಿನ ದಿನಗಳಲ್ಲಿ ಷೇರು ಮಾರುಕಟ್ಟೆಗಳಲ್ಲಿ ಅಸ್ಥಿರತೆ ಹೆಚ್ಚಾಗಬಹುದು' ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ಬೆಲೆಯು ಪ್ರತಿ ಬ್ಯಾರೆಲ್‌ಗೆ 81 ಡಾಲರ್‌ಗೆ ಹೆಚ್ಚಳ ಆಗಿದೆ. ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು 4 ಪೈಸೆ ಇಳಿಕೆ ಆಗಿ, ₹ 74.42ಕ್ಕೆ ತಲುಪಿದೆ.

ಜೊಕೊವಿಚ್ 'ಕೋವಿಡ್ ಲಸಿಕೆ' ಪ್ರಕರಣಕ್ಕೆ ರಾಜಕೀಯ ತಿರುವು

ಜೊಕೊವಿಚ್ –ಎಎಫ್‌ಪಿ ಚಿತ್ರ

ಬೆಲ್‌ಗ್ರೇಡ್ (ಎಎಫ್‌ಪಿ): ಲಸಿಕೆ ಹಾಕಿಸಿಕೊಳ್ಳಲು ನಿರಾಕರಿಸಿದ ಟೆನಿಸ್ ಆಟಗಾರ ನೊವಾಕ್ ಜೊಕೊವಿಚ್ ಅವರಿಗೆ ಆಸ್ಟ್ರೇಲಿಯನ್ ಓಪನ್ ಟೂರ್ನಿಯಲ್ಲಿ ಆಡಲು ಅವಕಾಶ ನೀಡಿದ ಬೆನ್ನಲ್ಲೇ ಉಂಟಾದ ವಿವಾದವು ಈಗ ರಾಜಕೀಯ ಆರೋಪ–ಪ್ರತ್ಯಾರೋಪಗಳಿಗೂ ಕಾರಣವಾಗಿದೆ.

ಇದೇ 17ರಿಂದ ನಡೆಯಲಿರುವ ಆಸ್ಟ್ರೇಲಿಯನ್ ಓಪನ್ ಟೂರ್ನಿಯಲ್ಲಿ ಪಾಲ್ಗೊಳ್ಳುವವರು ಲಸಿಕೆ ಹಾಕಿಸಿಕೊಳ್ಳುವುದು ಕಡ್ಡಾಯ ಮಾಡಲಾಗಿತ್ತು. ಆದರೆ ಜೊಕೊವಿಚ್ ಇದಕ್ಕೆ ಒಪ್ಪಿರಲಿಲ್ಲ. ಆದ್ದರಿಂದ ಅವರು ಟೂರ್ನಿಯಲ್ಲಿ ಪಾಲ್ಗೊಳ್ಳುವುದು ಅನುಮಾನವಾಗಿತ್ತು.

ಆದರೆ ತಜ್ಞರನ್ನು ಒಳಗೊಂಡ ತಂಡವೊಂದರ ಶಿಫಾರಸಿನ ಮೇರೆಗೆ ಲಸಿಕೆ ಹಾಕಿಸಿಕೊಳ್ಳದೆಯೇ ಟೂರ್ನಿಯಲ್ಲಿ ಆಡಲು ಅವರಿಗೆ ಅವಕಾಶ ನೀಡಲಾಗಿತ್ತು. ಆದರೆ ಆಸ್ಟ್ರೇಲಿಯಾ ಸರ್ಕಾರ ಅವರ ವಿಸಾವನ್ನುಯ ತಡೆಹಿಡಿದು ಪ್ರವೇಶ ನಿರಾಕರಿಸಿತ್ತು. ಈ ಹಿನ್ನೆಲೆಯಲ್ಲಿ ನ್ಯಾಯಾಲಯದ ಮೆಟ್ಟಿಲೇರಲು ಜೊಕೊವಿಚ್ ಗುರುವಾರ ನಿರ್ಧರಿಸಿದ್ದರು.

ಈ ನಡುವೆ ಸರ್ಬಿಯಾ ಅಧ್ಯಕ್ಷ ಅಲೆಕ್ಸಾಂಡರ್ ವುಸಿಕ್ ಪ್ರತಿಕ್ರಿಯಿಸಿ ರಾಜಕೀಯ ಪ್ರೇರಿತ ದುರುದ್ದೇಶದ ಬಲಿಪಶು ಜೊಕೊವಿಚ್ ಎಂದು ಆರೋಪಿಸಿದ್ದಾರೆ. ಬೆಲ್‌ಗ್ರೇಡ್‌ನಲ್ಲಿ ಜೊಕೊವಿಚ್ ಅಭಿಮಾನಿಗಳು ಬೃಹತ್ ರ್‍ಯಾಲಿ ಸಂಘಟಿಸಿ ಪ್ರತಿಭಟನೆ ವ್ಯಕ್ತಪಡಿಸಿದ್ದಾರೆ. ಜೊಕೊವಿಚ್ ಅವರ ತಂದೆ ಇದಕ್ಕೆ ನೇತೃತ್ವ ನೀಡಿದ್ದರು. ಮೆಲ್ಬರ್ನ್ ವಿಮಾನ ನಿಲ್ದಾಣದಲ್ಲಿ ಬಂದಿಳಿದ ಜೊಕೊವಿಚ್ ಅವರನ್ನು ವಶಕ್ಕೆ ಪಡೆದುಕೊಂಡಿದ್ದ ಪೊಲೀಸರು ಜೊಕೊವಿಚ್ ಬಳಿ ಎರಡು ಡೋಸ್ ಲಸಿಕೆ ಹಾಕಿಸಿಕೊಂಡಿದ್ದಕ್ಕೆ ತಕ್ಕ ದಾಖಲೆಗಳು ಇರಲಿಲ್ಲ ಎಂದು ಪ್ರತಿಪಾದಿಸಿದ್ದಾರೆ.

ಕೈದಿಯಂತೆ ನೋಡಿಕೊಳ್ಳುತ್ತಿದ್ದಾರೆ: ತಮ್ಮ ಮಗನನ್ನು ಆಸ್ಟ್ರೇಲಿಯಾ ಸರ್ಕಾರ ಕೈದಿಯಂತೆ ನೋಡಿಕೊಳ್ಳುತ್ತಿದೆ. ಇದು ಸರಿಯಲ್ಲ ಎಂದು ಜೊಕೊವಿಚ್ ಅವರ ತಾಯಿ ದೂರಿದ್ದಾರೆ. 'ಜೊಕೊವಿಚ್‌ನನ್ನು ಇರಿಸಿರುವ ಜಾಗ ಸೂಕ್ತವಲ್ಲ. ಅದರಿಂದ ಆತನಿಗೂ ನಮಗೂ ಬೇಸರವಾಗಿದೆ' ಎಂದು ಅವರು ಹೇಳಿದ್ದಾರೆ.

ಈ ನಡುವೆ ಜೊಕೊವಿಚ್ ಅವರ ಪರವಾಗಿ ಮಾತನಾಡಿರುವ ಸ್ಪೇನ್‌ನ ರಫೆಲ್ ನಡಾಲ್ 'ಜೊಕೊವಿಚ್‌ಗೆ ನಿಯಮಗಳ ಬಗ್ಗೆ ಅರಿವಿದೆ. ಅವರಿಗೆ ಯಾವುದೇ ಸಮಸ್ಯೆ ಇಲ್ಲದೆ ಆಡುವುದು ಹೇಗೆ ಎಂದು ಗೊತ್ತು' ಎಂದಿದ್ದಾರೆ.

ಮಹಿಳೆಯರ ಏಕದಿನ ವಿಶ್ವಕಪ್ ಕ್ರಿಕೆಟ್ ಟೂರ್ನಿ: ಜೆಮಿಮಾಗೆ ಸ್ಥಾನ ಇಲ್ಲ

ಮಿಥಾಲಿ ಬಳಗದಲ್ಲಿ ಕರ್ನಾಟಕದ ರಾಜೇಶ್ವರಿ

ನವದೆಹಲಿ: ಅನುಭವಿ ಸ್ಪಿನ್ನರ್, ಕರ್ನಾಟಕದ ರಾಜೇಶ್ವರಿ ಗಾಯಕವಾಡ್ ಅವರು ಮಹಿಳೆಯರ ಏಕದಿನ ವಿಶ್ವಕಪ್ ಕ್ರಿಕೆಟ್ ಟೂರ್ನಿಗೆ ಪ್ರಕಟಿಸಿರುವ ಭಾರತ ತಂಡದಲ್ಲಿ ಸ್ಥಾನ ಗಳಿಸಿದ್ದಾರೆ. ತಂಡವನ್ನು ಮಿಥಾಲಿ ರಾಜ್ ಮುನ್ನಡೆಸಲಿದ್ದು ಹರ್ಮನ್‌ಪ್ರೀತ್ ಕೌರ್ ಉಪನಾಯಕಿಯಾಗಿರುವರು.

ಮುಂದಿನ ತಿಂಗಳಲ್ಲಿ ನ್ಯೂಜಿಲೆಂಡ್‌ನಲ್ಲಿ ನಡೆಯಲಿರುವ ಏಕದಿನ ಸರಣಿಗೂ ಇದೇ ತಂಡವನ್ನು ಉಳಿಸಿಕೊಳ್ಳಲಾಗಿದ್ದು ಅಲ್ಲಿ ನಡೆಯುವ ಟ್ವೆಂಟಿ20 ಸರಣಿಗೆ ಹರ್ಮನ್‌ಪ್ರೀತ್ ಕೌರ್ ನಾಯಕಿಯಾಗಿರುವ ಮತ್ತು ಸ್ಮೃತಿ ಮಂದಾನ ಉಪನಾಯಕಿಯಾಗಿರುವ ತಂಡವನ್ನು ಪ್ರಕಟಿಸಲಾಗಿದೆ. ಮಾರ್ಚ್ 4ರಿಂದ 13ರ ವರೆಗೆ ನ್ಯೂಜಿಲೆಂಡ್‌ನಲ್ಲಿ ವಿಶ್ವಕಪ್ ಟೂರ್ನಿ ನಡೆಯಲಿದ್ದು ಗುರುವಾರ ಪ್ರಕಟಿಸಿರುವ 15 ಮಂದಿ ಆಟಗಾರ್ತಿಯರ ತಂಡದಿಂದ ಅಗ್ರ

ರಾಜೇಶ್ವರಿ

ಕ್ರಮಾಂಕದ ಬ್ಯಾಟರ್ ಜೆಮಿಮಾ ರಾಡ್ರಿಗಸ್ ಮತ್ತು ವೇಗದ ಬೌಲರ್ ಶಿಖಾ ಪಾಂಡೆ ಅವರನ್ನು ಕೈಬಿಡಲಾಗಿದೆ.

ನ್ಯೂಜಿಲೆಂಡ್ ವಿರುದ್ಧದ 5 ಏಕದಿನ ಪಂದ್ಯಗಳ ಸರಣಿ ಫೆಬ್ರುವರಿ 11ರಂದು ಆರಂಭವಾಗಲಿದೆ. ಫೆಬ್ರವರಿ 9ರಂದು ಏಕೈಕ ಟ್ವೆಂಟಿ20 ಪಂದ್ಯ ನಡೆಯಲಿದೆ. ಈ ಪಂದ್ಯ ಹಾಗೂ ಮೊದಲ ಏಕದಿನ ಪಂದ್ಯ ನೇಪಿಯರ್‌ನಲ್ಲಿ ನಡೆಯಲಿದೆ. ನೆಲ್ಸನ್‌ನಲ್ಲಿ ಫೆಬ್ರುವರಿ 1ರಂದು ಮತ್ತು 16ರಂದು, ಕ್ವೀನ್ಸ್ ಟೌನ್‌ನಲ್ಲಿ ಫೆಬ್ರುವರಿ 22 ಹಾಗೂ 24ರಂದು ಉಳಿದ ಏಕದಿ ಪಂದ್ಯಗಳು ನಡೆಯಲಿವೆ.

ತಂಡಗಳು: ವಿಶ್ವಕಪ್ ಮತ್ತು ಏಕದಿನ ಸರಣಿಗೆ: ಮಿಥಾಲಿ ರಾಜ್ (ನಾಯಕಿ), ಹರ್ಮನ್‌ಪ್ರೀತ್ ಕೌರ್ (ಉಪನಾಯಕಿ), ಸ್ಮೃತಿ ಮಂದಾನ, ಶಫಾಲಿ ವರ್ಮಾ, ಯಾಸ್ತಿಕಾ ಭಾಟಿಯಾ, ದೀಪ್ತಿ ಶರ್ಮಾ, ರಿಚಾ ಘೋಷ್ (ವಿಕೆಟ್ ಕೀಪರ್), ಸ್ನೇಹ್ ರಾಣಾ, ಜೂಲನ್ ಗೋಸ್ವಾಮಿ, ಪೂಜಾ ವಸ್ತ್ರಕಾರ್, ಮೇಘನಾ ಸಿಂಗ್, ರೇಣುಕಾ ಸಿಂಗ್, ತಾನಿಯಾ ಭಾಟಿಯಾ (ವಿಕೆಟ್ ಕೀಪರ್), ರಾಜೇಶ್ವರಿ ಗಾಯಕವಾಡ್, ಪೂನಂ ಯಾದವ್; ಕಾಯ್ದಿರಿಸಿದ ಆಟಗಾರ್ತಿಯರು: ಸಬ್ಬಿನೇನಿ ಮೇಘನಾ, ಏಕ್ತಾ ಬಿಷ್ಠ್, ಸಿಮ್ರನ್ ದಿಲ್ ಬಹದ್ದೂರ್.

ನ್ಯೂಜಿಲೆಂಡ್ ಎದುರಿನ ಏಕೈಕ ಟ್ವೆಂಟಿ20ಗೆ: ಹರ್ಮನ್‌ಪ್ರೀತ್ ಕೌರ್ (ನಾಯಕಿ), ಸ್ಮೃತಿ ಮಂದಾನ (ಉಪನಾಯಕಿ), ಶಫಾಲಿ ವರ್ಮಾ, ಯಾಸ್ತಿಕಾ ಭಾಟಿಯಾ, ದೀಪ್ತಿ ಶರ್ಮಾ, ರಿಚಾ ಘೋಷ್ (ವಿಕೆಟ್ ಕೀಪರ್), ಸ್ನೇಹ್ ರಾಣಾ, ಪೂಜಾ ವಸ್ತ್ರಕಾರ್, ಮೇಘನಾ ಸಿಂಗ್, ರೇಣುಕಾ ಸಿಂಗ್, ತಾನಿಯಾ ಭಾಟಿಯಾ (ವಿಕೆಟ್ ಕೀಪರ್), ರಾಜೇಶ್ವರಿ ಗಾಯಕವಾಡ್, ಪೂನಂ ಯಾದವ್, ಏಕ್ತಾ ಬಿಷ್ಠ್, ಸಬ್ಬಿನೇನಿ ಮೇಘನಾ, ಸಿಮ್ರನ್ ದಿಲ್ ಬಹದೂರ್.

ಮಹಿಳೆಯರ ವಿಶ್ವಕಪ್‌ನಲ್ಲಿ ಭಾರತದ ವೇಳಾಪಟ್ಟಿ

ದಿನಾಂಕ	ಎದುರಾಳಿ	ಸ್ಥಳ
ಮಾ.6	ಪಾಕಿಸ್ತಾನ	ಬೇ ಓವಲ್
ಮಾ.10	ನ್ಯೂಜಿಲೆಂಡ್	ಹ್ಯಾಮಿಲ್ಟನ್
ಮಾ.12	ವೆಸ್ಟ್ ಇಂಡೀಸ್	ಹ್ಯಾಮಿಲ್ಟನ್
ಮಾ.16	ಇಂಗ್ಲೆಂಡ್	ತೌರಂಗ
ಮಾ.19	ಆಸ್ಟ್ರೇಲಿಯಾ	ಆಕ್ಲೆಂಡ್
ಮಾ.22	ಬಾಂಗ್ಲಾದೇಶ	ಹ್ಯಾಮಿಲ್ಟನ್
ಮಾ.27	ದಕ್ಷಿಣ ಆಫ್ರಿಕಾ	ಕ್ರೈಸ್ಟ್ ಚರ್ಚ್

ರೇಸ್‌ಗಳು ಮುಂದೂಡಿಕೆ

ಬೆಂಗಳೂರು: ಇದೇ 8 ಮತ್ತು 15ರಂದು ನಡೆಯಬೇಕಿದ್ದ ರೇಸ್‌ಗಳನ್ನು ಕ್ರಮವಾಗಿ 11 ಮತ್ತು 18ಕ್ಕೆ ಮುಂದೂಡಲಾಗಿದೆ. ಬೆಂಗಳೂರು ಟರ್ಫ್ ಕ್ಲಬ್ (ಬಿಟಿಸಿ) ಪ್ರಕಟಣೆಯಲ್ಲಿ ಈ ವಿಷಯವನ್ನು ತಿಳಿಸಿದೆ.

ಪೋಲ್‌ವಾಲ್ಟ್: ಸಿದ್ಧಾರ್ಥ ಕೊರಳಿಗೆ ಚಿನ್ನ

ಅಂತರ ವಿವಿ ಅಥ್ಲೆಟಿಕ್ ಕೂಟ: ಕೇರಳಕ್ಕೆ ಮೊದಲ ಕೂಟ ದಾಖಲೆ ಖುಷಿ

● ಮಹೇಶ್ ಎಸ್. ಕನ್ನೇಶ್ವರ

5 ಸಾವಿರ ಮೀಟರ್ಸ್ ಓಟದಲ್ಲಿ ಮೊದಲಿಗರಾಗಿ ಗುರಿ ಮುಟ್ಟಿದ ಕುರುಕ್ಷೇತ್ರ ವಿಶ್ವವಿದ್ಯಾಲಯದ ಪ್ರಿನ್ಸ್ ಓಡಿದ ಭಂಗಿ

ಮೂಡುಬಿದಿರೆ: ಕೇರಳದ ಕೋಟಯಂ ಮಹಾತ್ಮಗಾಂಧಿ ವಿಶ್ವವಿದ್ಯಾಲಯದ ಸಿದ್ಧಾರ್ಥ ಎ.ಕೆ. ಇಲ್ಲಿ ನಡೆಯುತ್ತಿರುವ ಅಖಿಲ ಭಾರತ ಅಂತರ ವಿಶ್ವವಿದ್ಯಾಲಯ ಅಥ್ಲೆಟಿಕ್ಸ್‌ನ ಪೋಲ್‌ವಾಲ್ಟ್‌ನಲ್ಲಿ ಕೂಟ ದಾಖಲೆ ಸ್ಥಾಪಿಸಿದರು.

ಮಂಗಳೂರು ವಿಶ್ವವಿದ್ಯಾಲಯ ಹಾಗೂ ಆಳ್ವಾಸ್ ಕಾಲೇಜು ಸಹಯೋಗದಲ್ಲಿ ಸ್ವರಾಜ್ ಮೈದಾನದಲ್ಲಿ ನಡೆಯುತ್ತಿರುವ ಕೂಟದ ಮೂರನೇ ದಿನವಾದ ಗುರುವಾರ ಸಿದ್ಧಾರ್ಥ ಎ.ಕೆ ಕ್ಯಾಲಿಕಟ್ ವಿವಿಯ ಜೆಸ್ಸನ್ ಕೆ. ಜಿ ಅವರ ಹೆಸರಿನಲ್ಲಿದ್ದ (4.91 ಮೀಟರ್) ದಾಖಲೆ ಮೀರಿ ನಿಂತರು. ಅವರು 4.92 ಮೀಟರ್ ಎತ್ತರ ಜಿಗಿದು ಚಿನ್ನಕ್ಕೆ ಮುತ್ತಿಟ್ಟರು. ಈ ಸ್ಪರ್ಧೆಯ ಎರಡನೇ ಸ್ಥಾನವೂ ಇದೇ ವಿವಿ ಪಾಲಾಯಿತು. ಗಾಡ್ವಿನ್ ದಾಮಿಯನ್ ಅವರು ವಿವಿಗೆ ಬೆಳ್ಳಿ ಗಳಿಸಿಕೊಟ್ಟರು. ಜಾನ್‌ಪುರದ ವೀರ್ ಬಹದ್ದೂರ್ ಸಿಂಗ್ ಪೂರ್ವಾಂಚಲ್ ವಿವಿಯ ಧೀರೇಂದ್ರ ಕುಮಾರ್ ಮೂರನೇ ಸ್ಥಾನ ಪಡೆದರು.

ಮೂರನೇ ದಿನ ಹರಿಯಾಣದ ಕುರುಕ್ಷೇತ್ರ ವಿಶ್ವವಿದ್ಯಾಲಯದ ಪ್ರಿನ್ಸ್ 5 ಸಾವಿರ ಮೀಟರ್ ಓಟದಲ್ಲಿ (14 ನಿಮಿಷ 5.48 ಸೆಕೆಂಡು) ದಾಖಲೆ ಮಾಡಿದರು. ಮಂಗಳೂರು ವಿವಿಯ ನರೇಂದ್ರ ಪ್ರತಾಪ್ ಅವರ ಹೆಸರಿನಲ್ಲಿ ಈ ದಾಖಲೆ ಇತ್ತು (14 ನಿಮಿಷ 17.77 ಸೆಕೆಂಡು). ಅಜಯ್ (ಲವ್ಲಿ ಪ್ರೊಫೆಷನಲ್ ವಿವಿ) ಹಾಗೂ ಲೋಕೇಶ್ ಚೌಧಾರ್ (ಮಹರ್ಷಿ ದಯಾನಂದ ವಿವಿ) ಕ್ರಮವಾಗಿ ಎರಡು ಹಾಗೂ ಮೂರನೇ ಸ್ಥಾನ ಗಳಿಸಿದರು.

ಫಲಿತಾಂಶಗಳು: ಪೋಲ್ ವಾಲ್ಟ್: ಸಿದ್ಧಾರ್ಥ್ ಎ.ಕೆ (ಕೋಟಯಂ ಮಹಾತ್ಮಗಾಂಧಿ ವಿಶ್ವವಿದ್ಯಾಲಯ)–1, ಗಾಡ್ವಿನ್ ದಾಮಿಯನ್ (ಮಹಾತ್ಮ ಗಾಂಧಿ ವಿವಿ, ಕೋಟಯಂ)–2, ಧಿರೇಂದ್ರ ಕುಮಾರ್ (ಜಾನ್‌ಪುರದ ವೀರ್ ಬಹದ್ದೂರ್ ಸಿಂಗ್ ಪೂರ್ವಾಂಚಲ್ ವಿವಿ)–3. 5000 ಮೀಟರ್ಸ್ ಓಟ: ಪ್ರಿನ್ಸ್ (ಕುರುಕ್ಷೇತ್ರ ವಿಶ್ವವಿದ್ಯಾಲಯ, ಹರಿಯಾಣ)–1, ಅಜಯ್ (ಲವ್ಲಿ ಪ್ರೊಫೆಷನಲ್ ವಿವಿ)–2, ಲೋಕೇಶ್ ಚೌಧಾರ್ (ಮಹರ್ಷಿ ದಯಾನಂದ ವಿವಿ)–3. 110 ಮೀಟರ್ ಹರ್ಡಲ್ಸ್: ಎಲ್. ಯಶ್‌ವಂತ್ ಕುಮಾರ್ (ಆಚಾರ್ಯ ನಾಗಾರ್ಜುನ ವಿವಿ)–1, ನಿಶಾಂತ್ ರಾಜ ಜಿ.(ಮದ್ರಾಸ್ ವಿವಿ)–2, ಮೊಹಮದ್ ಲಝಾನ್ (ಕೇರಳ ವಿವಿ)–3. ಕಾಲ: 14.32 ಸೆಕೆಂಡು; ಡಿಸ್ಕಸ್ ಥ್ರೋ: ವಿಕಾಸ್ (ಚೌಧರಿ ದೇವಿಲಾಲ್ ವಿವಿ)–1, ಅಭಿನವ್ (ಲವ್ಲಿ ಪ್ರೊಫೆಷನಲ್ ವಿವಿ)–2, ಭಾನು ಶರ್ಮಾ (ಮಂಗಳೂರು ವಿವಿ)–3. ಡೆಕಾಥ್ಲಾನ್: ಯಮನ್‌ದೀಪ್ ಶರ್ಮಾ (ಲವ್ಲಿ ಪ್ರೊಫೆಷನಲ್ ವಿವಿ)–1, ಸುನಿಲ್ ಕುಮಾರ್ (ಲವ್ಲಿ ಪ್ರೊಫೆಷನಲ್ ವಿವಿ)–2, ಸ್ಟ್ಯಾಲಿನ್ ಜೋಶ್(ತಮಿಳುನಾಡು ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿವಿ)–3.